
ನವಲಗುಂದ ತಾಲೂಕಿನ ಕೆರೆಗಳ ಅಧ್ಯಯನ

(ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)



ಸಂಶೋಧಕರು

ವಿಶಾಲ ಮ. ಪೋಳ

ಮಾರ್ಗದರ್ಶಕರು

ಡಾ. ಎಸ್. ವೈ. ಸೋಮಶೇಖರ್

ಸಹಾಯಕ ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ, ಕರ್ನಾಟಕ

೨೦೦೫

1213

ನವಲಗುಂದ ತಾಲೂಕಿನ ಕೆರೆಗಳ ಅಧ್ಯಯನ

(ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು
ವಿಶಾಲ ಮ. ಪೋಳ

ಮಾರ್ಗದರ್ಶಕರು
ಡಾ. ಎಸ್. ವೈ. ಸೋಮಶೇಖರ್
ಸಹಾಯಕ ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ಘೋಷಣಾ ಪತ್ರ

ನವಲಗುಂದ ತಾಲೂಕಿನ ಕೆರೆಗಳ ಅಧ್ಯಯನ ಎಂಬ **ಸಂಪ್ರಬಂಧವನ್ನು ಡಾ.ಎಸ್.ವೈ.ಸೋಮಶೇಖರ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ **ಎಂ.ಫಿಲ್** ಪದವಿಗಾಗಿ **ಕನ್ನಡ ವಿಶ್ವವಿದ್ಯಾಲಯಕ್ಕೆ** ಸಾದರಪಡಿಸುತ್ತಿದ್ದೇನೆ. ಈ ನಿಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟಗೊಳಿಸಿಲ್ಲ. ಇದು ನನ್ನ ಸ್ವತಂತ್ರವಾದ ಸಂಶೋಧನಾ ಅಧ್ಯಯನವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಂಶೋಧಕರು

(ವಿಶಾಲ ಮ. ಪೋಳ)
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ದಿನಾಂಕ: 31/07/2015
ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರ ಪ್ರಮಾಣ ಪತ್ರ

ನವಲಗುಂದ ತಾಲೂಕಿನ ಕೆರೆಗಳ ಅಧ್ಯಯನ ಎಂಬ **ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್** ಪದವಿಗಾಗಿ **ವಿಶಾಲ ಮ. ಪೋಳ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

(ಡಾ.ಎಸ್.ವೈ.ಸೋಮಶೇಖರ್)
ಸಹಾಯಕ ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ದಿನಾಂಕ: 31/07/2015
ಸ್ಥಳ : ವಿದ್ಯಾರಣ್ಯ

ಪರಿವಿಡಿ

ಪರಿವಿಡಿ

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಮಹತ್ವ

ಅಧ್ಯಾಯ-ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಮಹತ್ವ

ಪ್ರಸ್ತಾವನೆ:

"ಭಿಂಗಾರೇ ಹಿತ ರತನ ಸಪಲೆಯೇ ಸವ ರಠಿಕ ಭೂಜಕೆ ಪಾದೇ ವಂದಾಪಯತಿ [೧೧*] ಪಂಚಮೇ ಚ ದಾನೀ ವಸೇ ಮಂದರಾಜ ತಿವಸಸತ ಓಘಾಟಿತಂ ತನುಸುಲಿಯ ವಾಟಾ ಪನಾಡಿಂ ನಗರಂ ಪವೇಸತಿ ಸೋ...[೧*] ಅಭಿಸಿತೋ ಚ ಛಟೇವಸೇ ರಾಜಸೇಯಂ ಸಂದಂಸಯಂತೋ ಸವಕರವಣ"

ರಾಜಾ ಖಾರವೇಲನು ತನ್ನ ಆಳ್ವಿಕೆಯ ಐದನೇಯ ವರ್ಷದಲ್ಲಿ ಮೂರು ನೂರು ವರ್ಷಗಳಷ್ಟು ಹಿಂದೆ ಮಗಧ ರಾಜನಿಂದ ನಿರ್ಮಿಸಿದ "ತನುಸುಲಿ" ಎಂಬ ಕೆರೆಯ ಕಾಲುವೆಯ ಮೂಲಕ ಕಳಿಂಗ ನಗರಕ್ಕೆ ನೀರು ಬರುವಂತೆ ಮಾಡಿರುವ ಉಲ್ಲೇಖ ಈ ಶಾಸನದಿಂದ ತಿಳಿದುಬರುತ್ತದೆ.

ಮಾನವನ ಸಂಸ್ಕೃತಿಯ ಬೆಳವಣಿಗೆಯಲ್ಲಿ ನೀರು ಮಹತ್ತದ ಪ್ರಭಾವವನ್ನು ಬೀರಿದೆ. ನೀರು ಪಂಚಭೂತಗಳಲ್ಲಿ ಒಂದಾಗಿದ್ದು, ಭೂಮಿಯ ಮೇಲಿನ ಸಕಲ ಚರಾಚರ ಜೀವಿಗಳಿಗೆ ನೀರು ಮುಖ್ಯವಾದ ಮೂಲಾಧಾರವಾಗಿದೆ. ಒಂದು ವೇಳೆ ಕೆಲ ಸಮಯದ ವರೆಗೆ ಆಹಾರವಿಲ್ಲದೆ ಜೀವಿ ಬದುಕಬಹುದು ಆದರೆ ನೀರಿಲ್ಲದೆ ಯಾವುದೇ ಜೀವಿಯು ಬದುಕುವುದು ಅಸಾಧ್ಯವಾಗಿದೆ. ಆದ್ದರಿಂದ ನೀರು ಎಲ್ಲ ಜೀವಿಗಳಿಗೂ ಜೀವ ಪೋಷಕವಾಗಿದೆ. ಹಾಗೆಯೇ ಮಾನವನ ವಿಕಾಸದಲ್ಲಿಯೂ ನೀರಿನ ಪಾತ್ರ ಅತೀ ಮುಖ್ಯವಾಗಿದೆ. ಮಾನವನ ಆರಂಭಿಕ ಅಂದರೆ ನಾಗರಿಕತೆಗಳ ಇತಿಹಾಸವನ್ನು ನೋಡಿದಾಗ ಭೂಮಿಯ ಮೇಲಿನ ಪ್ರತಿಯೊಂದು ನಾಗರಿಕತೆಯು ನದಿಯ ಬಯಲಿನಲ್ಲಿ ಬೆಳೆದು ಬಂದಿರುವುದನ್ನು ಕಂಡರೆ ಮಾನವ ಜೀವನದಲ್ಲಿ ನೀರಿನ ಮಹತ್ವ ಕಂಡು ಬರುತ್ತದೆ. ಮಾನವನ ಪ್ರಾಗಿತಿಹಾಸ ಕಾಲದಲ್ಲಿ ಗುಹಾವಾಸಿಯಾಗಿದ್ದು, ಅಲೆಮಾರಿಯಾಗಿ ಬೇಟೆಯ ಮೂಲಕ ತನ್ನ ಆಹಾರವನ್ನು ನೀಗಿಸಿಕೊಳ್ಳುತ್ತಾ ಬದುಕಿದ್ದ, ಆತನ ಎಲ್ಲಾ ಬಗೆಯ ಚಟುವಟಿಕೆಗಳು ನದಿ-ಕೊಳ್ಳ ಕೆರೆ ತೊರೆಗಳ ಮತ್ತು ಗುಹೆ ಕಂದಕಗಳ ಪರಿಸರದಲ್ಲಿ ಕೇಂದ್ರೀಕೃತವಾದಿದ್ದವು.

ಆರಂಭಿಕ ಕಾಲದಲ್ಲಿ ಅಲೆಮಾರಿಯಾಗಿದ್ದ ಆದಿ ಮಾನವ ಸಹಸ್ರಾರು ಶತಮಾನಗಳ ಕಾಲ ಧೀರ್ಘಾವಧಿಯಲ್ಲಿ ನಾಗರಿಕ ಬದುಕಿನತ್ತ ಹೆಜ್ಜೆ ಹಾಕುತ್ತಾ ಬದುಕನ್ನು ನಿರ್ಮಿಸಿಕೊಂಡಿದ್ದಾನೆ. ಇಂತಹ ಮಹತ್ವದ ಕಾಲಘಟ್ಟದಲ್ಲಿ ಆತನ ಬದುಕಿನ ಶೈಲಿಯಲ್ಲಿ ಮಹತ್ವದ ಬದಲಾವಣೆಗಳಾಗಿವೆ. ಅಲೆಮಾರಿತನಕ್ಕೆ ವಿದಾಯ ಹೇಳಿದ ಮಾನವನು ತನ್ನ ಜೀವನದ ನಿರ್ವಹಣೆಗೆ ಕೃಷಿಯನ್ನು ಆಯ್ದುಕೊಂಡನು. ಕೃಷಿಯು ಪ್ರಧಾನ ಕಾರ್ಯ ಚಟುವಟಿಕೆಯಾಗಿ ಅಂದಿನಿಂದಲೂ ಉಳಿದುಕೊಂಡು ಬಂದಿದೆ. ಜನ ಸಾಮಾನ್ಯರ ಕಲ್ಯಾಣವು ವ್ಯವಸಾಯದ ಉತ್ಪನ್ನಗಳ ಮೇಲೆ ಆಧಾರವಾಗಿದೆ. ಈ ಸಮೃದ್ಧವಾದ ವ್ಯವಸಾಯದ ಉತ್ಪನ್ನಗಳಿಗಾಗಿ ನಾಗರಿಕ ಸಮಾಜವು ಮಳೆಯನ್ನು ಪ್ರಮುಖವಾಗಿ ಅವಲಂಭಿಸಿದೆ. ಆದರೆ ಮಳೆಯಲ್ಲಿನ ವ್ಯತ್ಯಾಸದಿಂದ ಒಂದಿಲ್ಲೊಂದು ಭಾಗವು ಅನಾವೃಷ್ಟಿ ಮತ್ತು ಅತಿವೃಷ್ಟಿಗಳಿಗೆ ಬಲಿಯಾಗಿ ಅದರಿಂದ ವ್ಯವಸಾಯ ಉತ್ಪನ್ನಗಳು ಕುಂಠಿತಗೊಂಡು ಜನರು ಸಂಕಷ್ಟಗಳಿಗೆ ಈಡಾಗುತ್ತಿದ್ದ ನಿದರ್ಶನಗಳು ಹೆಚ್ಚಾಗಿ ಕಂಡು ಬಂದಿವೆ. ಇಂತಹ ಸಂದರ್ಭದಲ್ಲಿ ಮಾನವ ಕಂಡುಕೊಂಡ ಮಹತ್ವದ ಆವಿಷ್ಕಾರ ಎಂದರೆ ನೀರಿನ ಸಂಗ್ರಹಣೆ ಮತ್ತು ನೀರಾವರಿ ವ್ಯವಸ್ಥೆ. ಇದು ನೀರಿನ ನಿರಂತರ ಅಂದರೆ ಎಲ್ಲಾ ಕಾಲದಲ್ಲಿಯೂ ಪೂರೈಕೆಯಾಗಿದ್ದು ಬೆಳೆಗಳನ್ನು ಕಾಪಾಡಲು ಸಾದ್ಯ ಮಾಡಿತಲ್ಲದೆ ಅದರ ಉತ್ಪನ್ನಗಳನ್ನು ನಿಶ್ಚಿತವಾಗಿ ಪಡೆಯಬಹುದೆಂಬ ಬರವಸೆಯನ್ನು ಹುಟ್ಟಿಸಿತು. ಈ ಸುರಕ್ಷತೆಯ ಭಾವನೆ ಮನುಷ್ಯನ ಆತ್ಮ ವಿಶ್ವಾಸವನ್ನು ಹೆಚ್ಚಿಸಿತು. ಆದ್ದರಿಂದ ನಮ್ಮ ದೇಶವನ್ನು ಒಳಗೊಂಡಂತೆ ಜಗತ್ತಿನ ಎಲ್ಲ ಕಡೆಯು ಮೊದಲಿನಿಂದಲೂ ಜನ ನೀರಿನ ಸಂಗ್ರಹಣೆ ಮತ್ತು ಪೂರೈಕೆಗೆ ಅನೇಕ ಕ್ರಮಗಳನ್ನು ಕೈಗೊಂಡಿರುವುದು ಕಂಡು ಬರುತ್ತದೆ. ಅದಕ್ಕಾಗಿ ಮಾನವ ಮೊದಲಿನಿಂದಲೂ ಕೆರೆ, ಕುಂಟೆ, ಕಟ್ಟೆ, ಕಾಲುವೆ, ಹೊಂಡ ಮತ್ತು ಬಾವಿ ಮುಂತಾದವುಗಳನ್ನು ನಿರ್ಮಾಣ ಮಾಡಿಕೊಂಡಿರುವುದನ್ನು ಕಾಣುತ್ತೇವೆ. ಇವು ಮಾನವನ ನಿಶ್ಚಿತವಾದ ಬದಿಕಿನ ಅಗತ್ಯತೆಗಳನ್ನು ಪೂರೈಸುವ ಪ್ರಾಥಮಿಕ ಮೂಲಗಳಾಗಿವೆ.

ಜನರಿಗೆ, ಪ್ರಾಣಿಗಳಿಗೆ ಮತ್ತು ವ್ಯವಸಾಯಕ್ಕೆ ನೀರಿನ ವ್ಯವಸ್ಥೆಯನ್ನು ಒದಗಿಸುವುದು ಒಂದು ಸಾಮಾಜಿಕ ಜವಾಬ್ದಾರಿ ಆಗಿರುತ್ತದೆಂದು ಪ್ರಾಚೀನ ಕಾಲದಲ್ಲಿಯ ಛೇದಿ ಮನೆತನದ ಕಾರವೇಲನ ಹಾಥೀಗುಂಪಾ ಶಾಸನದ ಆರನೇಯ ಸಾಲಿನ ಉಲ್ಲೇಖದಿಂದ ತಿಳಿಯಲಾಗುವದು.

ಇದರಿಂದ ಮುಖ್ಯವಾಗಿ ತಿಳಿದು ಬರುವುದೆನೆಂದರೆ ಭಾರತದಲ್ಲಿ ನೀರಾವರಿ ವ್ಯವಸ್ಥೆಗಾಗಿ ಕೆರೆಗಳನ್ನು ಕಟ್ಟಿಸುವುದು, ಬಾವಿಗಳನ್ನು ತೊಡಿಸುವುದು ಅತೀ ಮುಖ್ಯವಾದ ಕೆಲಸವಾಗಿತ್ತೆಂದು ಸ್ಪಷ್ಟವಾಗುತ್ತದೆ. ಅಲ್ಲದೆ ಇಂತಹ ಕಾರ್ಯಗಳಿಗೆ ಸಂಬಂಧಿಸಿದ ವ್ಯಕ್ತಿಯನ್ನು ಅವನು ಮಾಡಿದ ಕಾರ್ಯಗಳಿಂದ ಸಮಾಜದಲ್ಲಿ ಅವನನ್ನು ವಿಶಿಷ್ಟವಾಗಿ ಬಿಂಬಿಸುವ ಪ್ರಯತ್ನದ ಫಲಿತಾಂಶಗಳು ಆಗಿವೆ.

ಭಾರತದಲ್ಲಿ ಪ್ರಾಗಿತಿಹಾಸಿಕ ಕಾಲದಿಂದಲೂ ಕರೆರೆಗಳು ಕಂಡು ಬರುತ್ತವೆಯಾದರೂ ಅವುಗಳ ಸಂಖ್ಯೆ ದಕ್ಷಿಣ ಭಾರತದಲ್ಲಿ ಹೆಚ್ಚಾಗಿವೆ. ಉತ್ತರ ಭಾತರದಲ್ಲಿ ಹಿಮಾಲಯದಲ್ಲಿ ಹುಟ್ಟುವ ಅನೇಕ ಜೀವ ನದಿಗಳಿದ್ದು ಅವು ವರ್ಷವಿಡಿ ಹರಿಯುವ ನದಿಗಳಾಗಿವೆ. ಅವು ಮಳೆಗಾಲದಲ್ಲಿ ಮಳೆ ನೀರಿನಿಂದ ತುಂಬಿ ಹರಿದರೆ ಬೇಸಿಗೆ ಕಾಲದಲ್ಲಿ ಹಿಮಾಲಯದ ಹಿಮ ಕರಗಿದ ನೀರಿನಿಂದ ತುಂಬಿ ಹರಿಯುತ್ತವೆ. ಆದ್ದರಿಂದ ಅಲ್ಲಿ ನೀರಿನ ಸಂಗ್ರಹದ ಅವಶ್ಯಕತೆ ಕಂಡು ಬರುವುದಿಲ್ಲ ಆದರೆ ದಕ್ಷಿಣ ಭಾರತದ ನದಿಗಳು ಮಳೆಯನ್ನೇ ಅವಲಂಬಿಸಿರುವ ನದಿಗಳಾಗಿದ್ದು ಅಲ್ಲದೆ ದಕ್ಷಿಣ ಭಾರತದಲ್ಲಿ ಒಣ ಪ್ರದೇಶವೇ ಹೆಚ್ಚಾಗಿದ್ದು ಇಲ್ಲಿ ನೀರಿನ ಸಂಗ್ರಹಣೆಯ ಅವಶ್ಯಕತೆ ಹೆಚ್ಚಾಗಿರುವುದರಿಂದ ಇಲ್ಲಿ ಜಲಾಶಯಗಳು, ಕೆರೆಗಳು, ಕಟ್ಟೆಗಳು ಮತ್ತು ಬಾವಿಗಳು ಹೆಚ್ಚಾಗಿ ಕಂಡು ಬರುತ್ತವೆ.

ಕರ್ನಾಟಕವು ಬಹುಪಾಲು ಬೆಟ್ಟಗಳಿಂದ ಮತ್ತು ಏರು ತಗ್ಗುಗಳಿಂದ ಕೂಡಿದ ಸಂಪದ್ಭರಿತ ನಾಡಾಗಿದ್ದು ಇದು ಉತ್ತರದಲ್ಲಿ ಮಹಾರಾಷ್ಟ್ರ, ದಕ್ಷಿಣದಲ್ಲಿ ಕೇರಳ ಮತ್ತು ತಮಿಳುನಾಡು, ಪೂರ್ವದಲ್ಲಿ ಆಂದ್ರಪ್ರದೇಶ ಮತ್ತು ಪಶ್ಚಿಮದಲ್ಲಿ ಗೋವಾ ಮತ್ತು ಅರಬ್ಬೀ ಸಮುದ್ರದಿಂದ ಆವೃತವಾಗಿದ್ದು, ಈ ನಾಡಿನಲ್ಲಿ ಹಲವಾರು ನದಿಗಳು ಸಂಗಮವಾಗಿರುವುದು ಕಂಡು ಬರುತ್ತದೆ. ಉದಾ: ಕೂಡಲ ಸಂಗಮವು ಮಲಪ್ರಭಾ, ಘಟಪ್ರಭಾ ಮತ್ತು ಕೃಷ್ಣಾ ನದಿಗಳ ಒಂದು ಸಂಗಮವಾಗಿದೆ. ಇಲ್ಲಿಯ ಕೃಷಿಯು ಈ ನದಿಗಳ ಮೇಲೆ ಹೆಚ್ಚು ಅವಲಂಬನೆ ಹೊಂದಿದೆ. ಕರ್ನಾಟಕದ ಇತಿಹಾಸದ ಪುಟಗಳಲ್ಲಿ ಪ್ರಾಚೀನ ಕಾಲದಿಂದಲೂ ಕೆರೆಗಳ ನಿರ್ಮಾಣದ ಪ್ರಕ್ರಿಯೆಯನ್ನು ಕಾಣಬಹುದು. ಇದರಿಂದ ಕರ್ನಾಟಕದ ರಾಜ್ಯಾದ್ಯಂತ ಇಂದಿಗೂ ಕೃಷಿಗೆ ಅನುಕೂಲವಾಗುವಂತೆ ಸಾವಿರಾರು ಕೆರೆಗಳು ಈ ನಾಡಿನ ಉದ್ದಗಲಕ್ಕೂ ಕಾಣಬಹುದು.

ಧಾರವಾಡ ಜಿಲ್ಲೆಯ ಐದು ತಾಲೂಕುಗಳನ್ನು ಒಳಗೊಂಡಿದ್ದು ಅದರಲ್ಲಿ ಜಿಲ್ಲೆಯ ಪೂರ್ವ ಭಾಗದಲ್ಲಿರುವ ನವಲಗುಂದ ತಾಲೂಕು ಕೂಡಾ ಒಂದಾಗಿದೆ. ಇದು ಉತ್ತರದಲ್ಲಿ ಬೆಳಗಾವಿ, ಪೂರ್ವದಲ್ಲಿ ಬಾಗಲಕೋಟೆ ಮತ್ತು ದಕ್ಷಿಣದಲ್ಲಿ ಗದಗ ಜಿಲ್ಲೆಗಳಿಂದ ಸುತ್ತುವರೆದಿದೆ. ಇಲ್ಲಿ ಅನೇಕ ರಾಜ ಮನೆತನಗಳು, ಮಂತ್ರಿ, ಮಾಂಡಲಿಕರು, ಸಾಮಂತರು, ದೇಸಾಯಿಗಳು ಮತ್ತು ಕುಲಕರ್ಣಿಗಳು ಆಳ್ವಿಕೆ ನಡೆಸಿರುವುದು ಕಂಡು ಬರುತ್ತದೆ. ಅಲ್ಲದೆ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿಯು ಮಹತ್ವದ ಪಾತ್ರವನ್ನು ವಹಿಸಿದೆ. ಇವುಗಳಿಗೆ ಆಧಾರವಾಗಿ ಅವರ ಕಾಲದ ಕೆರೆಗಳು, ದೇವಾಲಯಗಳು, ಶಾಸನಗಳು ಮತ್ತು ವೀರಗಲ್ಲುಗಳು ಇಂದಿಗೂ ಲಭ್ಯವಿವೆ. ನವಲಗುಂದವು ಕಪ್ಪು ಮಣ್ಣು ಹೊಂದಿದ್ದು ಇಲ್ಲಿ ಅನೇಕ ಬೆಳೆಗಳನ್ನು ಬೆಳೆಯುತ್ತಾರೆ.

ಈ ತಾಲೂಕಿನಲ್ಲಿ ಯಾವುದೇ ಜೀವ ನದಿಗಳು ಕಂಡು ಬರುವುದಿಲ್ಲ ಆದರೆ ಇದರ ಉತ್ತರದಲ್ಲಿ ರುವ ಬೆಳಗಾವಿ ಜಿಲ್ಲೆಯಲ್ಲಿ ಹರಿಯುವ ಮಲಪ್ರಭಾ ನದಿಯ ಬಲದಂಡೆ ಕಾಲುವೆಯ ಉಪಯೋಗ ಈ ತಾಲೂಕು ಪಡೆದುಕೊಳ್ಳುತ್ತದೆ. ಆದರೆ ಅದು ಕುಡಿಯಲು ಮಾತ್ರ. ಆದರೂ ಬೇಸಿಗೆಯಲ್ಲಿ ಕಾಲುವೆಯು ಬತ್ತಿ ಹೋಗುವುದರಿಂದ ನೀರಾವರಿ ಸೌಲಭ್ಯದ ದೃಷ್ಟಿಯಿಂದ ಅದು ಪ್ರಯೋಜನವಾಗಿಲ್ಲ. ಆದ್ದರಿಂದ ಈ ಪರಿಸರದಲ್ಲಿ ಸಣ್ಣ ಮತ್ತು ದೊಡ್ಡ ಕೆರೆಗಳಿದ್ದು, ಕೆರೆಗಳು ಅಲ್ಲಿಯ ಜೀವಾಳುಗಳಾಗಿವೆ ಎಂದರೆ ತಪ್ಪಾಗಲಾರದು. ಆ ಕೆರೆಗಳನ್ನು ಅವಲಂಬಿಸಿದ ಅಲ್ಲಿಯ ಜನರು, ಆಹಾರ ದಾನ್ಯಗಳು ಮತ್ತು ಕೆಲವು ಆರ್ಥಿಕ ಬೆಳೆಗಳನ್ನು ಬೆಳೆಯುತ್ತಾರೆ. ಒಟ್ಟಾರೆಯಾಗಿ ಈ ಪ್ರದೇಶವು ಐತಿಹಾಸಿಕ ಮತ್ತು ಸಾಂಸ್ಕ್ರಕವಾಗಿ ಮಹತ್ವದ ಸ್ಥಾನವನ್ನು ಪಡೆದಿದೆ. ಇಲ್ಲಿರುವ ಕೆರೆಗಳು ಈ ಪರಿಸರದ ಸಾಂಸ್ಕ್ರತಿಕ ಬದುಕನ್ನು ಕಟ್ಟಿಕೊಡುವಲ್ಲಿ ವಿವಿಧ ರೀತಿಯಲ್ಲಿ ಸಹಾಯಕವಾಗಿವೆ. ಇಲ್ಲಿರುವ ಕೆರೆಗಳ ವ್ಯವಸ್ಥಿತ ಅಧ್ಯಯನವನ್ನು ಪ್ರಸ್ತುತ "ನವಲಗುಂದ ತಾಲೂಕಿನ ಕೆರೆಗಳ ಅಧ್ಯಯನ" ಎಂಬ ಶೀರ್ಷಿಕೆ ಅಡಿಯಲ್ಲಿ ಸಮಗ್ರ ಹಾಗೂ ಸುಕ್ಷ್ಮವಾದ ಅಧ್ಯಯನಕ್ಕೆ ಒಳಪಡಿಸಿ ಅವುಗಳ ಮಹತ್ವವನ್ನು ತಿಳಿದುಕೊಳ್ಳುವದು ಈ ಪ್ರಬಂಧದ ಪ್ರಮುಖ ಉದ್ಧೇಶವಾಗಿದೆ.

ಅಧ್ಯಯನದ ಉದ್ಧೇಶ:

ಇತಿಹಾಸವು ಮೂಲಾಧಾರಗಳನ್ನು ಅವಲಂಬಿಸಿದೆ ಆದ್ದರಿಂದ ಇತಿಹಾಸವನ್ನು ನಾವು ಅಧ್ಯಯನ ಮಾಡಬೇಕಾದರೆ ಹಲವಾರು ಆಧಾರಗಳು ಇತಿಹಾಸದ ಅಧ್ಯಯನಕ್ಕೆ ಸಹಾಯಕವಾಗಿ ನಿಲ್ಲುತ್ತದೆ. ಹಾಗೆಯೇ ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಕೆರೆಗಳ ಇತಿಹಾಸದ ಅಧ್ಯಯನ ಹಾಗು ಕೆರೆಗಳ ಮಹತ್ವ ತಿಳಿಯಲು ಲವಾರು ಶಾಸನಗಳು ಸಹಾಯಕವಾಗಿವೆ. ಈ ಶಾಸನಗಳ ಆಧಾರದ ಹಿನ್ನಲೆಯಲ್ಲಿ ಕೆರೆಗಳ ಕುರಿತಾದ ಹೊಸಹೊಸ ಸಂಗತಿಗಳನ್ನು ಬೆಳಕಿಗೆ ತರುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಡಲಾಗಿದೆ. ನವಲಗುಂದ ತಾಲೂಕಿನಲ್ಲಿ ಸಣ್ಣ ಮತ್ತು ದೊಡ್ಡ ಕೆರೆಗಳ ಪ್ರಮಾಣ ಸಾಕಷ್ಟಿದ್ದು ಅವುಗಲ್ಲಿ_ಹೆಚ್ಚಿನ ಕೆರೆಗಳು ಪರಿಣಾಮರಹಿತವಾಗಿವೆ. ಅವುಗಳ ಸಂರಕ್ಷಣೆ ಸಾಂಸ್ಕೃತಿಕ ವಿಧಾನಗಳು ಶಿಥೀಲವಾಗಿರುವುದೇ ಇದಕ್ಕೆ ಕಾರಣ. ಇತ್ತೀಚಿಗೆ ಸರ್ಕಾರಗಳು ಸ್ಥಳೀಯ ಆಡಳಿತ ವ್ಯವಸ್ಥೆ ಹಾಗೂ ಸಂಘ ಸಂಸ್ಥೆಗಳನ್ನು ಸ್ಥಾಪಿಸುವುದರ ಮೂಲಕ ಜಲಸಂವರ್ಧನ ಯೋಜನೆಗಳು ಹಾಗೂ ಹಳೇ ಕೆರೆಗಳ ಜೀರ್ಣೋದ್ಧಾರ ಮಾಡುತ್ತಿವೆ. ಆದರೆ ಇಂತ ಪ್ರಯತ್ನಗಳು ಸಾಕಷ್ಟು ಪರಿಣಾಮಕಾರಿಯಾಗಿ ಜಾರಿಗೆ ಬರದೇ ಇರುವದು ದುಖದ ಸಂಗತಿಯಾಗಿದೆ. ಈ ಮೊದಲು ಕೆರೆಗಳ ನಿರ್ಮಾಣ ಮತ್ತು

ಮೇಲುಸ್ತುವಾರಿಯು ಗ್ರಾಮಗಳಲ್ಲಿರುವ ಸಮಿತಿಗಳ ಮೇಲ್ವಿಚಾರಣೆಯಲ್ಲಿ ಕಾರ್ಯಾಗತಗೊಳ್ಳುತ್ತಿತ್ತು. ಆದ್ದರಿಂದ ಎಲ್ಲರಿಗೂ ಬೇಕಾದಷ್ಟು ನೀರನ್ನು ಗ್ರಾಮ ಸಮೂದಾಯದವರು ತಮ್ಮ ಅಧಿಕಾರಿಗಳ ಮೂಲಕ ಸಮರ್ಪಕವಾಗಿ ಹಂಚುತ್ತಿದ್ದರು ಆದರೆ ಈಗ ಅಲ್ಲಿಯು ಸಂಪೂರ್ಣ ಬದಲಾವಣೆಗಳಾಗಿ ನೀರಿನ ಹಂಚಿಕೆಯಲ್ಲಿ ಗೊಂದಲಗಳು ಉಂಟಾಗುತ್ತಿವೆ. ಅಲ್ಲದೆ ಜನರಿಂದ ನಿರ್ಲಕ್ಷಕ್ಕೊಳಗಾದ ಕೆರೆ ಕಟ್ಟೆಗಳು ಈಗ ಬರುಡಾಗಿ ಹೋಗಿವೆ. ಕೆಲವು ಹಳ್ಳಿಗಳಲ್ಲಿ ಹಿಂದಿನ ಕೆರೆಗಳು ಇಂದಿನ ಆಟದ ಮೈದಾನಗಳಾಗಿ ಅಥವಾ ವಾರದ ಸಂತೆಗಳಾಗಿ ಬದಲಾವಣೆಯಾಗಿದ್ದು ಕಂಡು ಬರುತ್ತದೆ. ಅದಕ್ಕಾಗಿ ಗ್ರಾಮಗಳ ಜೀವನಾಡಿಗಳಾಗಿದ್ದ ಕೆರೆಗಳ ಕುರಿತು ಅಧ್ಯಯನ ಮಾಡುವದು ಅವಶ್ಯಕವಾಗಿದೆ. ಈ ತಾಲೂಕಿನ ಕೆರೆಗಳ ವ್ಯವಸ್ಥೆ, ಇಂದಿನ ಅವುಗಳ ಸ್ಥಿತಿಗತಿಗಳು, ಕೆರೆಗಳ ರಚನೆ, ಜೀರ್ಣೋದ್ಧಾರ, ಕೆರೆ ನಿರ್ವಹಣೆ ಮುಂತಾದವುಗಳನ್ನು ಆ ಕಾಲದ ಶಾಸನಾಧಾರಗಳಿಂದ ಹಾಗೂ ಸಾಹಿತ್ಯ, ಮೌಖಿಕ ಮಾಹಿತಿಗಳಿಂದ ತಿಳಿಯುವದು ಈ ಅಧ್ಯಯನದ ಉದ್ಧೇಶವಾಗಿದೆ. ಕೆರೆಗಳನ್ನು ಏಕೆ ನಿರ್ಮಾಣ ಮಾಡಲಾಯಿತು, ಕೆರಗಳ ಪ್ರಾಮುಖ್ಯತೆ ಹಾಗೂ ಅವುಗಳ ಉಪಯೋಗವನ್ನು ತಿಳಿಯಲು ಈ ಅಧ್ಯಯನ ಸಹಾಯಕವಾಗಿದೆ. ಕೆರೆಗಳ ಭಾಗಗಳಾದ ಏರಿ ನಿರ್ಮಾಣ, ತೊಂಬುಗಳ ರಚನೆ, ಕಾಲುವೆಗಳು ಮತ್ತು ಕೋಡಿಗಳ ವ್ಯವಸ್ಥೆಯನ್ನು ತಿಳಿಯುವ ಒಂದು ಪ್ರಯತ್ನ ಈ ಅಧ್ಯಯನದಲ್ಲಿ ಮಾಎಲಾಗಿದೆ. ಅಲ್ಲದೆ ಕೆರೆಗಳು ಯಾವ ರೀತಿಯಲ್ಲಿ ಸಹಕಾರಿಯಾಗಿವೆ ಅಂದರೆ ಕೃಷಿ ನೀರಾವರಿಗೆ, ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗಳಿಗೆ ಹಾಗೂ ಮೀನುಗಾರಿಕೆಗೂ ಎಂಬ ಸಂಗತಿಯನ್ನು ಈ ಅಧ್ಯಯನದಿಂದ ತಿಳಿಯಬಹುದು. ಹಾಗೆಯೇ ಕೆರೆಗಳ ನಿರ್ಮಾಣ ಮಾಡಿದ ನಂತರ ಅದರ ಉದ್ಧೇಶ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ ಎಂಬುದನ್ನು ಈ ಅಧ್ಯಯನದಿಂದ ತಿಳಿಯಬಹುದು.

ಅಲ್ಲದೆ ಇಂದಿನ ಆಧುನಿಕ ತಂತ್ರಜ್ಞಾನದ ಮೂಲಕ ಕೆರೆಗಳನ್ನು ಉಪಯೋಗಿಸಿ ಅವು ಜನರ ಜೀವನಕ್ಕೆ ಎಷ್ಟು ಸಹಕಾರಿಯಾಗಿವೆ ಎಂಬುದನ್ನು ತಿಳಿಯಬಹುದು. ಇಂದು ಮನುಷ್ಯನ ಜೀವನದಲ್ಲಿ ನೀರು ಅತೀ ಮುಖ್ಯವಾಗಿರುವುದರಿಂದ ಅದನ್ನು ಹೆಚ್ಚಿನ ಪ್ರಮಾಣದಲ್ಲಿ ಶೇಖರಿಸುವದು ಅನಿವಾರ್ಯವಾಗಿದೆ. ಆದರೆ ಸಣ್ಣ ಸಣ್ಣ ನದಿಗಳಿಗೆ ಹಳ್ಳಗಳಿಗೆ ಆಣೆಕಟ್ಟೆಗಳನ್ನು ಕಟ್ಟುವದು ಅಸಾಧ್ಯವಾಗಿದೆ. ಆದರೆ ಅಲ್ಲಿ ಕೆರೆಗಳನ್ನು ಕಟ್ಟಿ ನೀರನ್ನು ಸಂಗ್ರಹ ಮಾಡಬಹುದು. ಇಂದು ವೈಜ್ಞಾನಿಕತೆ ಬೆಳೆದಂತೆ ಕೈಗಾರಿಕೆಗಳ ಹೆಚ್ಚಳದಿಂದ ಸಮಿದ್ರಗಳು, ನದಿಗಳು ಮಲಿನಗೊಳ್ಳುತ್ತಿವೆ. ಆದರೆ ಕೆರೆಗಳು ಇಂತಹ ಪರಿಸ್ಥಿತಿಗೆ ಬರದೆ ಜನಜೀವನಕ್ಕೆ ಯಾವುದೇ ಹಾನಿಯನ್ನುಂಟು ಮಾಡುವುದಿಲ್ಲ ಎಂಬ ಅಂಶವನ್ನು ಬೆಳಕಿಗೆ ತರುವದು ಈ ಅಧ್ಯಯನದ

ಉದ್ದೇಶವಾಗಿದೆ. ಭಾರತವು ಹಳ್ಳಿಗಳ ನಾಡಾಗಿದ್ದು ಹಾಗೆಯೇ ಈ ತಾಲೂಕು ಸಹಿತ ಹಳ್ಳಿಗಳಿಂದ ಕೂಡಿದ ತಾಲೂಕಾಗಿದ್ದು ಅವರಿಗೆ ಕೆರೆಗಳ ಮಹತ್ವ ಮತ್ತು ಇಂದಿನ ಆರ್ಥಿಕ ಕ್ಷೇತ್ರದಲ್ಲಿ ಕೆರೆಗಳ ಪಾತ್ರವನ್ನು ಜನರಿಗೆ ಮನವರಿಕೆ ಮಾಡುವದು ಈ ಪ್ರಬಂಧದ ಉದ್ಧೇಶವಾಗಿದೆ.

ಅಧ್ಯಯನದ ವ್ಯಾಪ್ತಿ:

ಒಂದು ಅಧ್ಯಯನ ಯಶಸ್ವಿಯಾಗಬೇಕಾದರೆ ಅದಕ್ಕೆ ತನ್ನದೇ ಆದ ಒಂದು ಚೌಕಟ್ಟು ಇರುತ್ತದೆ ಅಂದರೆ ವ್ಯಾಪ್ತಿ ಇರುವದು ಬಹುಮುಖ್ಯ. ವ್ಯಾಪ್ತಿ ಇಲ್ಲದ ಅಧ್ಯಯನವು ಗೊಂದಲದಿಂದ ಕೂಡಿರುತ್ತದೆ. ವ್ಯಾಪ್ತಿ ಇಲ್ಲದ ಅಧ್ಯಯನವು ಮಿತಿಯಿಲ್ಲದೆ ಅಧ್ಯಯನದ ದಾರಿ ತಪ್ಪಿಸುತ್ತದೆ. ಅಲ್ಲದೆ ಅದು ಒಂದು ಪರಿಪತ್ವವಾದ ಅಧ್ಯಯನವಾಗುವುದಿಲ್ಲ. ಆದ್ದರಿಂದ ಯಾವುದೇ ಅಧ್ಯಯನ ಮಾಡಬೇಕಾದರೆ ಅದಕ್ಕೆ ನಿರ್ದಿಷ್ಟವಾದ ವ್ಯಾಪ್ತಿ ಇರುವದು ಬಹು ಮುಖ್ಯವಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ನವಲಗುಂದ ತಾಲೂಕಿನ ಕೆರೆಗಳನ್ನು ಕುರಿತು ಅಧ್ಯಯನ ಮಾಡಲಾಗಿದ್ದು, ಈ ಪ್ರದೇಶದ ಭೌಗೋಳಿಕತೆಯು ಕೆರೆಗಳ ಅಧ್ಯಯನದಲ್ಲಿ ಎಷ್ಟರ ಮಟ್ಟಿಗೆ ಸಹಾಯಕವಾಗಿದೆ ಎಂಬ ಹಿನ್ನೆಲೆಯಲ್ಲಿ ಇದರ ವ್ಯಾಪ್ತಿಯನ್ನು ನಿರ್ಧಾರಪಡಿಸಲಾಗಿದೆ. ಈ ಪ್ರದೇಶವು ನೀರಾವರಿಯ ಜೊತೆಗೆ ಜನರ ಉಪಯೋಗಕ್ಕಾಗಿ ಬಹಳ ಹೊಂದಿನಿಂದಲೂ ಕೆರೆಗಳನ್ನು ಅವಲಂಬಿಸಿತ್ತು. ಈ ತಾಲೂಕಿನ ವ್ಯಾಪ್ತಿಯಲ್ಲಿ ಸುಮಾರು ೬೦ ದೊಡ್ಡ ಕೆರೆಗಳಿದ್ದು (ಗ್ರಾಮ ಪಂಚಾಯತಿಯ ಮಾಹಿತಿಯ ಪ್ರಕಾರ) ಈ ಅಧ್ಯಯನದ ದೃಷ್ಟಿಯಿಂದ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಪ್ರಮುಖ ಶಾಸನಗಳಲ್ಲಿ ಉಲ್ಲೇಖವಾಗಿರುವ ಕೆರೆಗಳ ಅಧ್ಯಯನಕ್ಕೆ ಸೀಮಿತಗೊಳಿಸಲಾಗಿದೆ.

ನವಲಗುಂದ ತಾಲೂಕಿನ ಕೆಲವು ಕೆರೆಗಳು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದರೆ ಹೆಚ್ಚಿನ ಕೆರೆಗಳು ದೇಸಾಯಿ, ಕುಲಕರ್ಣಿಯವರ ಕಾಲದಲ್ಲಿ ನಿರ್ಮಾಣವಾಗಿವೆ. ಈಗಲೂ ಅಲ್ಲಿ ಯಾವುದೇ ನೀರಿನ ಮೂಲ ಇಲ್ಲದಿರುವುದರಿಂದ ಇತ್ತೀಚಿಗೆ ಸರ್ಕಾರದ ಸಹಾಯದಿಂದಲೂ ಕೆಲವು ಕೆರೆಗಳನ್ನು ನಿರ್ಮಿಸಲಾಗಿದೆ. ಅಂತಹ ಕೆರೆಗಳನ್ನು ಸಹ ಪ್ರಸ್ತುತ ಅಧ್ಯಯನದಲ್ಲಿ ಸಾಂದರ್ಭಿಕವಾಗಿ ಪರಿಗಣಿಸಲಾಗಿದೆ. ಈ ಅಧ್ಯಯನದ ವ್ಯಾಪ್ತಿ ಕೇವಲ ಕೆರೆಗಳ ನಿರ್ಮಾಣ ನಿರ್ವಹಣೆಗೆ ಮಾತ್ರ ಸೀಮಿತವಾಗಿರದೆ ಕುಡುಯುವ ನೀರು ಕೃಷಿ ನೀರಿನ ಬಳಕೆ ಹಾಗೂ ಕೆರೆಗಳಿಗೆ ಸಂಬಂಧಿಸಿದ ನಂಬಿಕೆ ಮತ್ತು ಆಚರಣೆಗಳನ್ನು ಅಲ್ಲದೆ ಆ ಕೆರೆಗಳ ಹೆಸರಿನ ಹಿನ್ನೆಲೆಯನ್ನು ತಿಳಿಯುವ ಪ್ರಯತ್ನವನ್ನು ಸಹ ಈ ಅಧ್ಯಯನದಲ್ಲಿ ಮಾಡಲಾಗುವುದು.

ಈ ಹಿಂದೆ ನಡೆದಿರುವ ಅಧ್ಯಯನದ ಸಮೀಕ್ಷೆ :

- ಧಾರವಾಡ ಜಿಲ್ಲಾ ಗೇಜಿಟೀಯರ್
- ಜಯಮ್ಮ ಎಂಬುವರು ಬರೆದಿರುವ "ಧಾರವಾಡ ಜಿಲ್ಲೆಯ ಪುರಾತತ್ವ" ಎಂಬ ಪ್ರಬಂಧ
- ಎಂ. ಎಂ. ಕಲಬುರ್ಗಿಯವರು ಬರೆದಿರುವ ಧಾರವಾಡ ಜಿಲ್ಲೆಯ ಶಾಸನ ಸೂಚಿ
- ಕರ್ನಾಟಕ ಸರ್ಕಾರ ಹೊರಡಿಸಿರುವ ಧಾರವಾಡ ಜಿಲ್ಲೆಯ ಅಂಕಿ ಅಂಶಗಳ ಕಿರುನೋಟ

ನವಲಗುಂದ ತಾಲೂಕಿಗೆ ಸಂಬಂಧಿಸಿದಂತೆ ಅನೇಕ ಬಿಡಿ ಲೇಖನಗಳು ಪ್ರಕಟವಾಗಿವೆ. ಸೂರ್ಯನಾಥ ಕಾಮತ್‌ರವರು ಬರೆದಿರುವ ಧಾರವಾಡ ಗೇಜಿಟೀಯರ್‌ದಲ್ಲಿ ಧಾರವಾಡ ಜಿಲ್ಲೆಯಲ್ಲಿ ಬರುವ ನವಲಗುಂದ ತಾಲೂಕು ಎಂಬ ಸಂಕ್ಷೀಪ್ತ ವಿವರಣೆಯನ್ನು ನೀಡಿದ್ದಾರೆ. ಅದರ ಮೂಲಕ ನವಲಗುಂದ ತಾಲೂಕಿನ ಮೇರೆಯನ್ನು ತಿಳಿಯಬಹುದು. ಅಲ್ಲದೆ ಅಲ್ಲಿಯ ವಾತಾವರಣ ಮತ್ತು ಅಲ್ಲಿ ಬೆಳೆಯುವ ಪ್ರಮುಖ ಬೆಳೆಗಳ ಬಗ್ಗೆ ತಿಳಿಯಲಾಗುವದು.

೨೦೦೮ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಜಯಮ್ಮ ಎಂಬುವರು "ಧಾರವಾಡ ಜಿಲ್ಲೆಯ ಪುರಾತತ್ವ" ಎಂಬ ಮಹಾ ಪ್ರಬಂಧವನ್ನು ಮಂಡಿಸಿದ್ದಾರೆ. ಅದರಲ್ಲಿ ನವಲಗುಂದ ತಾಲೂಕಿನಲ್ಲರುವ ಹಳೆಯ ದೇವಾಲಯಗಳ ವಿವರಣೆಯನ್ನು ಕಂಡುಕೊಳ್ಳಲಾಗುವುದು. ಅದರ ಮೂಲಕ ಪ್ರಾಚೀನ ಕೆರೆಗಳ ಹೆಸರುಗಳು ತಿಳಿದುಕೊಳ್ಳಲಾಗುವುದು.

೨೦೧೩-೧೪ ರ ಅವಧಿಯಲ್ಲಿ ಅಲ್ಲಿಯ ತಾಲೂಕ ಪಂಚಾಯತ್ ಮತ್ತು ಕರ್ನಾಟಕ ಸರ್ಕಾರದ ಸಂಯೋಗದಲ್ಲಿ ಆ ತಾಲೂಕಿನ ಕೆರೆಗಳ ವಿವರ ಪಟ್ಟಿಯನ್ನು ತಯಾರಿಸಲಾಗಿದ್ದು ಅದರಲ್ಲಿ ಕೆರೆಗಳಿಗೆ ನೀರಿನ ಮೂಲ ಮತ್ತು ಈಗ ಹೊಸದಾಗಿ ಸರ್ಕಾರದ ಸಹಾಯದಿಂದ ನಿರ್ಮಾಣ ಮಾಡಿದ ಕೆರೆಗಳ ವಿವರವನ್ನು ಅಧ್ಯಯನ ಮಾಡಲಾಗುವುದು.

೨೦೧೩-೧೪ ರ ಧಾರವಾಡ ಜಿಲ್ಲೆಯ ಸಾಂಖಿಕ ಅಧಿಕಾರಿಗಳು ಹೊರಡಿಸಿರುವ "ಧಾರವಾಡ ಜಿಲ್ಲೆಯ ಅಂಕಿ-ಅಂಶಗಳ ಒಂದು ನೋಟ" ಎಂಬ ಪುಸ್ತಕದಲ್ಲಿ ನವಲಗುಂದ ತಾಲೂಕಿನಲ್ಲಿಯ ಜನಸಂಖ್ಯೆ, ಸ್ತ್ರೀ-ಪುರುಷರ ಸಂಖ್ಯೆ, ಲಿಂಗಾಣುಪಾತ, ಶಿಕ್ಷಣ ಮುಂತಾದ ವಿಷಯಗಳನ್ನು ಅಧ್ಯಯನ ಮಾಡಲಾಗುವುದು.

ಅಧ್ಯಯನದ ವಿಧಾನ ಮತ್ತು ಮಹತ್ವ :

ನವಲಗುಂದ ತಾಲೂಕಿನ ಕೆರೆಗಳನ್ನು ಕುರಿತು ಅಧ್ಯಯನವು ಪ್ರಮುಖವಾಗಿ ಕ್ಷೇತ್ರ ಆಧಾರಿತವಾಗಿದೆ. ಇದರ ಬಗ್ಗೆ ಇದುವರೆಗೂ ವಡೆದಿರುವ ಅಧ್ಯಯನಗಳನ್ನು ಗಮನದಲ್ಲಿ

ಇಟ್ಟುಕೊಂಡು ಅಧ್ಯಯನದ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿನ ಕೆರಗಳನ್ನು ಕ್ಷೇತ್ರ ಕಾರ್ಯದ ಮೂಲಕ ಅವುಗಳ ಕುರಿತಾದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಕೆರಗಳಗೆ ಸಂಬಂಧಿಸಿದ ಭೌತಿಕ ರಚನೆಗಳಾದ ಏರಿ, ತೊಂಬು, ಕೊಡಿ ಮತ್ತು ಕಾಲುವೆಗಳ ಛಾಯಾಚಿತ್ರಗಳನ್ನು ಸಂಗ್ರಹಿಸಲಾಗಿದೆ. ಅಲ್ಲದೆ ಅವುಗಳ ರಚನೆಯಲ್ಲಿ ಬಳಕೆಯಾಗಿರುವ ತಂತ್ರ–ವಿಧಾನಗಳನ್ನು ವಿವರವಾಗಿ ಸಂಗ್ರಹಿಸಲಾಗಿದೆ. ಕೆರೆಗಳಗೆ ಸಂಬಂಧಿಸಿದ ಮೌಖಿಕ ವಿವರಗಳನ್ನು ವ್ಯಕ್ತಿಗಳನ್ನು ಭೇಟಿ ಮಾಡಿ ವಿಷಯವನ್ನು ಸಂಗ್ರಹಿಸಲಾಗಿದೆ. ಕೆರೆಗಳ ಪರಿಸರದಲ್ಲಿನ ಹಾಗೂ ಈಗಾಗಲೇ ಪ್ರಕಟಗೊಂಡಿರುವ ಶಾಸನಗಳನ್ನು ಹಾಗೂ ಅಲ್ಲಿರುವ ದೇವಾಲಯಗಳನ್ನು ಅಧ್ಯಯನಕ್ಕೆ ಅನುಕೂಲವಾಗುವಂತೆ ಅವುಗಳ ಮಾಹಿತಿಯನ್ನು ಅಳವಡಿಸಿಕೊಳ್ಳಲಾಗಿದೆ.

ಕೆರೆಗಳ ಬಗ್ಗೆ ನೀರಾವರಿ ಇಲಾಖೆ ನೀಡಿದ ದಾಖಲೆಗಳು ಹಾಗೂ ಕೃಷಿ ಇಲಾಖೆಯಿಂದ ಬೆಳೆಗಳಿಗೆ ಸಂಬಂಧಿಸಿದ ವರದಿಗಳನ್ನು ಸಂಗ್ರಹಿಸಿ ಬಳಸಿಕೊಳ್ಳಲಾಗಿದೆ ಹಾಗೂ ಅಧ್ಯಯನಕ್ಕೆ ಪೂರಕವಾಗಿರುವ ಗ್ರಂಥಗಳಿಂದಲೂ ಮಾಹಿತಿ ಪಡೆಯಲಾಗಿದೆ. ಗ್ರಂಥಾಲಯಗಳಲ್ಲಿ ಅಧ್ಯಯನಕ್ಕೆ ಅಗತ್ಯವಾದ ಮಾಹಿತಿಯನ್ನು ದಾಖಲಿಸಿಕೊಂಡು ನಂತರ ವರ್ಗೀಕರಿಸಿ ವಿಷಯಗಳನ್ನು ವಿಶ್ಲೇಷಿಸಿ ಸಂಬಂಧಪಟ್ಟ ಅಧ್ಯಯಗಳಲ್ಲಿ ಅಳವಡಿಸಿಕೊಂಡು ವಸ್ತುನಿಷ್ಟವಾಗಿ ಈ ಸಂಪ್ರಬಂಧವನ್ನು ಸಿದ್ಧಪಡಿಸಲಾಗಿದೆ. ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಧಾನಗಳ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಬಂಧವನ್ನು ಸಿದ್ಧಪಡಿಸುವ ಪ್ರಯತ್ನ ಮಾಡಲಾಗಿದೆ.

ಇತಿಹಾಸವು ನಾವು ಅಧ್ಯಯನ ಮಾಡಬೇಕಾದರೆ ಹಲವಾರು ಆಧಾರಗಳು ಇತಿಹಾಸದ ಅಧ್ಯಯನಕ್ಕೆ ಸಹಾಯಕವಾಗಿ ನಿಲ್ಲುತ್ತದೆ. ಹಾಗೆಯೇ ಪ್ರಸ್ತುತ ಪ್ರಬಂಧವು ನವಲಗುಂದ ತಾಲೂಕಿನ ಇತಿಹಾಸ ರಚಿಸುವಲ್ಲಿ ಪ್ರಮುಖ ಮೂಲಾಧಾರವಾಗಿ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ. ಪ್ರಸ್ತುತ "ನವಲಗುಂದ ತಾಲೂಕಿನ ಕೆರೆಗಳ ಅಧ್ಯಯನ" ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಐದು ಅಧ್ಯಾಯಗಳನ್ನಾಗಿ ವಿಭಾಗಿಸಿಕೊಳ್ಳಲಾಗಿದೆ.

ಮೊದಲನೆಯ ಅಧ್ಯಯದಲ್ಲಿ ಪ್ರಸ್ತಾವನೆ ಅಧ್ಯಯನದ ಉದ್ದೇಶ ಹಾಗೂ ವ್ಯಾಪ್ತಿಗಳನ್ನು ಈಗಾಗಲೇ ನಡೆದಿರುವ ಅಧ್ಯಯನದ ಸಮೀಕ್ಷೆ ಮತ್ತು ವಿಧಾನಗಳ ಬಗ್ಗೆ ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ನವಲಗುಂದ ತಾಲೂಕಿನ ಭೌಗೋಳಿಕ ಪರಿಚಯ ಹಾಗೂ ಅದರ ಚಾರಿತ್ರಿಕ ಹಿನ್ನೆಲೆಯನ್ನು ಪ್ರಸ್ತಾಪಿಸಲಾಗಿದೆ. ಈ ಭೌಗೋಳಿಕ ಪರಿಚಯದಲ್ಲಿ ತಾಲೂಕಿನ ವಿಸ್ತೀರ್ಣ ಅದರ ನೆರೆಹೊರೆಯ ಪ್ರದೇಶಗಳು, ಬೆಟ್ಟಗುಡ್ಡಗಳು, ಮಳೆ, ಹವಾಗುಣ, ಮಣ್ಣಿನ

ವಿಧಗಳು, ಜಲ ಸಂಪನ್ಮೂಲಗಳು, ಖನಿಜ ಸಂಪನ್ಮೂಲಗಳು, ಅರಣ್ಯ ಸಂಪತ್ತು, ಜನಸಂಖ್ಯೆ, ಜಾತಿ, ಲಿಂಗಾನಿಪಾತ, ಶಿಕ್ಷಣ ಮತ್ತು ಕೃಷಿ ಬೆಳೆಗಳ ಬಗ್ಗೆ ವಿವರಿಸಲಾಗುವುದು. ಅಲ್ಲದೆ ಇತಿಹಾಸದಲ್ಲಿ ಆ ತಾಲೂಕಿನ ಮಹತ್ವವನ್ನು ಮತ್ತು ಅಲ್ಲಿ ಆಳ್ವಿಕೆ ಮಾಡಿದ ಮನೆತನಗಳ ಬಗ್ಗೆ ಅವರ ಕಾಲದಲ್ಲಿ ನಿರ್ಮಾಣವಾದ ಕೆರೆಗಳ ಬಗ್ಗೆ ತಿಳಿಯಲಾಗುವುದು.

ಮೂರನೆಯ ಅಧ್ಯಾಯದಲ್ಲಿ ಕೆರೆಗಳಿಗೆ ಸಂಬಂಧಿಸಿದ ಕೆಲವು ಮುಖ್ಯ ಭಾಗಗಳಾದ ವಡ್ಡುಗಳು, ತಳ ವಿನ್ಯಾಸ, ಕಾಲುವೆಗಳು, ಕೊಡಿಗಳು, ಕೆರೆಯ ನಿರ್ವಹಣೆಯ ಬಗ್ಗೆ ವಿವರಿಸಲಾಗುವುದು. ಅಲ್ಲದೆ ಕೆರಗಳ ನೀರಿನ ಸರಬರಾಜಿನ ಬಗ್ಗೆ ಚರ್ಚಿಸಲಾಗುವುದು.

ನಾಲ್ಕನೆಯ ಅಧ್ಯಾಯದಲ್ಲಿ ಕೆರೆಗಳಿಗೆ ಸಂಬಂಧಿಸಿದ ನಂಬಿಕೆ ಮತ್ತು ಆಚರಣೆಗಳ ಬಗ್ಗೆ ಪ್ರಸ್ತಾಪಿಸಲಾಗುವುದು.

ಐದನೆಯ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಕಂಡಿಕೊಂಡ ಫಲಿತಾಂಶಗಳನ್ನು ಮತ್ತು ನನ್ನ ಅನಿಸಿಕೆಗಳನ್ನು ವಿಶ್ಲೇಷಣಾತ್ಮಕವಾಗಿ ವಿವರಿಸಲಾಗುವುದು.

ಅನುಬಂಧದಲ್ಲಿ ಗ್ರಂಥಸೂಚಿ, ಪದಕೋಶ, ವೃಕ್ಷಗಳ ವಿವರಗಳಿದ್ದು ಅಧ್ಯಯನಕ್ಕೆ ಸಂಬಂಧಿಸಿದ ನಕ್ಷೆಗಳು, ಛಾಯಾಚಿತ್ರಗಳನ್ನು ಅವಶ್ಯಕತೆಯ ಹಿನ್ನೆಲೆಯಲ್ಲಿ ಅಳವಡಿಸಿಕೊಳ್ಳಲಾಗುವುದು.

ಅಧ್ಯಾಯ – ಎರಡು

ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

ಅಧ್ಯಾಯ–ಎರಡು

ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನಲೆ

ಯಾವುದೇ ಒಂದು ಪ್ರದೇಶದ ವಿವರಗಳನ್ನು ತಿಳಿದುಕೊಳ್ಳಲು ಆಯಾ ಪ್ರದೇಶದಲ್ಲಿರುವ ನೈಸರ್ಗಿಕ ವಿವರಗಳ ಪ್ರಾಥಮಿಕ ಅರಿವು ಇರುವುದು ಮುಖ್ಯವೆನಿಸುತ್ತದೆ. ಇಂತಹ ತಿಳುವಳಿಕೆಯಿಂದ ನಿರ್ದಿಷ್ಟಪಡಿಸಿದ ಪ್ರದೇಶದ ವಿವರಗಳನ್ನು ತಿಳಿದುಕೊಳ್ಳಬಹುದಾಗಿದೆ. ಆದ್ದರಿಂದ ಇತಿಹಾಸ ಕಟ್ಟಿಕೊಡುವಲ್ಲಿ ಭೌಗೋಳಿಕ ಅಂಶಗಳು ಬಹುಮುಖ್ಯ ಸಾಮಗ್ರಿಗಳಾಗಿ ಪರಿಗಣಿತವಾಗುತ್ತವೆ. ಅಲ್ಲದೇ ಆಯಾ ಪ್ರದೇಶದ ಬೌತಿಕ ವಿಚಾರಗಳು ಆ ಪ್ರದೇಶದಲ್ಲಿರುವ ಜನಜೀವನ ಮತ್ತು ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಡುವಲ್ಲಿ ಹೇಗೆ ಸಹಕಾರಿಯಾಗಿವೆ ಎಂಬುವದನ್ನು ತಿಳಿಯಬಹುದಾಗಿದೆ. ಸ್ಥೂಲವಾಗಿ ವಿವೇಚಿಸುವುದಾದರೆ ಒಂದು ನಿರ್ದಿಷ್ಟಪಡಿಸಿದ ಭೌತಿಕ ಮೇರೆಗಳನ್ನು ಹಾಗೂ ಅಲ್ಲಿರುವ ನದಿ–ಕೊಳ್ಳಗಳು, ಬೆಟ್ಟಗುಡ್ಡಗಳು, ಎತ್ತರ–ತಗ್ಗುಗಳು, ಗಿಡ–ಮರಗಳು, ಪ್ರಾಣಿ–ಪಕ್ಷಿಗಳು ಹಾಗೂ ಖನಿಜ ಸಂಪತ್ತುನ್ನು ಒಳಗೊಂಡಿರುವ ವಿವರಗಳನ್ನು ತಿಳಿಯುವದರ ಮೂಲಕ ಇತಿಹಾಸವನ್ನು ಇನ್ನೂ ಗಟ್ಟಿಯಾಗಿ ಕಟ್ಟಿಕೊಡಬಹುದಾಗಿದೆ.

ಒಂದು ಪ್ರದೇಶ ಅಭಿವೃದ್ಧಿ ಹೊಂದಲು ಅಥವಾ ಹೊಂದದೇ ಇರಲು ಅಲ್ಲಿನ ಭೌಗೋಳಿಕ ಅಂಶಗಳು ತುಂಬಾ ಪ್ರಭಾವ ಬೀರುತ್ತವೆ. ಆಯಾ ಪ್ರದೇಶದ ಜನರ ಜೀವನವನ್ನು ರೂಪಿಸುವಲ್ಲಿ ಬೌಗೋಳಿಕ ಪರಿಸರದ ಪಾತ್ರ ಪ್ರಮುಖವಾಗಿದೆ. ಪ್ರಾಚೀನ ನಾಗರಿಕತೆಗಳ ಉಗಮ ಮತ್ತು ವಿಕಾಸ ನದಿ ದಂಡೆಗಳ ಮೇಲೆ ಆಗಿರುವುದನ್ನು ಗಮನಿಸಿದಾದ ಭೌಗೋಳಿಕ ಅಂಶಗಳ ಪ್ರಾಮುಖ್ಯತೆಯನ್ನು ತಿಳಿಯಬಹುದು.

ಒಂದು ಪ್ರದೇಶದಲ್ಲಿ ಮಾನವನು ನೆಲೆ ನಿಲ್ಲಲು ಆ ಪ್ರದೇಶದಲ್ಲಿ ಹುಟ್ಟಿ ಹರಿಯುವ ನದಿಗಳು ತೀರ ಪ್ರದೇಶ ಪರ್ವತಶ್ರೇಣಿ, ಭೂಗರ್ಭ ಸಂಪತ್ತು, ಅರಣ್ಯ ಸಂಪತ್ತು, ಹವಾಗುಣ, ಉಷ್ಣಾಂಶ, ರೇಖಾಂಶ ಮತ್ತು ಮಣ್ಣಿನ ರಚನೆ ಮುಂತಾದ ಭೌಗೋಳಿಕ ಅಂಶಗಳು ಕಾರಣವಾಗಿವೆ. ಈ ಹಿನ್ನಲೆಯಲ್ಲಿ ಆಯಾ ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿಯನ್ನು ತಿಳಿಯಲು ಭೌಗೋಳಿಕ ಅಂಶಗಳು ತುಂಬಾ ಸಹಕಾರಿಯಾಗಿವೆಯಂದು ತಿಳಿಯಬಹುದಾಗಿದೆ.

ನವಲಗುಂದ ತಾಲೂಕಿನ ಕೆರೆಗಳ ಅಧ್ಯಯನಕ್ಕೆ ಹೋಗುವ ಮೊದಲ ಈ ಪ್ರದೇಶದ ಭೌಗೋಳಿಕ ಲಕ್ಷಣಗಳು ಯಾವ ರೀತಿ ಪ್ರಭಾವ ಬೀರಿವೆ ಎಂದು ತಿಳಿದುಕೊಳ್ಳುವದು

ಅಗತ್ಯವಾಗಿದೆ. ಕರ್ನಾಟಕದ ಪಶ್ಚಿಮ ದಿಕ್ಕಿನಲ್ಲಿರುವ ಧಾರವಾಡ ಜಿಲ್ಲೆಯು ಅನೇಕ ರೀತಿಯಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. ಶೈಕ್ಷಣಿಕ ಕೇಂದ್ರವಾದ ಧಾರವಾಡ ಜಿಲ್ಲೆಯು ಪ್ರಸಿದ್ಧ ಐತಿಹಾಸಿಕ ಸ್ಥಳಗಳು, ಕೋಟೆಗಳು, ಗುಡಿಗೋಪುರಗಳನ್ನು ಒಳಗೊಂಡಿದೆ.

ನವಲಗುಂದವು ಧಾರವಾಡ ಜಿಲ್ಲೆಯ ೫ ತಾಲೂಕು ಕೇಂದ್ರಗಳಲ್ಲಿ ಒಂದಾಗಿದ್ದು, ೬೦ ಗ್ರಾಮಗಳಿಂದ ಕೂಡಿದೆ. ಧಾರವಾಡಕ್ಕೆ ೪೨ ಕಿ.ಮೀ ದೂರದಲ್ಲಿದೆ. ಹುಬ್ಬಳ್ಳಿ-ಬಿಜಾಪುರ ಹೆದ್ದಾರಿಯು ನವಲಗುಂದದ ಮೇಲೆ ಹಾದು ಹೋಗುತ್ತದೆ. ಹುಬ್ಬಳ್ಳಿಗೆ ೩೬ ಕಿ.ಮೀ ದೂರದಲ್ಲಿದೆ. ಅಣ್ಣಿಗೇರಿ ಮತ್ತು ಮೊರಬ ಎಂಬವು ಹೋಬಳಿ ಕೇಂದ್ರಗಳಾಗಿವೆ. ಬೆಣ್ಣೆಹಳ್ಳ ಎಂಬುವುದು ಈ ತಾಲೂಕಿನ ಮೂಲಕ ಹರಿದು ಹೋಗುವ ಪ್ರಮುಖ ಜಲಾಶಯವಾಗಿದೆ. ತುಪರಿಹಳ್ಳ, ಹಂದಿಗನಹಳ್ಳ, ಪಿಂಜರಹಳ್ಳ ಎಂಬುವು ಬೆಣ್ಣಿಹಳ್ಳದ ಉಪತೊರೆಗಳಾಗಿದ್ದು, ಕೊನೆಗೆ ಎಲ್ಲವೂ ಮಲಪ್ರಭಾ ನದಿಯನ್ನು ಸೇರಿಕೊಳ್ಳುತ್ತವೆ. ಭತ್ತ, ಗೋಧಿ, ಜೋಳ, ನೆಲೆಗಡಲೆ, ಹತ್ತಿ ಮುಂತಾದವು ಪ್ರಮುಖ ಬೆಳೆಗಳಾಗಿವೆ. ಪಶುಪಾಲನೆಗೆ ಉತ್ತೇಜನವಿದೆ. ಅಲ್ಲಿನ ದನಕರುಗಳು ಉತ್ತಮ ಜಾತಿಯವೆಂದು ಪರಿಗಣಿತವಾಗಿವೆ. ಬಟ್ಟೆ ನೇಯುವುದು, ಮರದ ತೊಟ್ಟಿಲು, ಬೊಂಬೆಗಳನ್ನು ತಯಾರಿಸುವುದು ಮುಂತಾದವು ಪ್ರಮುಖ ಗೃಹ ಕೈಗಾರಿಕೆಗಳಾಗಿವೆ. ನವಲಗುಂದದ ಪುರಸಭೆ ೧೮೭೦ರಷ್ಟು ಪ್ರಾಚೀನವಾದದು.

ಮೇಲ್ಮೈ ಲಕ್ಷಣ :

ಮೊದಲಿನಿಂದಲೂ ನವಲಗುಂದ ತಾಲೂಕಿನಲ್ಲಿ ಕುಡಿಯುವ ನೀರಿನ ತೊಂದರೆಯಿದ್ದು, ಅದು ಇಂದಿಗೂ ಮುದುವರೆದಿದೆ. ಬಿಸಿಲು ಕಾಲದಲ್ಲಿ ಇಲ್ಲಿ ಧೂಳಿನ ಗಾಳಿ ಮತ್ತು ಬಿಸಿಯಿಂದ ಕೂಡಿದ ವಾತಾವರಣ ಇರುತ್ತದೆ. ನವಲುಗುಂದ ತಾಲೂಕು ಪ್ರದೇಶವು ಧಾರವಾಡದ ಪೂರ್ವ ಭಾಗದಲ್ಲಿದ್ದು, ಪೂರ್ವದಲ್ಲಿ ೭೩°21′ಅಕ್ಷಾಂಶ ಮತ್ತು ಉತ್ತರದಲ್ಲಿ ೧೫°33′ರೇಖಾಂಶಗಳ ಮದ್ಯದಲ್ಲಿ ನೆಲೆಗೊಂಡಿದ್ದು, ಇದು ೧೦೮೦ ಚದರು ಕಿ.ಮೀ ಭೌಗೋಳಿಕ ವಿಸ್ತೀರ್ಣ ಹೊಂದಿದ್ದು, ಇದು ಸಮುದ್ರ ಮಟ್ಟದಿಂದ ೯೯೧೬ ಮೀಟರ ಎತ್ತರವಿದೆ. ಇದರಲ್ಲಿ ೬೦ ಗ್ರಾಮಗಳಿದ್ದು, ಇದನ್ನು ಆಡಳಿತದ ಅನುಕೂಲಕ್ಕಾಗಿ ಎರಡು ಹೋಬಳಿಗಳಾಗಿ ವಿಂಗಡಿಸಿದ್ದಾರೆ. ಅವುಗಳೆಂದರೆ ಅಣ್ಣಿಗೇರಿ ಮತ್ತು ಮೊರಬ ಹೋಬಳಿಗಳಾಗಿವೆ.

ಇದರ ನೆರೆಹೊರೆಯ ಪ್ರದೇಶಗಳೆಂದರೆ ಇದು ಧಾರವಾಡ ಪ್ರದೇಶದಿಂದ ಪೂರ್ವ ಭಾಗದಲ್ಲಿದ್ದು ಇದು ಗದಗ ಬೆಳಗಾವಿ ಹಾಗೂ ಧಾರವಾಡ ಜಿಲ್ಲೆಗಳಿಂದ ಸುತ್ತುವರೆಯಲ್ಪಟ್ಟಿದೆ. ಈ ತಾಲೂಕಿನ ಉತ್ತರದಲ್ಲಿ ಬೆಳಗಾವಿ ಮತ್ತು ಪೂರ್ವ ಪಶ್ಚಿಮ ಕಡೆಗೆ ಗದಗ ಜಿಲ್ಲೆಯಿಂದ ಸುತ್ತುವರೆಯಲ್ಪಟ್ಟಿದ್ದು ಇಲ್ಲಿ ಪೂರ್ವದ ದಿಕ್ಕಿನಲ್ಲಿ ಒಂದು ಎತ್ತರವಾದ ಗುಡ್ಡವನ್ನ ಕಾಣಬಹುದಾಗಿದೆ.

ಹವಾಗುಣ ಮತ್ತು ಮಳೆ:

ಧಾರವಾಡ ಜಿಲ್ಲೆಯ ೫ ತಾಲೂಕುಗಳಲ್ಲಿ ಅತಿ ಕಡಿಮೆ ಮಳೆ ಬೀಳುವ ತಾಲೂಕು ಇದಾಗಿದೆ. ಇದು ಉಷ್ಣವಲಯದಲ್ಲಿದ್ದು ಹೆಚ್ಚಾಗಿ ಬಯಲು ಪ್ರದೇಶ ಆಗಿರುವುದರಿಂದ ಮತ್ತು ಅಲ್ಲಿ ಅರಣ್ಯ ಪ್ರದೇಶವು ಕಡಿಮೆ ಇರುವುದರಿಂದ ಬೇಸಿಗೆಯಲ್ಲಿ ಹೆಚ್ಚು ಬಿಸಿಲು ಕಂಡು ಬರುತ್ತದೆ. ಹಗಲಲ್ಲಿ ಸುಡು ಬಿಸಿಲು ಇರುವುದರಿಂದ ರಾತ್ರಿ ವೇಳೆಯಲ್ಲೂ ಅಹಿತಕರವಾದ ವಾತಾವರಣ ಕಂಡು ಬರುತ್ತದೆ. ಫೆಬ್ರುವರಿ ತಿಂಗಳ ಕೊನೆಯಿಂದ ಇಲ್ಲಿ ಉಷ್ಣಾಂಶವು ಹೆಚ್ಚುತ್ತಾ ಹೋಗಿ ಮಾರ್ಚ ಎಪ್ರೀಲ್ ತಿಂಗಳುಗಳಲ್ಲಿ ಸುಡು ಬಿಸಿಲಿನಿಂದ ಕೂಡಿದ್ದು, ಬಿಸಿಗಾಳಿಯು ಬೀಸುತ್ತದೆ. ಮೇ ತಿಂಗಳ ಕೊನೆಯ ಭಾಗದಲ್ಲಿ ಸ್ವಲ್ಪ ಗಾಳಿ ಬಿಸಿಲು ಪ್ರಾರಂಭವಾಗಿ ಮುಂಗಾರು ಮಳೆ ಪ್ರಾರಂಭವಾಗುತ್ತದೆ.

ಈ ಪ್ರದೇಶವು ಮಳೆ ನೆರಳಿನ ಪ್ರದೇಶ ಆಗಿರುವದರಿಂದ ಇಲ್ಲಿ ಮೋಡಗಳು ಸುರಿದು ಕೂಡಲೇ ಬಿರುಗಾಳಿ ಬೀಸಿ ಮೋಡಗಳನ್ನು ಚದುರಿಸಿಬಿಡುತ್ತದೆ. ಮೇ ತಿಂಗಳಿನಿಂದ ಸಪ್ಟಂಬರ್‌ವರೆಗೂ ಮಂದಮಾರುತ ಬೀಸುವುದರಿಂದ ವಾತಾವರಣ ಹಿತಿಕರವಾಗಿರುತ್ತದೆ. ಅಕ್ಟೋಬರ ಮತ್ತು ನವ್ಹಂಬರ ತಿಂಗಳಲ್ಲಿ ಹಿಂಗಾರು ಮಳೆ ಆರಂಭವಾಗಿ ನವಂಬರ ಕೊನೆಯಲ್ಲಿ ಮಳೆ ಸಂಪೂರ್ಣವಾಗಿ ನಿಂತು ಹೋಗುತ್ತದೆ. ಕೆಲವು ವೇಳೆ ಪ್ರತ್ಯಾವೃತ ಚಂಡ ಮಾರುತಗಳಿಂದ ಈ ತಾಲೂಕಿನಲ್ಲಿ ನಾಲ್ಕೈದು ದಿನ ಜಡಿ ಮಳೆ ಬೀಳುವ ಸಂಭವ ಇರುತ್ತದೆ.

ಡಿಸೆಂಬರ್ ತಿಂಗಳಲ್ಲಿ ಇಲ್ಲಿ ಚಳಿ ಹೆಚ್ಚು ಇದ್ದು, ಜೊತೆಗೆ ಹೆಚ್ಚು ಇಬ್ಬನಿ ಬೀಳುವದರಿಂದ ಹಗಲು ಮತ್ತು ರಾತ್ರಿ ವೇಳೆಯಲ್ಲಿ ಮೈ ನಡುಗುವ ಚಳಿ ಇರುತ್ತದೆ. ಕಡಿಮೆ ಮಳೆ ಬೀಳುವ ತಾಲೂಕಿನಲ್ಲಿ ಮಳೆಯ ವಾತಾವರಣ ಏರ್ಪಡುವುದು ಬಹಳ ಕಡಿಮೆ. ಈ ತಾಲೂಕಿನಲ್ಲಿರುವ ವೃಷ್ಠಿ ಮಾಪನಗಳ ಪ್ರಕಾರ ೩೭೫.೬ರಷ್ಟು ಮಳೆಯಾಗುತ್ತದೆ.

೨೦೧೪ರ ಮಳೆಯ ಸರಾಸರಿ ವಿವರ:

ಕ್ರ. ಸಂ	ಮಾಹೆ	ವಾಡಿಕೆ ಮಳೆ	೨೦೧೪ರಲ್ಲಿಯ ಮಳೆ
೦೧	ಜನೇವರಿ	೧.೨	೦.೪
೦೨	ಫೆಬ್ರುವರಿ	೧.೪	೨೫.೦೦
೦೩	ಮಾರ್ಚ	೨.೩	೭೦.೦೦
೦೪	ಎಪ್ರೀಲ್	೧೦.೫	೦೫.೦೦
೦೫	ಮೇ	೫೦.೪	೭೦.೨
೦೬	ಜೂನ್	೬೦.೩	೪೫.೪
೦೭	ಜುಲೈ	೫೭.೨	೧೧೪.೩
೦೮	ಅಗಸ್ಟ್	೧೧೫.೨	೧೧೦.೧
೦೯	ಸಪ್ಟಂಬರ	೧೩೦.೪	೧೨೦.೪
೧೦	ಅಕ್ಟೋಬರ	೧೨೫.೪	೮೧.೦೦
೧೧	ನವಂಬರ	೨೫.೩	೧೫.೪
೧೨	ಡಿಸೆಂಬರ	೬.೯	೦೧.೧

ನೀರು :

ಈ ತಾಲೂಕಿನ ಮತ್ತೊಂದು ಸಮಸ್ಯೆಯೆಂದರೆ ನೀರು ಈ ಪ್ರದೇಶವು ಸಂಪೂರ್ಣವಾಗಿ ಕಪ್ಪು ಮಣ್ಣಿನ ಪ್ರದೇಶವಾಗಿರುವದರಿಂದ ಇಲ್ಲಿಯ ಭೂಮಿಯಲ್ಲಿ ನೀರಿನ ಮೂಲವು ಅತೀ ಆಳದಲ್ಲಿ ಮತ್ತು ಕಡಿಮೆ ಪ್ರಮಾಣದಲ್ಲಿ ಕಂಡುಬರುವದು ಅಲ್ಲದೇ ಆಳವಾದ ಕೊಳವೆಭಾವಿ ಕೊರೆದು ಸ್ವಲ್ಪ ಪ್ರಮಾಣದ ನೀರು ಬಂದರೂ ಸಹಿತ ಅದು ಕುಡಿಯಲು ಯೋಗ್ಯವಾಗಿರುವುದಿಲ್ಲ. ಕಾರಣ ಆ ನೀರಿನಲ್ಲಿ ಪ್ಲೋರೈಡ್ ಎಂಬ ರಾಸಾಯನಿಕ ಅಂಶ ಇರುವದರಿಂದ ಅದು ಮಾನವನ ಆರೋಗ್ಯಕ್ಕೆ ಹಾನಿಕಾರಕವಾಗಿದೆ. ಅಲ್ಲಿ ಕೈಗೊಂಡ ಕ್ಷೇತ್ರಕಾರ್ಯದಿಂದ ತಿಳಿದು ಬಂದ ವಿಷಯ ಎಂದರೆ ಅಲ್ಲಿಯ ಕನಿಷ್ಟ ೪೫ ರಿಂದ ೫೦ ವಯಸ್ಸಿನ ಜನರನ್ನು ಭೇಟಿಯಾದಾಗ ಅವರಲ್ಲಿ ಕಾಲಿನ ಎಲಬುಗಳಲ್ಲಿ ಹೆಚ್ಚಿನ ಸಮಸ್ಯೆಗಳು ಕಂಡುಬಂದಿವೆ. ಅದಕ್ಕೆ ಅವರು ಮೊದಲಿನಿಂದಲೂ ಸೇವಿಸಿದ ಕೊಳವೆ ಭಾವಿಯ ನೀರು ಪ್ರಮುಖ ಕಾರಣವಾಗಿದೆ ಎಂದು ತಿಳಿದುಬಂದಿದೆ. ಅಲ್ಲದೆ ನೀರು ಸತತವಾಗಿ ಮನೆಯ

ಕೊಡಗಳಲ್ಲಿ ಮತ್ತು ಪಾತ್ರೆಗಳಲ್ಲಿ ಶೇಖರಣೆ ಮಾಡಿದಾಗ ನೀರಿನ ಮೇಲಿನ ಭಾಗದಲ್ಲಿ ಉಪ್ಪಿನ ತರಹದ ರಾಸಾಯನಿಕ ವಸ್ತು ಕಂಡುಬರುತ್ತದೆ. ಆದ್ದರಿಂದ ಈಗ ಈ ತಾಲೂಕಿನ ಹೆಚ್ಚು ಜನರು ಕೆರೆಯ ನೀರನ್ನೇ ಅವಲಂಭಿಸಿದ್ದಾರೆ.

ಬೆಟ್ಟ :

ನವಲಗುಂದ ಪ್ರದೇಶದ ಉತ್ತರ ಭಾಗಕ್ಕೆ ಒಂದು ದೊಡ್ಡದಾದ ಬೆಟ್ಟ ಕಂಡುಬರುತ್ತದೆ. ಸಾಮಾನ್ಯವಾಗಿ ಇದು ಬಯಲು ಪ್ರದೇಶವಾಗಿದ್ದರೂ ಇಲ್ಲಿ ಬೆಟ್ಟ ಇರುವುದು ವಿಶೇಷವಾಗಿದೆ. ಪ್ರವೇಶವು ೩ ದಿಕ್ಕಿನಲ್ಲಿ ಬಯಲು ಪ್ರದೇಶ ಹೊಂದಿದ್ದು, ಒಂದು ಕಡೆ (ಉತ್ತರ ಭಾಗ) ಮಾತ್ರ ಬೆಟ್ಟದಿಂದ ಕೂಡಿದೆ. ಅದು ಕೆಂಪು ಮರಳು ಮಿಶ್ರಿತ ಶಿಲೆಯಿಂದ ನಿರ್ಮಾಣವಾಗಿದ್ದು, ನವಲಗುಂದದ ಪರಿಸರದ ಮೇಲೆ ಇದರ ಪ್ರಭಾವವು ಅಪಾರವಾಗಿದೆ. ಈ ಬೆಟ್ಟವನ್ನು ಇಂದು ಎಲ್ಲರೂ ಅದನ್ನು ಗವಿಮಠ ಎಂದು ಕರೆಯುತ್ತಾರೆ. ಕಾರಣ ಅಲ್ಲಿ ಒಂದು ಗವಿ ಇದ್ದು, ಅದರೊಳಗೆ ಒಂದು ಮಠವು ಕಂಡುಬರುತ್ತದೆ.

ಅಲ್ಲಿಯ ಜನರ ಹೇಳಿಕೆಯ ಪ್ರಕಾರ ಅಲ್ಲಿ ಯಡಿಯೂರು ಸಿದ್ಧಲಿಂಗೇಶ್ವರ ಸನ್ನಿಧಿ ಇದೆ. ಮತ್ತು ೧೬ನೇ ಶತಮಾನದಿಂದ ಈ ಬೆಟ್ಟದಲ್ಲಿ ಮಠವು ಪ್ರಾರಂಭವಾಯಿತು. ಅದರ ಹತ್ತಿರ ಇರುವ ಗುಹೆಯೊಂದರಲ್ಲಿ ಜಡೆಸ್ವಾಮಿ ಎಂಬ ಪವಾಡ ಪುರುಷರು ತಪಸ್ಸು ಮಾಡುತ್ತಿದ್ದರು. ಅಲ್ಲಿಯೇ ಪಕ್ಕದಲ್ಲಿ ಜೈನಧರ್ಮಿಯನಾದ ಪುರ ಪ್ರಮುಖನೊಬ್ಬನ ಭೂಮಿಯಿದ್ದು, ಅವನು ಅಲ್ಲಿ ಒಂದು ಭಾವಿಯನ್ನು ತೋಡಿಸಲು ಪ್ರಾರಂಭಿಸಿದನು. ಅದು ಎಷ್ಟು ಆಳ ತೋಡಿದರೂ ನೀರು ಮಾತ್ರ ಕಾಣಿಸಲಿಲ್ಲ. ಆಗ ಸಿರಿವಂತನು ನಿರಾಶನಾದನು. ಆಮೇಲೆ ಅವನಿಗೆ ಈ ಗವಿಯಲ್ಲಿ ತಪಸ್ಸು ಮಾಡುತ್ತಿರುವ ಪವಾಡ ಪುರುಷರಿಗೆ ಪ್ರಾರ್ಥಿಸಿದನು. ಅವರು ಮರುದಿನ ಪವಾಡ ಪುರುಷರು (ಜಡೆ ಸ್ವಾಮಿಗಳು) ತೊಟ್ಟಿಲು ಮೂಲಕ ಭಾವಿಯಲ್ಲಿ ಇಳಿದು ಪೂಜೆ ಮಾಡಿ ಮಂತ್ರಗಳನ್ನು ಪಠಿಸಿ ತಮ್ಮ ತಪಸ್ಸಿನ ಶಕ್ತಿಯನ್ನು ಧಾರೆಯರೆದು "ನೀನು ಭಕ್ತೋದ್ದಾರಕ್ಕಾಗಿ ಉಕ್ಕಿ ಬರಬೇಕು ತಾಯೇ" ಎಂದು ಗಂಗಾ ಮಾತೆಯನ್ನು ಪ್ರಾರ್ಥಿಸಿಕೊಂಡರು. ಆಗ ಭಾವಿಯಲ್ಲಿ ನೀರು ಉಕ್ಕಿ ಬಂದಿತು. ಈ ಪವಾಡವನ್ನು ಕಂಡ ಜನರೆಲ್ಲರೂ ಸದ್ಗುರುಗಳಿಗೆ ನಮಸ್ಕರಿಸಿದರು. ಮತ್ತು ಆ ಭೂಮಿಯ ಪುರ ಪ್ರಮುಖರು ಭಾವಿಯಿದ್ದ ಭೂಮಿಯನ್ನು ಮಠ ಕಟ್ಟಿಕೊಳ್ಳಲು ಜಡೆ ಸ್ವಾಮಿಗಳಿಗೆ ದಾನ ಮಾಡಿದರು. ಆಗ ನಿರ್ಮಾಣವಾದ ಮಠದಿಂದ ಆ ಬೆಟ್ಟ ಪ್ರದೇಶವು ಇಂದಿಗೂ ಗವಿಮಠ ಎಂದೇ ಪ್ರಸಿದ್ಧಿಯನ್ನು ಪಡೆದಿದೆ.

ಅರಣ್ಯ ಸಂಪತ್ತು :

ಈ ತಾಲೂಕಿನಲ್ಲಿ ಅರಣ್ಯ ಸಂಪತ್ತು ಅತೀ ವಿರಳವಾಗಿದೆ. ಇದು ಸಾಮಾನ್ಯವಾಗಿ ಬಯಲು ಸೀಮೆಯ ಉಷ್ಣ ವಲಯಕ್ಕೆ ಸೇರಿದೆ. ಇಲ್ಲಿ ಎಲ್ಲಿಯೂ ದಟ್ಟವಾದ ಅರಣ್ಯ ಕಂಡುಬರುವುದಿಲ್ಲ. ಆದರೆ ಅಲ್ಲಲ್ಲಿ ಸರ್ಕಾರದ ಮೀಸಲಿಟ್ಟ ಅರಣ್ಯವಿದ್ದು, ಅಲ್ಲಿ ನೀಲಗೆರೆ ಗಿಡಗಳು ಕಂಡುಬರುತ್ತವೆ. ಇಲ್ಲಿ ಪೊದೆಗಳೇ ಹೆಚ್ಚಾಗಿ ಕಂಡುಬಂದಿದ್ದು, ಬೆಲೆ ಬಾಳುವ ಮರಗಳು ಕಂಡುಬರುವುದಿಲ್ಲ. ಇಲ್ಲಿಯ ಒಟ್ಟು ಅರಣ್ಯ ವಿಸ್ತೀರ್ಣ ೧೯.೭೪೩ ಹೆಕ್ಟರ್‌ಗಳಷ್ಟು ಇದೆ.

ಇಲ್ಲಿನ ಅರಣ್ಯದ ಪ್ರದೇಶಗಳಲ್ಲಿ ಎಲೆ ಉದುರುವ ಗಿಡಗಳು ಮತ್ತು ಸುಮಾರು ೩ ಅಡಿಗಳಷ್ಟು ಎತ್ತರವಾಗಿ ಬೆಳೆಯುವ ಮುಳ್ಳಿನ ಪೊದೆಗಳು, ಜಾಲಿ ಗಿಡಗಳು ಮತ್ತು ತಿನ್ನಲು ಉಪಯೋಗಿಸುವ ಸಸ್ಯಗಳು ಉದಾಹರಣೆಗೆ ಬಾರಿಹಣ್ಣಿನ ಗಿಡಗಳು ಮೊದಲಾದ ಗಿಡಗಳು ಕಂಡುಬರುತ್ತವೆ. ಹಾಗೆಯೇ ಬೇವು, ಹುಣಸೆ, ಕಳ್ಳಿಗಿಡಗಳು ಕಂಡುಬರುತ್ತವೆ. ಇಲ್ಲಿ ಶುಷ್ಕ ವಾತಾವರಣ ಇರುವುದರಿಂದ ಪ್ರಾಣಿಗಳಾದ ನರಿ, ತೋಳ, ಕತ್ತೆಕಿರುಬ, ಜಿಂಕೆ, ಚಿಗರೆ, ಮುಳ್ಳುಹಂದಿ, ಕರಡಿ, ಕಾಡುಹಂದಿ ಮೊದಲಾದವು ಕಾಣುತ್ತವೆ.

ಜನಸಂಖ್ಯೆ :

ನವಲಗುಂದ ತಾಲೂಕಿನ ಜನಸಂಖ್ಯೆ ೨೦೧೧ರ ಜನಗಣತಿಯ ಪ್ರಕಾರ ೧,೯೦,೨೦೮ ಇದ್ದು, ಇದರಲ್ಲಿ ಪುರುಷರು ೯೬,೯೪೨ ಮತ್ತು ಮಹಿಳೆಯರು ೯೩,೨೬೬ ರಷ್ಟು ಇರುವರು. ಪ್ರತಿ ಸಾವಿರ ಪುರುಷರಿಗೆ ಮಹಿಳೆಯರ ಪ್ರಮಾಣ ೯೫೫ರಷ್ಟಿದೆ. ಮತ್ತು ಜನಸಾಂದ್ರತೆಯು ಪ್ರತಿ ಚ.ಕಿ.ಮೀ ಗೆ ೧೯೦ರಷ್ಟಿದೆ. ೨೦೧೧ರ ಜನಗಣತಿಯ ಪ್ರಕಾರ ೧೮,೨೧೩ ಪರಿಶಿಷ್ಟ ಜಾತಿಯರಿದ್ದು, ಸುಮಾರು ೧೦,೦೩೪ರಷ್ಟು ಜನಸಂಖ್ಯೆ ಪರಿಶಿಷ್ಟ ಪಂಗಡದ ಜನಸಂಖ್ಯೆ ಕಂಡುಬರುವುದು.

ಜನಜೀವನ :

ಪ್ರತಿ ಚ.ಕಿ.ಮೀ ಗೆ ೧೯೧ ಜನಸಾಂದ್ರತೆಯನ್ನು ಹೊಂದಿರುವ ನವಲಗುಂದ ತಾಲೂಕಿನಲ್ಲಿ ಸಾಮಾನ್ಯವಾಗಿ ಎಲ್ಲಾ ಜಾತಿಯವರನ್ನು ಕಾಣಬಹುದು. ಅದರಲ್ಲಿ ಆಯಾ ಜಾತಿಯವರು ತಮ್ಮ ತಮ್ಮ ಕಸುಬುಗಳನ್ನೇ ಅಳವಡಿಸಿಕೊಂಡು ಬಂದಿರುವುದು ಕಾಣಬಹುದು. ಕೆಲವರು ತಮ್ಮ ಮೂಲ ಕಸುಬು ಬಿಟ್ಟು, ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿರುವುದು ಕೂಡ

ಕಾಣಬಹುದು. ಈ ತಾಲೂಕಿನಲ್ಲಿ ಕಂಡುಬರುವ ಜನಾಂಗಗಳೆಂದರೆ, ಲಿಂಗಾಯತರು, ರೆಡ್ಡಿಯರು, ಹರಿಜನರು, ವಡ್ಡರು, ಮುಸ್ಲೀಂರು, ಕುರುಬರು, ವೈಶ್ಯರು, ಬ್ರಾಹ್ಮಣರು, ಅಕ್ಕಸಾಲಿಗರು, ಕುಂಬಾರರು, ಜೈನರು ಹೀಗೆ ಹಲವಾರು ಜಾತಿಯ ಜನರನ್ನು ಪ್ರದಾನವಾಗಿ ಇಲ್ಲಿ ಕಾಣಬಹುದು.

ಸಾಮಾನ್ಯವಾಗಿ ಬ್ರಾಹ್ಮಣರು ಮತ್ತು ಲಿಂಗಾಯತರನ್ನು ಹೊರತುಪಡಿಸಿ ಉಳಿದವರೆಲ್ಲರೂ ಮಾಂಸಾಹಾರಿಗಳಾಗಿದ್ದಾರೆ. ಅವರಲ್ಲಿ ಕೆಲವರು ಸರಕಾರಿ ಕೆಲಸಗಳಲ್ಲಿ, ಕೆಲವರು ಕೂಲಿ ಕೆಲಸಗಳಲ್ಲಿ ತೊಡಗಿದ್ದಾರೆ. ಇವರು ಆರ್ಥಿಕವಾಗಿ ತುಂಬಾ ಹಿಂದುಳಿದವರಾಗಿದ್ದರಿಂದ ಸರಕಾರ ಇವರಿಗೆ ಮನೆಗಳನ್ನು ನಿರ್ಮಿಸಿ ಕೊಟ್ಟಿದೆ. ಅಲ್ಲದೇ ಇಲ್ಲಿಯ ಹಿಂದುಳಿದ ಕೆಲವು ಜನರು ಇಂದಿಗೂ ಜೀತದಾಳುಗಳಾಗಿ ದುಡಿಯುವುದು ಕಂಡುಬರುತ್ತದೆ. ಇವರು ಇತ್ತೀಚಿಗೆ ವ್ಯವಸಾಯದಲ್ಲಿ ತೊಡಗಿದ್ದಾರೆ. ಇತ್ತೀಚಿಗೆ ಜಾಗತೀಕರಣ ಪ್ರಭಾವದಿಂದ ಇಲ್ಲಿಯ ಹೆಚ್ಚಿನ ಜನರು ಬೆಂಗಳೂರಿಗೆ ವಲಸೆ ಹೋಗಿರುವುದು ಸಹಿತ ಕಂಡುಬರುತ್ತದೆ.

ನವಲಗುಂದ ತಾಲೂಕಿನ ಅಂಕಿ-ಅಂಶಗಳ ನೋಟ:

೧)	ನಾಡ ಕಛೇರಿಗಳು	– ೦೧
೨)	ಗ್ರಾಮಲೆಕ್ಕಿಗರ ವೃತ್ತಗಳು	– ೪೮
೩)	ಹೋಬಳಿಗಳು	– ೦೨
೪)	ಗ್ರಾಮಪಂಚಾಯತಿಗಳು	– ೨೨
೫)	ನಗರಗಳು	– ೦೨
೬)	ಜನ ವಸತಿ ಇರುವ ಪ್ರದೇಶ	– ೫೭
೭)	ಜನವಸತಿ ಇಲ್ಲದ ಪ್ರದೇಶ	– ೦೧
೮)	ಸ್ಥಳೀಯ ಸಂಸ್ಥೆಗಳು	– ೦೨
೯)	ಶಹರ ಪಂಚಾಯತ	– ೦೩
೧೦)	ಚಿತ್ರಮಂದಿರಗಳು	– ೦೧
೧೧)	ಪೊಲೀಸ್‌ಠಾಣೆ	– ೦೨
೧೨)	ಅಗ್ನಿಶಾಮಕ ಠಾಣೆ	– ೦೧
೧೩)	ಪಡಿತರ ಅಂಗಡಿಗಳು	– ೪೯
೧೪)	ಬಿ.ಪಿ.ಎಲ್ ಪಡಿತರ ಸಂಖ್ಯೆ	– ೨,೯೫೯
೧೫)	ಜಿಲ್ಲಾದಾಯ ಮತ್ತು ತಲಾದಾಯ	– ೧,೬೯,೫೩೪

ರಾಜಕೀಯ ಹಿನ್ನೆಲೆ:

ನವಲಗುಂದ ತಾಲೂಕಿನಲ್ಲಿ ದೊರೆತಿರುವ ಪ್ರಮುಖ ಶಾಸನಗಳ ಪಟ್ಟಿ:

ಕ್ರ.ಸಂ	ಶಾಸನ	ಅರಸ	ವರ್ಷ
೦೧	ಅರೆಕುರಹಟ್ಟಿ ಶಾಸನ	ತ್ರಿಲೋಕಮಲ್ಲ	೧೧೫೪
೦೨	ಅಣ್ಣಿಗೆರಿ ಶಾಸನ	ಬಿಜ್ಜಳ	೧೧೫೭
೦೩	ಅಣ್ಣಿಗೆರಿ ಶಾಸನ	ಬಿಜ್ಜಳ	೧೧೬೧
೦೪	ಅಣ್ಣಿಗೆರಿ ಶಾಸನ	ಬಿಜ್ಜಳ	೧೧೬೨
೦೫	ಅಣ್ಣಿಗೆರಿ ಶಾಸನ	ತ್ರಿಭುವನಮಲ್ಲ (ಬಿಜ್ಜಳ)	೧೧೬೨
೦೬	ಅಣ್ಣಿಗೆರಿ ಶಾಸನ (೧)	ರಾಮಮುರಾರಿ ಸೋವಿದೇವ	೧೧೭೩
೦೭	ಅಣ್ಣಿಗೆರಿ ಶಾಸನ	೪ನೇ ಸೊಮೇಶ್ವರ	೧೧೮೪
೦೮	ಅಣ್ಣಿಗೆರಿ ಶಾಸನ (೨)	ರಾಮಮುರಾರಿ ಸೋಮದೇವ	೧೧೭೩
೦೯	ಅಣ್ಣಿಗೆರಿ ಶಾಸನ	೨ನೇ ಜಗದೇವಮಲ್ಲ	೧೧೮೯
೧೦	ಕುರಹಟ್ಟಿ ಶಾಸನ	ಕರ್ಕ	೧೨ನೇ ಶತಮಾನ
೧೧	ಬೆನ್ನೂರು ಶಾಸನ	ಕರ್ಕ	೧೨ನೇ ಶತಮಾನ

(ನವಲಗುಂದ ತಾಲೂಕಿನಲ್ಲಿ ರಾಜಕೀಯ ಇತಿಹಾಸಕ್ಕೆ ಸಂಬಂಧಿಸಿದ ಸುಮಾರು ೭೧ ಶಾಸನಗಳು ದೊರೆತಿವೆ ಆದರೆ ಅವುಗಳಲ್ಲಿ ಹೆಚ್ಚಿನವು ಹಾಳಾಗಿದ್ದು ಈ ಮೇಲೆ ತಿಳಿಸಿದ ಶಾಸನಗಳೆಲ್ಲವೂ ಓದಲು ಲಭ್ಯವಿವೆ.)

ನವಲಗುಂದ ಎಂದರೆ ನವಿಲುಗಳು ಕುಣಿಯುತ್ತಿದ್ದ ಎತ್ತರವಾದ ಸ್ಥಳ ಎಂದರ್ಥ. ಕ್ರಿ.ಶ. ೧೨೨೮ರ ಶಾಸನವು ದಾನಭೂಮಿಯನ್ನು ನವಿಲ್ಲಿಂದ ಎಂಬ ಕೋಲಿನಲ್ಲಿ ಅಳೆದುಕೊಟ್ಟ ಅಂಶವನ್ನು ತಿಳಿಸುತ್ತದೆ. ವಿಲ್ಲಿಂದ ಎಂಬ ಪದವು ನವಿಲು+ಕುಂದ ಎಂಬ ಸಂಯುಕ್ತ ಪದವಾಗಿದ್ದು ಕುಂದ ಎಂದರೆ ಗುಡ್ಡ ಎಂದು ಅರ್ಥ.[೧]

ಮಹಾಭಾರತ ಪುರಾಣ ಮತ್ತು ಹಲವು ಶಾಸನಗಳಲ್ಲಿ ಕರ್ನಾಟಕವನ್ನು ಕುಂತಳವೆಂದು ಕರೆಯಲಾಗಿದೆ. ಕರ್ನಾಕಟದಲ್ಲಿನ ಧಾರವಾಡ ಜಿಲ್ಲೆಯ ನವಲಗುಂದ ತಾಲೂಕು ಕೇಂದ್ರ ಸ್ಥಳ. ನವಲಗುಂದ ತಾಲೂಕಿನ ಹಲವಾರು ಸ್ಥಳಗಳು ಐತಿಹಾಸಿಕ ಮಹತ್ವ ಪಡೆದಿವೆ.[೨] ಇವುಗಳಲ್ಲಿ ಅಣ್ಣಿಗೇರಿ ಪ್ರಮುಖ ಸ್ಥಾನ ಪಡೆದಿದೆ. ಶಿವಳ್ಳಿ, ಅಮರಗೋಳ, ಶಿಶುವಿನಹಳ್ಳಿ ಸುತ್ತಮುತ್ತಲಿನ ಪ್ರದೇಶಗಳು ಸಾಮ್ರಾಜ್ಯಗಳ ತಿರುಳುನಾಡಾಗಿ ರಾಜಕೀಯ ಧಾರ್ಮಿಕ, ಶೈಕ್ಷಣಿಕ ಚಟುವಟಿಕೆಗಳ ನೆಲೆಯಾಗಿದೆ.

ಬಾದಾಮಿ ಚಾಲುಕ್ಯರ ಕಾಲದಲ್ಲಿ ಎಂದರೆ ಕ್ರಿ.ಶ. ೫೫೦ ರಿಂದ ೭೫೭ ರ ವರೆಗೆ ನವಲಗುಂದದ ಅಣ್ಣಿಗೇರಿ ಪ್ರದೇಶವು ಬಾದಾಮಿ ಚಾಲುಕ್ಯರ ಆಡಳಿತಕ್ಕೆ ಒಳಪಟ್ಟಿತ್ತು. ೨ನೇ ಕೀರ್ತಿವರ್ಮನ ಶಾಸನವು ಅಣ್ಣಿಗೇರಿಯಲ್ಲಿ ದೊರೆತಿದೆ. ಬನಶಂಕರಿ ದೇವಾಲಯದ ಮುಂದೆ ನಿಂತಿರುವ ಈ ಶಾಸನದಲ್ಲಿ ಜೇಬುಳಗೇರಿಯ ಗಾಮುಂಡನಾದ ಕಲಿಯಮನು ಒಂದು ಜೈನ ದೇವಾಲಯವನ್ನು ಕಟ್ಟಿಸಿದನೆಂದು ಅದರ ಮುಂದೆ ಕೊಂಡಶೂಲರ ಕಪ್ಪ ಉರ್ಫ ಕೀರ್ತಿವರ್ಮನ ಗೋಸಾನಿ ಒಂದು ಮೂರ್ತಿಯನ್ನು ನಿಲ್ಲಿಸದನೆಂದು ಇಮ್ಮಡಿ ಕೀರ್ತಿವರ್ಮನ ಶಾಸನವು ಉಲ್ಲೇಖಿಸುತ್ತದೆ.[೩]

ಬಾದಾಮಿ ಚಾಲುಕ್ಯರ ತರುವಾಯ ನವಲಗುಂದ ತಾಲೂಕಿನ ಪ್ರದೇಶವು ರಾಷ್ಟ್ರಕೂಟರ ರಾಜ್ಯಕ್ಕೆ ಸೇರಿತ್ತು. ರಾಷ್ಟ್ರಕೂಟರ ಕಾಲದ ವೀರಗಲ್ಲು ಶಾಸನ ಇಲ್ಲಿಯ ಅಣ್ಣಿಗೇರಿಯಲ್ಲಿ ದೊರೆತಿದೆ. ಇದರ ಕಾಲ ಅಕಾಲವರ್ಷದ ಕಾಲ ಬಹುಶಃ ೧ನೇ ಕೃಷ್ಣನ ಕಾಲಕ್ಕಿಂತಲೂ ಮೊದಲೆಂದು ತೋರುತ್ತದೆ. ಶತ್ರುಗಳು ಅಪಹರಿಸಿಕೊಂಡು ಹೋಗುತ್ತಿದ್ದ ದನಗಳನ್ನು ಬಿಡಿಸಿಕೊಳ್ಳುವುದಕ್ಕಾಗಿ ನಡೆದ ಕಾಳಗದಲ್ಲಿ ಮಡಿದ ಒಬ್ಬ ವೀರನ ಸ್ಮರಣಾರ್ಥಕವಾಗಿ ಈ ವೀರಗಲ್ಲನ್ನು ನೆಡಲಾಗಿದೆ. ಗಂಗವಂಶದ ರಾಜನಾದ ಬೂತಗನ ಮಗನು ಈ ಊರಿನಲ್ಲಿ ಒಂದು ದೇವಾಲಯವನ್ನು ಕಟ್ಟಿಸಿದ್ದಾನೆ. (ಅಮೃತ ಮಹಾದೇವ ಅಣ್ಣಿಗೇರಿ, ೧೯೬೦, ಪುಟ–೧).

ರಾಷ್ಟ್ರಕೂಟರ ಆಳ್ವಿಕೆಯ ನಂತರ ಕಲ್ಯಾಣದ ಚಾಲುಕ್ಯರ ಆಳ್ವಿಕೆ ಪ್ರಾರಂಭವಾಯಿತು. ಇದರ ಕಾಲದ ಅವಶೇಷಗಳು ಅಣ್ಣಿಗೇರಿಯಲ್ಲಿ ವಿಶೇಷವಾಗಿ ದೊರೆಯುತ್ತವೆ. ಅವುಗಳಲ್ಲಿ ಶಾಸನಗಳೇ ಮುಖ್ಯ. ಉಳಿದವುಯೆಂದರೆ ದೇವಾಲಯಗಳ ಮೂರ್ತಿಶಿಲ್ಪಗಳು, ಚಾಲುಕ್ಯ ಭುವನೈಕ್ಯಮಲ್ಲನಾದ ೨ ನೇ ಸೋಮೇಶ್ವರನ ಅಣ್ಣಿಗೇರಿ ಶಾಶನವು ಅಣ್ಣಿಗೇರಿ ಬೆಳ್ವಲನಾಡಿನ ರಾಜಧಾನಿಯಾಗಿತ್ತೆಂಬುವದನ್ನು ಹೇಳುತ್ತದೆ. ಇದೇ ಮನೆತನದ ಇರುವ ಬೇಡಂಗ ರಾಜನ ಕ್ರಿ.ಶ. ೧೦೦೨ ಸುಮಾರಿಗೆ ಸಾಮಂತನಾಗಿದ್ದ ಶೋಭರಸನು ಬೆಳ್ವಲು ಪುರಿಗಳು ೩೦೦ ಕುಂದೂರು ಈಗಿನ ನರೇಂದ್ರ–೫೦೦ ಕುಕ್ಕನೂರು ೩೦ ಎಂಬ ಭಾಗಗಳನ್ನು ಆಳುತ್ತಿದ್ದನು. ಒಂದು ನಾಡಿನ ಮುಖ್ಯ ಸ್ಥಳವಾಗಿದ್ದ ಅಣ್ಣಿಗೇರಿಯಲ್ಲಿ ಚಕ್ರವರ್ತಿಗಳು ತಮ್ಮ ಸಾಮಂತರನ್ನು ಇಡುವದು ಸ್ವಾಭಾವಿಕ. ಶೋಭರಸನಂತಹ ಹಿರಿಯ ಅಧಿಕಾರಿಗಳು ಅಣ್ಣಿಗೇರಿಯಲ್ಲಿ ಕೆಲ ಕಾಲವಿದ್ದು ರಾಜ್ಯಭಾರ ಮಾಡಿದ್ದಾರೆ ಅಂತಹ ಅಧಿಕಾರಿಗಳಲ್ಲಿ ಚಾಲುಕ್ಯ ೨ನೇ ಜಯಸಿಂಹನ ಕಾಲದಲ್ಲಿ (೧೦೧೮–೧೦೪೨) ದಂಡನಾಯಕ ವಾವಣರಸ ಅದೇ ರಾಜ ಮನೆತನದ ಭುವನೈಕ್ಯಮಲ್ಲನ (೧೦೬೮–೧೦೭೬) ಆಳ್ವಿಕೆಯಲ್ಲಿ ಬೆಳ್ವಲ ಪುಶಿಗೇರಿ ಭಾಗಗಳನ್ನು ಬೆಳೆಯ ವೃತ್ತಿಯಿಂದ

ಆಳುತ್ತಿದ್ದ. ಮಹಾಮಂಡಲೇಶ್ವರ ನೋವಿದೇವ, ಮೊದಲಾದ ಕೆಲವು ಅಧಿಕಾರಿಗಳ ಹೆಸರುಗಳನ್ನು ಹೇಳಬಹುದು.[೬] ಕಲ್ಯಾಣ ಚಾಲುಕ್ಯ ೮ ನೇ ತ್ಕಲಪನನ್ನು ಪಟ್ಟದಿಂದ ತಳ್ಳಿ ಕಲಚೂರಿ ಬಿಜ್ಜಳು ಅವನ ರಾಜ್ಯವನ್ನು ಅಪಹರಿಸುವ ವೇಳೆಯಲ್ಲಿ ತೈಲಪನು ನವಲಗುಂದದ ತಾಲೂಕಿನ ಅಣ್ಣಿಗೇರಿಗೆ ಒಂದು ಸ್ವಲ್ಪ ದಿನ ತಂಗಿ ಅಲ್ಲಿಂದ ರಾಜ್ಯಭಾರ ಮಾಡುತ್ತಿದ್ದನು. ಹೀಗೆ ಅಣ್ಣಿಗೇರಿಯಿಂದ ರಾಜ್ಯವನ್ನಾಳಿದ ಪ್ರಾಯಶಃ ಕ್ರಿ.ಶ. ಸು ೧೧೫೭ ಮತ್ತು ಕ್ರಿ.ಶ.ಸು. ೧೧೬೨ ರ ನಡುವಿನ ಕಾಲದಲಿ ಇರಬೇಕು. ಆನಂತರ ಅವನು ಬನವಾಸಿಯ ಕಡೆಗೆ ಹೋದನು. ಕ್ರಿ.ಶ. ೧೧೮೪-೮೫ ರಲ್ಲಿ ಚಾಲುಕ್ಯ ೪ ನೆಯ ಸೋಮೇಶ್ವರನು ಅಣ್ಣಿಗೇರಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಇರುತಿದ್ದನು. ಕಳೆದುಹೋಗಿದ್ದ ರಾಜ್ಯವನ್ನು ಆತನಿಗೆ ಸಂಪಾದಿಸಿ ಕೊಟ್ಟ ಬಮ್ಮನು ಅಣ್ಣಿಗೇರಿಯ ಪ್ರದೇಶದವನು ಮುಂದೆ ಈ ಬಮ್ಮನನ್ನು ಕ್ರಿ.ಶ. ೧೧೯೨ ರ ಸುಮಾರಿಗೆ ಹೊಯ್ಸಳರ ೨ನೇ ವೀರ ಬಲ್ಲಾಳನು ಸೋಲಿಸಿದನು. ಈ ವೀರ ಬಲ್ಲಾಳನು ಲಕ್ಕುಂಡಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದನು. ಆ ಸಮಯದಲ್ಲಿ ಅವನು ಅಣ್ಣಿಗೇರಿಗೆ ಬಂದಿರುವ ಸಾಧ್ಯತೆಯಿದೆ. ಕ್ರಿ.ಶ. ೧೨೦೨ ನೇಯ ಅಣ್ಣಿಗೇರಿ ಶಾಸನದಲ್ಲಿ ಭಿಲ್ಲಮನು ಎಂಬುವನು ೨ ನೇ ವೀರ ಬಲ್ಲಾಳನೊಡನೆ ಮಾಡಿದ ಸೊರಮರು ಯುದ್ಧದಲ್ಲಿ ಕ್ರಿ.ಶ. ೧೧೯೧-೯೨ ರ ಸುಮಾರಿಗೆ ಮಡಿದಿರಬೇಕು. ಬಲ್ಲಮನ ತರುವಾಯ ಅವನ ಮಗ ಜೈತುಗಿ ಪಟ್ಟವೇರಿದನು.

ಕ್ರಿ.ಶ. ೧೮೦೦ ನೆಯ ಜುಲೈ ತಿಂಗಳಲ್ಲಿ ಕರ್ನಲ್ ವೆಲ್ಲಸ್ಲಿಯಿಂದ ಬೆನ್ನಟ್ಟಲ್ಪಟ್ಟ ದರೋಡೆಕೋರನಾದ ದುಂಡಿಯಾ ವಾಘನು ಡಂಬಳದಿಂದ ಓಡಿ ಬಂದು ಅಣ್ಣಿಗೇರಿಯಲ್ಲಿ ತಂಗಿದನು. ಅದೇ ವೆಲ್ಲಸ್ಲಿ ಅದೇ ವರುಷ ಅಕ್ಟೋಬರ್ ತಿಂಗಳಲ್ಲಿ ಅಣ್ಣಿಗೇರಿ, ಧಾರವಾಡ ಮತ್ತು ಹುಬ್ಬಳ್ಳಿಯಲ್ಲಿ ಕೆಲವು ಡೇರೆಗಳನ್ನು ಮಾಡಿಸಿದನು. ಏಕೆಂದರೆ ಈ ಮೂರು ಊರುಗಳು ಆ ಕಾಲದಲ್ಲಿ ಬಟ್ಟೆಗಾಗಿ ಪ್ರಸಿದ್ಧವಾಗಿದ್ದವು. ಬ್ರಿಟೀಷರ ರಾಜ್ಯವು ಕರ್ನಾಟಕದಲ್ಲಿ ಪ್ರಾರಂಭವಾಗುವ ವೇಳೆಯಲ್ಲಿ ಅಣ್ಣಿಗೇರಿ ಮತ್ತು ಅದರ ಕೆಳಗಿನ ಹಳ್ಳಿಗಳು ನಿಪ್ಪಾಣಿಕರನ ಜಹಾಗೀರಿಗೆ ಸೇರಿದ್ದವು.

ಹನ್ನೆರಡನೇ ಶತಮಾನಕ್ಕಿಂತ ಪೂರ್ವದಲ್ಲಿಯೇ ಸಾವಳ್ಳಿ ಗ್ರಾಮ ಈ ಭಾಗದ ಪ್ರಮುಖ ಶಿಕ್ಷಣ ಕೇಂದ್ರವಾಗಿದ್ದರ ಕುರಿತು ಶಾಸನವೊಂದು ತಿಳಿಸುತ್ತದೆ. ಶಾಸನದ ಉಲ್ಲೇಖದಂತೆ ನಾವಳ್ಳಿಯ ಮೂಲ ಹೆಸರು ನಾಘೋ೯ಳೆ ಅಂದಿನಿಂದ ಇಂದಿನವರೆಗೆ ಸೌಲಭ್ಯಕಾಂಕ್ಷೆಯಿಂದ ಸರಳೀಕರಣಗೊಂಡು ಸಾಪೋ೯ಳೆ ಎಂಬುವದು ನಾವಳ್ಳಿ ಎಂದು ರೂಪಾಂತರಗೊಂಡಿದೆ.

ನಾರ್+ಪೊಳೆ = ನಾರ್ಪೊಳೆ > ನಾಪ್ಪೊಳೆ > ನಾವಳ್ಳಿ ಹೀಗೆ ಪ>ವ ರೂಪಾಂತರ ಹೊಂದುತ್ತಾ ಕೊನೆಯ ಅಕ್ಷರ ಎ ಕಾರ ಇ ಕಾರವಾಗಿ ನಾರ್ಪೊಳೆ > ನಾರ್ವೊಳೆ > ನಾವಳ್ಳಿ ಎಂದಾಗಿದೆ. ಪ್ರಾದೇಶಿಕ ದೃಷ್ಟಿಯಿಂದ ಈ ಗ್ರಾಮದ ಸಮೀಪದ ಒಂದು ಹಳ್ಳಿ ಐಹೊಳೆ ಇದ್ದು ಇಲ್ಲಿನ ಕೃಷಿಯ ಕಲ್ನಾರನ್ನು ಹಳ್ಳದಲ್ಲಿ ಇಟ್ಟು (ನೀರಿನಲ್ಲಿ ಕೊಳೆಯಿಸಿ) ನಾರನ್ನು ತಯಾರಿಸುತ್ತಿದ್ದರು. ಕಲ್ನಾರು (ದೇವಂಚಾಳೆ) ಸಹ ಪ್ರದೇಸದಲ್ಲಿ ವಿಫುಲವಾಗಿ ಬೆಳೆಯುತ್ತಿದ್ದು ಇದಕ್ಕೆ ಕಾರಣವಾಗಿರಬಹುದು. ಅಂದು ಅದು ಒಂದು ವೃತ್ತಿಯಾಗಿದ್ದು ಜನರು ಇದರಿಂದ ತಮ್ಮ ಜೀವನವನ್ನು ನಡೆಸುತ್ತಿರಬೇಕೆಂದು ತೋರುತ್ತದೆ. ಹೀಗಾಗಿ ನಾರಿನ ಹೊಳೆಯಿಂದಗಿ ನಾವಳ್ಳಿ ಎಂಬ ಹೆಸರು ಬಂದಿರಬಹುದು.

ತಮ್ಮ ಅವತಾರದ ಅವಧಿಯಲ್ಲಿ ನಾಗಲಿಂಗಸ್ವಾಮಿಗಳು ಭಾರತದ ತುಂಬೆಲ್ಲ ಸಂಚರಿಸಿ ಪವಾಡಗಳ ಮೂಲಕ ಜನ-ಮನ ತಿದ್ದಲು ಪ್ರಯತ್ನಿಸಿದರು. ಪ್ರಸ್ತುತ ಅವಧಿಯಲ್ಲಿ ನಿರಸಂಗಿ ಸಂಸ್ಥಾನವನ್ನು ನಾಲ್ಕನೆಯ ಜಾಯಪ್ಪ ದೇಸಾಯ ಕ್ರಿ.ಶ. ೧೮೫೪-೧೮೭೯ ಆಳುತ್ತಿದ್ದನು. ನಂತರ ತ್ಯಾಗವೀರ ಲಿಂಗರಾಜ ದೇಸಾಯಿಯವರು ಕ್ರಿ.ಶ. ೧೮೭೨ ರಿಂದ ೧೯೦೬ ರ ವರೆಗೆ ಸಂಸ್ಥಾನವನ್ನಾಳಿದರು. ಸಿರಸಂಗಿಗೆ ಮೇಲಿಂದ ಮೇಲೆ ಆಗಮಿಸುತ್ತಿದ್ದ ಅಜಾತ ನಾಗಲಿಂಗ ಸ್ವಾಮಿಗಳು ೧೮೫೧ ರಿಂದ ೧೮೮೧ ರ ವರೆಗೆ ಶಿರಸಂಗಿಯಲ್ಲಿ ವಿಶೇಷತಃ ದೇಸಗತಿಯ ವಾಡೆಯಲ್ಲಿ ನಿರಸಂಗಿ ಸಂಸ್ಥಾನದ ವಿನಾಶದ ಮುನ್ಸೂಚನೆಯ ಲಿಂಗರಾಜರ ದಾನಕುರಿತು ಹಲವು ಪವಾಡಗಳನ್ನು ಮಾಡಿಸಿ ಖ್ಯಾತರಾಗಿದ್ದಾರೆ. ಮುಷ್ಟಿಗೇರಿಯ ಗ್ರಾಮದಲ್ಲಿ ಗ್ರಾಮದೇವಿಯ ಅರ್ಚಕನಾದ ಕಾಳಪ್ಪ ಬಡಿಗೇರ ಇವರ ಕೈಯಲ್ಲಿಯ 'ಬೈಬಲ್' ಗ್ರಂಥ ಕಸಿದುಕೊಂಡು ಅದರಲ್ಲಿ ದೊಡ್ಡದಾದ ಕಬ್ಬಿಣ ಮೊಳೆ ಬಡಿದು ಅದರ ಮೂಲಕವಾಗಿ ತಮ್ಮ ಪುನರಾವತಾರದ ಮುನ್ಸೂಚನೆಯನ್ನು ಹೇಳಿ ಎಚ್ಚರಿಸಿ ಹೋದರು. ಸಮಕಾಲಿನ ಅನೇಕ ಸಾಧು ಸಂತರಲ್ಲಿಯೇ ಇವರು ಸರ್ವಶ್ರೇಷ್ಟರು ಎಂದು ಪರಿಗಣಿಸಲಾಗಿದೆ.

ನವಲಗುಂದ ತಾಲೂಕಿನ ಸಾಸ್ವಿಹಳ್ಳಿ ಮತ್ತು ಗುಡಿಸಾಗರಗಳಲ್ಲಿಯ (ಜೋಷಿ ೧೯೭೫:೫) ಆದಿ ಹಳೆಯ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದಂತೆ ಅನೇಕ ಅವಶೇಷಗಳು ಇವೆ. ಇವರ ಕಾಲದಲ್ಲಿ ಅಣ್ಣಿಗೇರಿಯಲ್ಲಿ ಬಸದಿಯೊಂದು ನಿರ್ಮಾಗೊಂಡಿತು. ನೆರೆಯ ಲಕ್ಷ್ಮೇಶ್ವರದಲ್ಲಿ ಬಾದಾಮಿ ಚಾಲುಕ್ಯರ ಸ್ಮಾರಕಗಳು ಉಳಿದು ಬಂದಿವೆ.[೬] ನಂತರ ನವಲಗುಂದ ಪ್ರದೇಶಗಳು ಸವಣೂರಿನ ನವಾಬನಿಂದ ಪೇಶ್ವೆಯ ಆಳ್ವಿಕೆಗೆ ಒಳಪಟ್ಟಿತು. ಹೈದರನು ಕ್ರಿ.ಶ. ೧೭೭೮ ರಲ್ಲಿ ಕೃಷ್ಣ ನದಿಯ ದಕ್ಷಿಣ ಭಾಗವನ್ನು ವಶಪಡಿಸಿಕೊಂಡನು ನಂತರ ಹೈದರನು ನವಲಗುಂದದ ಆದಿಪತ್ಯವನ್ನು ಸ್ಥಳಿಯನಾದ ಲಿಂಗನಗೌಡ ದೇಸಾಯಿಗೆ (೧೭೭೯-೧೮೧೭) ವಹಿಸಿಕೊಟ್ಟನು.

ಲಿಂಗನಗೌಡ ದೇಸಾಯಿವರು ಈ ಪ್ರದೇಶದ ಸಾಂಸ್ಕೃತಿಕ ಬೆಳವಣಿಗೆಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟರು. ನಿರಸಂಗಿಯಲ್ಲಿನ ಪ್ರಾಚೀನ ಸ್ಮಾರಕಗಳು ಹಸರಿಸುವದಾದರೆ ನವಿಲೇಶ್ವರ, ಗೋವಿಂದರಾಜ, ಗಣಪತಿ, ವೆಂಕಟೇ, ವೀರಭದ್ರ, ನಗರೇಶ್ವರ ಗುಡಿ, ಮಾರುತಿ ಮತ್ತು ಬಸವಣ್ಣ ದೇವಾಲಯಗಳು ಆದಿನಾಥಗಾಗಿ ನಿರ್ಮಿಸಿದ ಬಸದಿ ಮುಂತಾದವು ಇಲ್ಲಿಯ ಗಣಪತಿ ದೇವಸ್ಥಾನವನ್ನು ಇಲ್ಲಿ ತಂಗಿದ್ದ ಮರಾಠಾ ಪೇಶ್ವೆಗಾಗಿ ಪೂಜೆ ನಡೆಸಲು ಅದನ್ನು ಒಂದೇ ದಿನದಲ್ಲಿ ದೇಸಾಯಿಯವರು ನಿರ್ಮಿಸಿದರು ಎಂಬ ಪ್ರತಿತ ಇದೆ. ನವಲಗುಂದದ ಸ್ಥಳಿಯ ಕುಶಲಕರ್ಮಿಗಳಿಂದ ತಯಾರಿಸಿದ ಬಣ್ಣ ಬಣ್ಣದ ಜಮಖಾನಗಳು, ಗುಡಾರಗಳು, ಮರದ ತೊಟ್ಟಿಲುಗಳು ಮತ್ತು ವಿವಿಧ ಗೊಂಬೆಗಳು ಇಲ್ಲ ಪ್ರಸಿದ್ಧಿಯಾಗಿವೆ.[೮]

ಚಾರಿತ್ರಿಕೆ ಹಿನ್ನೆಲೆ :

ಪ್ರಾಚೀನ ಕರ್ನಾಟಕವನ್ನು ಮುನ್ನಡೆಸಿದ ಶಕ್ತಿಗಳಲ್ಲಿ ರಾಜಶಕ್ತಿ ಪ್ರಮುಖವಾದುದು. 'ರಾಜಾಕಾಲಸ್ಯಕಾರಣಂ' ಎಂಬ ಸೂಕ್ತ ಅರ್ಥ ಪಡೆಯುವ ನೀತಿಯಲ್ಲಿ ರಾಜ ಮನೆತನಗಳು ಸಮಾಜ ಜೀವನದಲ್ಲಿ ಬಹು ಮುಖ್ಯ ಪಾತ್ರವಹಿಸುತ್ತಿದ್ದವು. ರಾಜ್ಯದ ಉನ್ನತ ಅಧಿಕಾರಿಯಿಂದ ರಾಜನ ಕೈಕೆಗಳಗೆ ಸಾಮಂತರು, ಮಾಂಡಳಿಕರು, ಸಣ್ಣ ಸಣ್ಣ ಪ್ರಾಂತಗಳಲ್ಲಿ ಆಳುತ್ತಿದ್ದರು. ಇವರ ಕೈಕೆಗಳಗೆ ನಾಳ್ಗಾವುಂಡರು ಇವರ ಕೈಕೆಗಳಗೆ ಗಾವುಂಡರು ಹೀಗೆ ರಾಜ್ಯಾಧಿಕಾರ ವ್ಯವಸ್ಥೆ ಚಕ್ರವರ್ತಿಯಿಂದ ಗಾವುಂಡನವರೆಗೆ ವ್ಯಾಪಿಸಿತ್ತು.[೯] ಒಂದು ರಾಜಕೀಯ ಅಥವಾ ನಾಡಿನ ಇತಿಹಾಸ ಎಂದರೆ ನಿಜವಾಗಿ ಜನತೆಯ ಇತಿಹಾಸ ಎಂದರ್ಥ ರಾಜಕೀಯ ಇತಿಹಾಸ ಎಂಬುವದು ಸಾಂಸ್ಕೃತಿಕ ಅಧ್ಯಯನದಲ್ಲಿ ಒಂದು ಭಾಗವಾಗಿದ್ದರು ಸಾಂಸ್ಕೃತಿಕ ಅಧ್ಯಯನದಲ್ಲಿ ಬಹಳ ಮಹತ್ವದ್ದಾಗಿದೆ.

ನವಲಗುಂದ ತಾಲೂಕಿನಲ್ಲಿ ಮೌರ್ಯಶಾತವಾಹನ, ಬನವಾಸಿ ಕದಂಬರು, ಬದಾಮಿ ಚಾಲುಕ್ಯರ ಶಾಸನಗಳು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು ಮತ್ತು ಅನೇಕ ಮಾಂಡಲೀಕರು, ದೇಸಗತಿ ಮನೆತನದವರು ಆಳ್ವಿಕೆ ನಡೆಸಿದ ಕುರಿತು ಅನೇಕ ಶಾಸನಗಳು ಮಾಹಿತಿ ನೀಡುತ್ತವೆ.

೨.೧ ರಾಷ್ಟ್ರಕೂಟರು :

ಈ ತಾಲೂಕಿನಲ್ಲಿಯ ಪ್ರಾಚೀನ ಶಾಸನಗಳು ರಾಷ್ಟ್ರಕೂಟರ ಆಳ್ವಿಕೆಗೆ ಸಂಬಂಧಿಸಿವೆ. ಶವನ ಹಳ್ಳದಲ್ಲಿ ರಾಷ್ಟ್ರಕೂಟರ ಒಂದನೇ ಅಮೋಘವರ್ಷನ ಕ್ರಿ.ಶ. ೮೨೭ ಶಾಸನವಿದ್ದು ಬೆಳ್ವಲ

ಮೂನ್ನೂರರ ಅಧಿಕಾರಿ ದೇವಣ್ಣಯ್ಯನು ಸಿಸುಹಾಳದ ಬ್ರಾಹ್ಮಣರಿಗೆ ತುಪ್ಪದ ಮೇಲಿನ ಸುಂಕವಿನಾಯಿತಿ ಮಾಡಿದ ಉಲ್ಲೇಖವಿದೆ. ಕ್ರಿ.ಶ. ೧೨ ನೇ ಶತಮಾನದ ವೀರಗಲ್ಲುಂದು ಗೋಗ್ರಹಣ ಮತ್ತು ಸಿಸುಹಳ್ಳಿಯನ್ನು ಪ್ರಸ್ತಾಪಿಸಿದೆ. ಉಳಿದೆರಡು ಶಾಸನಗಳು ೧೩ ಮತ್ತು ೧೫ ನೇ ಶತಮಾನಕ್ಕೆ ಸೇರಿದ್ದು ಧಾನಗಳನ್ನು ದಾಖಲಿಸುತ್ತವೆ.[೧೦]

೨.೨ ಕಲ್ಯಾಣದ ಚಾಲುಕ್ಯರು :

ರಾಷ್ಟ್ರಕೂಟರ ನಂತರ ಕರ್ನಾಟಕವನ್ನು ಆಳಿದವರು ಕಲ್ಯಾಣದ ಚಾಲುಕ್ಯರು. ಉತ್ತರ ಕರ್ನಾಟಕದಲ್ಲಿ ಈ ಚಕ್ರವರ್ತಿಗಳು ಮತ್ತು ಇವರ ಸಾಮಂತ ಅರಸರ ಶಾಸನಗಳು ಹೇರಳವಾಗಿ ಸಿಗುತ್ತವೆ. ಪ್ರಸ್ತುತ ನವಲಗುಂದ ತಾಲೂಕು ಇದಕ್ಕೆ ಅಪವಾದವಲ್ಲ ಈ ಸೋಮೇಶ್ವರನ ಕಾಲದಲ್ಲಿ ಅಣ್ಣಿಗೇರಿಯ ಜೈನ ಬಸದಿ ಹತ್ತಿರ ಅಣ್ಣಿಗೇರಿಗೆ ಮತ್ತು ಬಸದಿಗೆ ಧಾನ ನೀಡಿದ ಉಲ್ಲೇಖವಿದೆ.

ಬನಶಂಕರಿ ದೇವಾಲಯದ ಮುಂಭಾಗದಲ್ಲಿ ಇಟ್ಟ ಕಲ್ಲಿನ ಮೇಲೆ ಈ ಶಾಸನ ಇಮ್ಮಡಿ ಕೀರ್ತಿ ವರ್ಮನ ಕಾಲಕ್ಕೆ ಸೇರಿದೆ ಇದು ಆತನ ೬ನೇ ವರ್ಷದ ಆಳ್ವಿಕೆಯದು. ಈ ಶಾಸನ ಜೇಬುಳಗೇರಿ ಗಾಮುಂಡ ಕಲಿಯಮ್ಮ ಜೇದಿಯು ಜೈನ ದೇವಾಲಯವನ್ನು ಕಟ್ಟಿಸಿದ್ದನ್ನು ದಾಖಲಿಸುತ್ತದೆ. ಕೊಂಡುಕುಲದ ಕುಪ್ಪಕೀರ್ತಿಇ ವರ್ಮನು ಈ ದೇವಾಲಯದ ಮುಂದೆ ಮೂರ್ತಿಯನ್ನು ಕೆತ್ತಿಸಿದನು.[೧೧]

ಕುರಹಟ್ಟಿ ಶಾಸನ ೧೨ ನೇ ಶತಮಾನದ ಚಾಲುಕ್ಯ ದೊರೆಯ ಕಾಲದ್ದಾಗಿದೆ. ಶಂಕರ ದೇವರಿಗೆ ದೀಪ ಉರಿಸುವದಕ್ಕಾಗಿ ಎಣ್ಣೆಗಾನ ಮತ್ತು ಹಲವಾರು ದಾನಗಳನ್ನು ಮಾಡಿದ್ದನ್ನೂ ದಾಖಲಿಸಿದೆ. ಈ ದಾನವನ್ನು ಅಗ್ರಹಾರದ ಮಹಾಜನಗಳು ಮತ್ತು ಉಳಿದವರು ಮಾಡಿದರೆಂದಿದೆ.

೬ ನೇ ವಿಕ್ರಮಾದಿತ್ಯನ ತರುವಾಯ ಕಾಲ ಶಕ ಪ್ಲವೆಂಗ ೧೦ ಇದು ಕ್ರಿ.ಶ. ೧೮೪೭-೪೮ ಕ್ಕೆ ಸಮವಾಗುತದೆ. ರಾಮರಾಯ ವೆಂಕಟಾದ್ರಿ ತೆರಿಗೆ ವಿನಾಯಿತಿ ನೀಡಿದ ವಿಷಯವನ್ನು ಈ ಶಾಸನ ತಿಳಿಸುತ್ತದೆ. ಕೊಂಡೊಂಚಿ ಮತ್ತು ಸದ್ದೋಜ ಜಾತಿಯವರಿಗೂ ಕೆಲವು ವಿನಾಯಿತಿ ನೀಡಿದ ವಿಷಯವಿದೆ.

ಚಾಲುಕ್ಯರ ಸೋಮೇಶ್ವರ ಕಾಲದ ಕ್ರಿ.ಶ. ೧೧೮೪ ರ ಶಾಸನ ಕಳಚೂರಿಯ ಕಾಲಕ್ಕೆ ಅಗ್ನಿಯಂತಿದ್ದ ವೀರ ಬಮ್ಮರಸನ ದಣ್ಣಾಯಕನು ಗದುಗಿನ ತ್ರಿಕೋಟೆಶ್ವರ ದೇವರಿಗೆ ದತ್ತಿಯನ್ನು ಬಿಡುವ ಕಾಲದಲ್ಲಿ ಅಣ್ಣಿಗೇರಿಯ ವೀರ ಬಮ್ಮೇಶ್ವರ ದೇವಸ್ಥಾನ ಜೀರ್ಣೋದ್ದಾರಕ್ಕೆ ಅಲ್ಲಿ

ನಡೆಯುವ ಪೂಜಿಗೆ ಮತ್ತು ಮಹೇಶ್ವರರ ತೋಟಕ್ಕೆ ಭೂಮಿಯನ್ನು ಧಾನ ಮಾಡಿದ್ದನೆಂದು ಉಲ್ಲೇಖಿಸುತ್ತದೆ. ಈ ದಾನದ ಮೇಲ್ವಿಚಾರಣೆಯನ್ನು ಜೈನರಿಗೆ ಕಾಲೂಪನಾದ ವೀರಗೊಗ್ಗಿ ದೇವರಸನು ನೋಡಿಕೊಳ್ಳುವನೆಂದು ಹೇಳಿದೆ.[೧೨] ಈ ಮೇಲೆ ಉಲ್ಲೇಖಿಸಿದ ಶಾಸನಗಳಿಂದ ಅಣ್ಣಿಗೇರಿಯಲ್ಲಿ ಐದು ಬ್ರಹ್ಮಪುರಿಗಳು ನರಕೇಶ್ವರ ಚಂಡಿಕಾದೇವಿ, ನಾಗೇಶ್ವರ ದೇವಾಲಯ, ವೀರ ಬಮ್ಮೋಶ್ವರನ ಗುಡಿ ಮೊದಲಾದವುಗಳು ಇದ್ದವುಯೆಂದು ತಿಳಿದು ಬರುತ್ತದೆ.

ಮೈಲಾರ ದೇವರ ಗುಡಿಯ ಮುಂದಿರುವ ಚಾಲುಕ್ಯ ತ್ರಿಭುವನ ಮಲ್ಲನ ೬ ನೇ ವಿಕ್ರಮಾದಿತ್ಯನ ಶಾಸನ ಆತ್ರೆಯ ಗೋತ್ರದ ಮಹಾಮತ್ಯ ರಾಜ್ಯಾದಕ್ಷ್ಯ ಬಲದೇವಯ್ಯ ನಾಯಕನು ಕೆಲವು ಹಣವನ್ನು ಶ್ರಾವಣ ಮಾಸದ ಪೂರ್ಣಮೇಯ ದಿನ ಬ್ರಾಹ್ಮಣರ ದಕ್ಷಿಣಿಗೆ ವಿನಿಯೋಗಿಸುವದಕ್ಕಾಗಿ ಕೊಟ್ಟಿದ್ದಾನೆಂದು ಉಲ್ಲೇಖಿಸಿದೆ. ಈ ಶಾಸನದ ಕಾಲ ಕ್ರಿ.ಶ. ೧೦೯೭ ಅಣ್ಣಿಗೇರಿಯ ಮತ್ತೊಂದು ಐತಿಹಾಸಿಕ ಸಂಗತಿಯಿಂದಲೂ ಕಾವೇರಿ ನದಿಯ ದಡದಲ್ಲಿರುವ ರಾಜಧಾನಿ ಪಟ್ಟಣವಾದ ಉರೈಯಾರು ಚೋಳರಿಗೂ ಮೇಲಿಂದ ಮೇಲೆ ಕದನಗಳಾಗುತ್ತಿದ್ದವು. ಬಲಾಢ್ಯರಾದ ಚೋಳರು ಹಿಂದಿನ ಮೈಸೂರು ಸಂಸ್ಥಾನದ ಕೆಲವು ಭಾಗ ತಮ್ಮ ಪೃಅಕ್ರಮದಿಂದ ಆಕ್ರಮಿಸಿರುವದಲ್ಲದೆ ಬಳ್ಳಾರಿ ಜಿಲ್ಲೆ ಹಿಂದಿನ ಹೈದ್ರಾಬಾದ, ಕರ್ನಾಟಕದ ಕೆಲವು ಪ್ರದೇಶಗಳ ಮೇಲೆ ದಾಳೀ ಮಾಡುತ್ತಿದ್ದರು. ಅಲ್ಲದೆ ಅವರು ಕೋಲಾಪುರದ ವರೆಗೆ ಸಾಗಿ ಹೋಗಿದ್ದರೆಂದು ಇತಿಹಾಸ ತಿಳಿಸುತ್ತದೆ.[೧೩] ಕಲ್ಯಾಣದ ಚಾಲುಕ್ಯರು ಚೋಳರ ಬಲವನ್ನು ಮುರಿಯಲು ಹೆಣಗಾಡಿದರು. ಚಾಲುಕ್ಯ ಚೋಳರಲ್ಲಿ ಆದ ಯುದ್ಧಗಳಲ್ಲಿ ಒಂದು ಅಣ್ಣಿಗೇರಿಯ ಸೀಮೆಯೊಳಗೆ ಆಯಿತು. ಚಾಲುಕ್ಯರ ೧ ನೇ ಸೋಮೇಶ್ವರನ ಕಾಲಕ್ಕೆ ಕ್ರಿ.ಶ. ೧೦೪೨ ರಲ್ಲಿ ಚೋಳರು ಪ್ರತಿಸನಗರ ಲಕ್ಷ್ಮೇಶ್ವರದ ಮೇಲೆ ಬರದಿಂದ ದಂಡೆತ್ತಿ ಬಂದು ಅಲ್ಲಿಯ ಜೈನ ಬಸದಿಗಳನ್ನು ಧ್ವಂಸ ಮಾಡಿದರು. ಚೋಳರಾಜನಾದ ಒಂದನೇ ರಾಜಾಧಿರಾಜನು ಸ್ವತಃ ಈ ದಾಳಿಯ ನಾಯಕತ್ವವನ್ನು ವಹಿಸಿಕೊಂಡು ಬಂದಿದ್ದನೆಂದು ತಿಳಿದು ಬರುತ್ತದೆ. ಈ ಚೋಳ ರಾಜನ ಶೈವ ಧರ್ಮದವನಾಗಿರುವದರಿಂದ ಬೆಳ್ವಲನಾಡನ್ನು ಹೊಕ್ಕು ಗಂಗಪೆರ್ಮಾಡಿಯು ಅಣ್ಣಿಗೇರಿಯಲ್ಲಿ ಕಟ್ಟಿಸಿದ ಜೈನ ಬಸದಿಗಳನ್ನು ನಾಸಗೊಳಿಸಿದನು. ಆದರೆ ಅವನು ಇಲ್ಲಿಂದ ಬದುಕಿ ಹಿಂತಿರುಗಲಿಲ್ಲ. ಈ ಅಣ್ಣಿಗೇರಿಯ ಕಾಳಗದಲ್ಲಿ ೧ ನೇ ಸೋಮೇಶ್ವರನೊಡನೆ ಮರಣ ಹೊಂದಿದನು. ಎಂದು ಅಣ್ಣಿಗೇರಿ ಶಾಸನದಿಂದ ತಿಳಿದುಬರುತ್ತದೆ.

೨.೩ ಕಲಚೂರಿಯರು :

ಕಲ್ಯಾಣದ ಚಾಲುಕ್ಯರನ್ನು ತಳ್ಳಿ ಅಧಿಕಾರಕ್ಕೆ ಬಂದವರು ಕಲಚೂರಿಯರು. ಈ ಅಂಶದ ಬಗ್ಗೆ ನವಲಗುಂದ ತಾಲೂಕಿನಲ್ಲಿ ಸಿಗುವದು ಅಣ್ಣಿಗೇರಿಪುರದ ವೀರಪ್ಪ ದೇವಾಲಯದಲ್ಲಿ ಅಶ್ವತ್ಥಕಟ್ಟಿ ಮರದ ಕಟ್ಟೆಯ ಅದಿಷ್ಠಾನದಲ್ಲಿ ಇರುವ ಶಾಸನದಿಂದ ಲಿಪಿಯ ದೃಷ್ಟಿಯಿಂದ ಈ ಶಾಸನದ ಕಾಲ ಕ್ರಿ.ಶ. ೧೧-೧೨ ನೇ ಶತಮಾನ ಈ ಬಿಜ್ಜಳ ಮತ್ತು ಆತನ ಬಿರುದು ಚಕ್ರವರ್ತಿಯನ್ನು ಉಲ್ಲೇಖಿಸುತ್ತದೆ. ಅವನು ರಾಯಮುರಾರಿ ಸೋಪಿದೇವನಿರಬಹುದು ಮತ್ತು ಹರಿದೇವ ಚಮೊಪನ ಹೆಸರನ್ನು ತಿಳಿಸುತ್ತದೆ. ಕಳಚೂರಿ ವೆಂಕನಾಯಕನ ಹೆಸರು ಇಲ್ಲಿ ಉಲ್ಲೇಖಿಸಲ್ಪಟ್ಟಿದೆ.

ಉಳವಿ ಬಸಪ್ಪ ದೇವಾಲಯದ ಮುಂದೆ ಕಳಚುರ್ಯ ಬಿಜ್ಜಳನ ಕಾಲದಲ್ಲಿ ಕ್ರಿ.ಶ. ೧೧೬೨ ರಲ್ಲಿ ಬರೆದ ಶಾಸನವಿದೆ. ಇದರಲ್ಲಿ ಪಟ್ಟಣವರ್ಗಡೆಯಾದ ದಂಡನಾಯಕ ಶೀಧರಯ್ಯನು ಚಂಡಿಕಾದೇವಿಯ ಪೂಜೆಗೆ ಮತ್ತು ನೈವಿದ್ಯಕ್ಕೆ ಭೂಮಿಯನ್ನು ದಾನ ಮಾಡಿದನೆಂದು ಹೇಳಿದೆ.[೧೪]

೨.೪ ಹೊಯ್ಸಳರು :

ಕಲಚೂರಿ ಅರಸರ ನಂತರ ಬಂದವರು ಹೊಯ್ಸಳರು ಈ ಮಠದ ಬಗ್ಗೆ ನವಲಗುಂದ ತಾಲೂಕಿನಲ್ಲಿ ಕುರುಹುಗಳಿವೆ. ಅಣ್ಣಿಗೇರಿಯ ಅಮೃತೇಶ್ವರ ಗುಡಿಯ ಮಂಟಪದೊಳಗೆ ವೀರಬಲ್ಲಾಳನ ೧೫ನೇ ವರ್ಷದ ಕ್ರಿ.ಶ. ೧೨೦೫ ರ ಒಂದು ಶಾಸನವಿದೆ. ಈ ಶಾಸನವು ಇಮ್ಮಡಿ ವೀರ ಬಲ್ಲಳನ ಕಾಲಕ್ಕೆ ಸೇರಿದೆ. ಮಾಂಡಳಿಕನಾದ ದಾಚಣನು ಅಣ್ಣಿಗೇರಿ ರಾಜಧಾನಿಯಿಂದ ಆಳುತ್ತಿದ್ದನು. ಅದರಲ್ಲಿ ಅಮೃತೇಶ್ವರ ದೇವರಿಗೆ ದಾನ ಮಾಡಿದ್ದನು. ವಿವರಿಸಿದೆ. ಶಾಸನದ ಕೊನೆಯಲ್ಲಿ ವೀರಬಲ್ಲಾಳ ದೇವರ ಹೆಸರನ್ನು ಹೆಸರಿಸಿದೆ. ಅದೇ ಗುಡಿಯ ಪ್ರಕಾರದಲ್ಲಿ ಮತ್ತೊಂದು ಶಾಸನವು ಹೊಯ್ಸಳ ೨ನೇ ವೀರಬಲ್ಲಾಳನ ೧೨ ನೇ ವರ್ಷದಲ್ಲಿ ಅಂದರೆ ಕ್ರಿ.ಶ. ೧೨೦೨ ರಲ್ಲಿ ಬರೆಯಲ್ಪಟ್ಟಿದೆ. ಇದು ವೀರ ಬಲ್ಲಳನ ಅಮೃತ (ಅಮೃತಕಲ್ಲು) ಮಸಣಯ್ಯ ಬಸವ ಎಂಬ ದಂಡ ನಾಯಕರಲ್ಲಿ ಒಬ್ಬನಾದ ಬಸವಯ್ಯ ದಂಡನಾಯಕನ ಸ್ವಯಂಭು ಅಮೃತೇಶ್ವರ ದೇವರ ಪೂಜೆಗಾಗಿ ಭೂದಾನ ಮಾಡಿದನೆಂದು ಉಲ್ಲೆಖಿಸುತ್ತದೆ.[೧೫]

ಆರಂಭದಲ್ಲಿ ಸಾಮಂತರಾದ ಯಾದವರು ತಮ್ಮ ಆಶ್ರಯರಾದ ಕಲ್ಯಾಣದ ಚಾಲುಕ್ಯರನ್ನು ಪದಚ್ಯೂತಿಗೊಳಿಸಿ ಕರ್ನಾಟಕದ ಚಕ್ರವರ್ತಿಗಳಾದರು. ಈ ತಾಲೂಕಿನಲ್ಲಿ ಸಿಗುವ ಈ ಮನೆತನಕ್ಕೆ

ಸಂಬಂಧಿಸಿದಂತೆ ಅಮೃತೇಶ್ವರನ ದೇಗುಲದ ಪ್ರಕಾರದಲ್ಲಿ ಬಲ್ಲಮದೇವನ ಕ್ರಿ.ಶ. ೧೧೮೯ ರ ಒಂದು ಶಾಸನವಿದೆ ಸ್ವಯಂಭು ಅಮೃತೇಶ್ವರ ದೇವರಿಗೆ ಪ್ರತಿ ಅಮಾಸ್ಯೆಯ ಪೂಜೆ ಮತ್ತು ನೈವಧ್ಯಕ್ಕಾಗಿ ಮಹಾಮಂಡವೇಶ್ವರ ಬಾಚಿದೇವರಸನು ದಾನ್ಯವನ್ನು ಧಾನ ಮಾಡಿದ್ದಾನೆ. ಈ ದಾನವನ್ನು ರಾಜರು ತ್ರಿವರ್ಗದವರು ಸಮಯಗಳು ಮತ್ತು ಒಂದು ಸಾವಿರ ದೇವಪುತ್ರರು, ಮಹಾಜನರು, ಮಗಾಡನಗಳು, ರಕ್ಷಿಸುವರೆಂದ ಇದರಲ್ಲಿ ಹೇಳಿದೆ. ದೇವಪುತ್ರರು ಎಂಬ ವಿಶೇಷಣ ಇಲ್ಲಿ ಲಕ್ಷಿಸತ್ಕಂತಹದು. ಈ ಮಹಾಜನರು ದೇವರಿಗೆ ಒಳ್ಳೆಯ ಪ್ರೀಯರಾದವರು. ಎಂದರೆ ಅಂತಹ ಸಜ್ಜನಿಕೆ ಅವರದು. ಅಂತಹ ಸುಚಾರಿತ್ರ ಅವರದು.

೨.೬ ವಿಜಯನಗರದ ಅರಸರು :

ನವಲಗುಂದ ತಾಲೂಕಿನಲ್ಲಿ ವಿಜಯನರದ ಅರಸರ ಶಾಸನಗಳು ಗುಡಿಸಾರದ ಹಡಪದ ಮಲ್ಲೇಶ್ವರಪ್ಪ ಮನೆಯ ಸಮೀಪದಲ್ಲಿರುವ ಕ್ರಿ.ಶ. ೧೫೪೭ ಜೂನ ೨೭ ರ ಶಾಸನವು ಕ್ಷೌರಿಕನಿಗೆ ದಾನ ಮಾಡಿದ್ದನ್ನು ಹೆಸರಿಸಿದೆ. ಶಾಸನದಲ್ಲಿ ಸದಾಶಿವರಾಯನ ಹೆಸರನ್ನು ಉಲ್ಲೇಖಿಸಲಾಗಿದೆ. ಉಳಿದ ವಿರ ಅಸ್ಪಷ್ಟ ಅಣ್ಣಿಗೇರಿಯ ಅಮೃತೇಶ್ವರ ದೇವಾಲಯದ ದಕ್ಷಿಣದ್ವಾರದ ಬಲಬದಿಯಲ್ಲಿರುವ ಅಚ್ಯುತರಾಯನ ಕ್ರಿ.ಶ. ೧೫೩೯ ರ ಶಾಸನವು ಬಾಸ್ಕರ ಕ್ಷೇತ್ರದಲ್ಲಿ (ಹಂಪಿಯಲ್ಲಿ) ವಿಠಲೇಶ್ವರ ದೇವರ ಮುಂದೆ ರಾಜಯ ಬ್ರಾಹ್ಮಣರಿಗೆ ಕೊಟ್ಟ ಆನಂದ ವಿಧಿ ಎಂಬ ದಾನವನ್ನು ಅಮೃತೇಶ್ವರ ದೇವಾಲಯದಲ್ಲಿನ ಶಾಸನದಲ್ಲಿ ಉಲ್ಲೇಖವಿದೆ.

ಅಡಿಟಿಪ್ಪಣಿಗಳು :

೧. ಸೂರ್ಯನಾಥ ಕಾಮತ್, ಪುಟ-೮೦, ಧಾರವಾಡ ಜಿಲ್ಲಾ ಗೆಜೆಟಿಯರ್, ಪುಟ-೮.

೨. ಚನ್ನಕ್ಕ ಪಾವಟೆ, ಪುಟ-೨೧.

೩. ಅಮೃತ ಮಹಾದೇವ ಅಣ್ಣಿಗೇರಿ, ಪುಟ-೪.

೪. ಅದೇ ಪುಟ-೧.

೫. ಸಿ. ಮಹದೇವ, ಧಾರವಾಡ ಜಿಲ್ಲೆಯ ದೇವಾಲಯ ಕೋಶ, ಪುಟ-೧೭.

೬. ಅಮೃತ ಮಹಾದೇವ ಅಣ್ಣಿಗೇರಿ, ಅಣ್ಣಿಗೇರಿಯ ದೇವಾಲಯಗಳು, ಪುಟ-೧೨

೭. ಸಿ. ಮಹದೇವ, ಧಾರವಾಡ ಜಿಲ್ಲೆಯ ದೇವಾಲಯ ಕೋಶ, ಪುಟ-೧೫.

೮. ಸೂರ್ಯನಾಥ ಕಾಮತ್, ಧಾರವಾಡ ಜಿಲ್ಲಾ ಗೆಜೆಟಿಯರ್, ಪುಟ-೫೩.

೯. ಎಂ.ಎಂ. ಕಲಬುರ್ಗಿ, ಧಾರವಾಡ ಜಿಲ್ಲೆಯ ಶಾಸನ ಸೂಚಿ, ಪುಟ-೬.

೧೦. ಸಿ. ಮಹದೇವ, ಧಾರವಾಡ ಜಿಲ್ಲೆಯ ದೇವಾಲಯ ಕೋಶ, ಪುಟ-೧೫೧.

೧೧. ಅದೇ ಪುಟ-೧೨೩.

೧೨. ಅಮೃತ ಮಹಾದೇವ ಅಣ್ಣಿಗೇರಿ, ಅಣ್ಣಿಗೇರಿಯ ದೇವಾಲಯಗಳು, ಪುಟ-೨೧.

೧೩. ಅದೇ ಪುಟ-೨೨.

೧೪. ಎಂ.ಎಂ. ಕಲಬುರ್ಗಿ, ಧಾರವಾಡ ಜಿಲ್ಲೆಯ ಶಾಸನ ಸೂಚಿ, ಪುಟ-೨೧.

೧೫. ಅಮೃತ ಮಹಾದೇವ ಅಣ್ಣಿಗೇರಿ, ಅಣ್ಣಿಗೇರಿಯ ದೇವಾಲಯಗಳು, ಪುಟ-೧೯.

೧೬. ಅದೇ ಪುಟ-೧೪.

ಅಧ್ಯಯ – ಮೂರು

ಕೆರೆಗಳ ವಿವರಣೆ

ಎ) ವಡ್ಡುಗಳ ನಿರ್ಮಾಣ

ಬಿ) ತೂಬು ರಚನೆ

ಸಿ) ಕಾಲುವೆಗಳ ವ್ಯವಸ್ಥೆ

ಡಿ) ಕೋಡಿಗಳು

ಇ) ಕೆರೆಗಳ ನಿರ್ವಹಣೆ

ಅಧ್ಯಾಯ–ಮೂರು

ಕೆರೆಗಳ ವಿವರಣೆ

ಗ್ರಹಗಳಲ್ಲಿ ಒಂದಾದ ಭೂಗ್ರಹದಲ್ಲಿ ಅತೀ ಹೆಚ್ಚು ಪ್ರಮಾಣದ ನೀರು ಇರುವುದರಿಂದ ಇದನ್ನು ನೀಲಿಗ್ರಹ ಎಂದು ಕರೆಯುತ್ತಾರೆ. ಭೂಮಿಯ ಮೇಲಿನ ನೀರು ಅನೇಕ ವಿಧದಲ್ಲಿ ಕಂಡು ಬರುತ್ತದೆ. ಉದಾಹರಣೆಗೆ ಸಾಗರಗಳು, ಸಮುದ್ರಗಳು, ನದಿಗಳು ಮತ್ತು ಹಳ್ಳಗಳಲ್ಲಿ ಹಂಚಿ ಹೋಗಿದೆ. ಮಾನವನ ಜಾಣ್ಮೆಯತೆಯಿಂದ ನದಿಗಳಿಗೆ ಅಡ್ಡಲಾಗಿ ಆಣೆಕಟ್ಟುಗಳನ್ನು ಮತ್ತು ತಡೆಗೋಡೆಗಳನ್ನು ನಿರ್ಮಿಸಿ ನೀರನ್ನು ಸಾಕಷ್ಟು ಪ್ರಮಾಣದಲ್ಲಿ ಶೇಖರಿಸಲಾಗಿದೆ. ಅದೇ ನೀರನ್ನು ಕಡಿಮೆ ಪ್ರಮಾಣದಲ್ಲಿ ಅಥವಾ ಸ್ವಲ್ಪ ಮಟ್ಟಿಗೆ ಶೇಖರಣೆ ಮಾಡಿದರೆ ಅದನ್ನು ಸಾಮಾನ್ಯವಾಗಿ ಕೆರೆ ಅಥವಾ ಕಟ್ಟೆ ಎಂದು ಕರೆಯಲಾಗುತ್ತದೆ. ಈ ರೀತಿ ಸಂಗ್ರಹವಾದ ನೀರನ್ನು ಮಾನವನು ತನ್ನ ದಿನನಿತ್ಯ ಬಳಕೆಗೆ, ಪಶುಪ್ರಾಣಿಗಳಿಗೆ ಕಾಲುವೆಗಳ ಮೂಲಕ ತನ್ನ ಆರ್ಥಿಕ ಅಭಿವೃದ್ಧಿಗಳಿಗೆ ಮತ್ತು ವ್ಯವಸಾಯ ಚಟುವಟಿಕೆಗಳಿಗೆ ಹೆಚ್ಚಾಗಿ ಉಪಯೋಗಿಸಿಕೊಳ್ಳಲು ಪ್ರಾರಂಭಿಸಿದ್ದಾನೆ.

ಈ ದೃಷ್ಟಿಯಿಂದ ಪ್ರಪಂಚದಲ್ಲಿ ಅನೇಕ ಪ್ರಯೋಗಗಳು ಹಾಗೂ ಸಂಶೋಧನೆಗಳು ಪ್ರಾಚೀನ ಕಾಲದಿಂದಲೂ ಇಂದಿನವರೆಗೂ ನಡೆಯುತ್ತಲಿವೆ. ಇತಿಹಾಸ ಅವಲೋಕನ ಮಾಡಿದಾಗ ಅನೇಕ ಪ್ರಾಚೀನ ನಾಗರಿಕತೆಗಳಲ್ಲಿ ಮಾನವ ನೀರನ್ನು ಶೇಖರಿಸಿಕೊಂಡು ತನ್ನ ಜೀವನದುದ್ದಕ್ಕೂ ನೀರನ್ನು ಉಪಯೋಗಿಸಿಕೊಂಡಿರುವದನ್ನು ಕಾಣಬಹುದಾಗಿದೆ. ಉದಾಹರಣೆಗೆ ಈಜಿಪ್ತನ ರೇಖಾ ಚಿತ್ರಗಳು. ಪ್ರಾಚೀನ ಇತಿಹಾಸ ತಜ್ಞರ ಪ್ರಕಾರ ಈಜಿಪ್ತನವರೇ ಕೆರೆ ನೀರಾವರಿ ಪದ್ಧತಿಯನ್ನು ಬಳಕೆಗೆ ತಂದರೆಂದು ಅಭಿಪ್ರಾಯಪಟ್ಟಿದ್ದಾರೆ. ಈ ದಿಶೆಯಲ್ಲಿ ಅವಲೋಕನ ಮಾಡಿದಾಗ ಭಾರತದ ಸಿಂಧೂ ನಾಗರೀಕತೆಯು ಈಜಿಪ್ತನಷ್ಟೇ ಪ್ರಾಚೀನವಾದ ಹಾಗೂ ಅದಕ್ಕೆ ಸಮಕಾಲೀನವಾಗಿ ಅನೇಕ ಅವಶೇಷಗಳು ದೊರೆತಿವೆ. ಆದ್ದರಿಂದ ಇವರ ಜೊತೆ ಜೊತೆಯಲ್ಲಿಯೇ ಭಾರತೀಯರು ಕೆರೆ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಂಡಿರಬಹುದು ಎಂಬುದಕ್ಕೆ ಅನೇಕ ಉದಾಹರಣೆಗಳು ದೊರೆತಿವೆ. ಆದ್ದರಿಂದ ಭಾರತದಲ್ಲಿ ನಾಗರಿಕತೆ ಪ್ರಾರಂಭವಾದಾಗಿನಿಂದಲೂ ಕೆರೆ ಆಧಾರಿತ ಕೃಷಿ ಪದ್ಧತಿಯು ಪ್ರಾರಂಭವಾಯಿತು.[೧] ಈ ಸಂಸ್ಕೃತಿಯ ಜನರು ವೈಜ್ಞಾನಿಕ ರೀತಿಯಲ್ಲಿ ನೀರನ್ನು ಉಪಯೋಗಿಸಿಕೊಂಡಿದ್ದಾರೆ ಎಂಬುದಕ್ಕೆ ಇವರ ಅನೇಕ ಸ್ಥಳಗಳಲ್ಲಿ ನೀರಾವರಿ ವ್ಯವಸ್ಥೆಯ ಆಧಾರಗಳು ದೊರೆತಿವೆ. ಉದಾಹರಣೆಗೆ ರಾಜಸ್ಥಾನದ ಗಂಗಾನಗರದ ಜಿಲ್ಲೆಯಲ್ಲಿರುವ ಖಾಲಿಬಂಗಣ ಎಂಬ ಪ್ರದೇಶದಲ್ಲಿ ನೀರಾವರಿ

ಪದ್ಧತಿಯ ಅನೇಕ ಕುರುಹುಗಳು ದೊರೆತಿವೆ.[೨] ಅಲ್ಲದೇ ಅವರ ಒಂದು ಬಾವಿ ವ್ಯವಸ್ಥೆ, ಒಳಚರಂಡಿ ವ್ಯವಸ್ಥೆಯನ್ನು ಗಮನಿಸಿದಾಗ ಅವರು ಉತ್ತಮವಾದ ನೀರಾವರಿ ವ್ಯವಸ್ಥೆಯನ್ನು ಉಪಯೋಗಿಸಿಕೊಂಡಿರುವುದನ್ನು ಕಂಡು ಬರುತ್ತದೆ.

ದಕ್ಷಿಣ ಭಾರತದಲ್ಲಿ ಕ್ರಿಸ್ತ ಪೂರ್ವದಲ್ಲಿ ಬೃಹತ್ ಶಿಲಾಯುಗದ ಸಂಸ್ಕೃತಿಯ ಜನರು ವಾಸಿಸುತ್ತಿದ್ದರು. ಇವರ ಕಾಲಮಾನ ಕ್ರಿಸ್ತ ಪೂರ್ವ ೮೦೦ ರಿಂದ ಕ್ರಿ.ಶ. ೨ನೇ ಶತಮಾನದ ಉತ್ತರ ತಮಿಳುನಾಡಿನಲ್ಲಿ ಸ್ವಾಭಾವಿಕವಾಗಿ ಅನೇಕ ತಗ್ಗು ಪ್ರದೇಶಗಳು ಕಂಡು ಬರುತ್ತವೆ. ಈ ಪ್ರದೇಶಗಳಲ್ಲಿ ಮಳೆ ನೀರು ಸಂಗ್ರಹಗೊಳ್ಳುತ್ತದೆ. ಈ ಸಂಸ್ಕೃತಿಯ ಜನರು ಸ್ವಾಭಾವಿಕವಾಗಿ ಉಂಟಾದಂತಹ ಕೆರೆ ನೀರನ್ನು ಬೆಳೆಸಿಕೊಂಡು ಮೊಟ್ಟಮೊದಲಿಗೆ ದಕ್ಷಿಣ ಭಾರತದಲ್ಲಿ ನೀರಾವರಿ ಪದ್ಧತಿಯನ್ನು ಪ್ರಾರಂಭಿಸಿದರೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.[೩] ದಕ್ಷಿಣ ಭಾರತದ ಬೃಹತ್ ಶಿಲಾಯುಗದ ನೆಲೆಗಳ ಉತ್ಖನನ ನಡೆದಿದ್ದು, ಕೆಲವು ನೆಲೆಗಳಲ್ಲಿ ಭತ್ತ, ರಾಗಿ ಮುಂತಾದ ಧಾನ್ಯಗಳು ದೊರೆತಿರುವುದರಿಂದ ಅವರು ಅವುಗಳನ್ನು ಬೆಳೆಯುತ್ತಿದ್ದರೆಂದು ದೃಢವಾಗುತ್ತದೆ.[೪]

ಭಾರತದ ಪ್ರಾಚೀನ ಸಾಹಿತ್ಯ ಕೃತಿಗಳಾದ ರಾಮಾಯಣ, ಮಹಾಭಾರತ, ಕೌಟಿಲ್ಯನ ಅರ್ಥಶಾಸ್ತ್ರ ಮುಂತಾದವುಗಳು ಕೆರೆಗಳಿಗೆ ಮತ್ತು ಕೃಷಿಗೆ ಸಂಬಂಧಿಸಿದ ಅನೇಕ ವಿಚಾರಗಳನ್ನು ತಿಳಿಸುವುದರ ಜೊತೆಗೆ ಪ್ರಾಚೀನ ಶಾಸನಗಳು ಸಹ ಕೆರೆಗಳ ಮತ್ತು ಕೃಷಿಗೆ ಸಂಬಂಧಿಸಿದ ಅನೇಕ ವಿಚಾರಗಳನ್ನು ತಿಳಿಸುತ್ತವೆ. ಅವುಗಳಲ್ಲಿ ಶಿವಪುರದ ಬೆಸವ ಭಟ್ಟರ ಅಗ್ರಹಾರ ಕೃಷ್ಣರಾಯ ಸಮುದ್ರ ಎಂಬ ಕೆರೆಗೆ ಸುವರ್ಣ ವರಹಗಳನ್ನು ದಾನವಾಗಿ ಕೊಟ್ಟಿದ್ದನ್ನು ಈ ಶಾಸನವು ಉಲೇಖಿಸುತ್ತದೆ. ಕೆರೆಯ ನಿರ್ವಹಣೆಗಾಗಿ ಈ ದಾನವನ್ನು ಕೊಟ್ಟಿದ್ದಾರೆ ಎಂಬುವುದನ್ನು ವೇದ್ಯವಾಗುತ್ತದೆ. ಕಾಲದ ಉಲ್ಲೇಖವಿಲ್ಲದ ಈ ಶಾಸನವು ಲಿಪಿಯ ಆಧಾರದಿಂದ ಇದು ಕ್ರಿ.ಶ. ೧೬ನೇ ಶತಮಾನದ ಕಾಲದೆಂದು ಗುರುತಿಸಬಹುದು. ಬಹುಶಃ ವಿಜಯನಗರ ಕೃಷ್ಣದೇವರಾಯ ಹೆಸರಿನ ಕೃಷ್ಣರಾಯ ಎಂಬ ಕೆರೆ ನಿರ್ಮಾಣವಾಗಿರಬಹುದು ಎಂಬ ಸಂಶಯ ಉಂಟಾಗುತ್ತದೆ.

ಈ ಶಾಸನವು ಕೆರೆಗೆ ಸಂಬಂಧಿಸಿದ ಅನೇಕ ವಿವರಗಳನ್ನು ನೀಡುತ್ತದೆ. ಒಂದು ಕೆರೆಯ ಬಗ್ಗೆ ಪೂರ್ಣ ಇತಿಹಾಸವನ್ನು ನೀಡುತ್ತದೆ. ವಿಶಿಷ್ಠ ಪುಲಮಾಯಿಯ ಮೇಕೆ ದೋಣಿ ಶಾಸನವು ಮೊಟ್ಟ ಮೊದಲಿನ ಬಾರಿಗೆ ಕರ್ನಾಟಕದ ಕೆರೆಯ ಬಗೆಗೆ ಉಲ್ಲೇಖಿಸುತ್ತದೆ. ಕರ್ನಾಟಕದ ಅತ್ಯಂತ ಪ್ರಾಚೀನ ಕೆರೆಗಳಲ್ಲಿ ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ ಕೆರೆಯು ಒಂದಾಗಿದೆ. ಈ ಕೆರೆಯನ್ನು ಕದಂಬರ ರಾಜನಾದ ಮಯೂರವರ್ಮ ನಿರ್ಮಿಸಿದನೆಂದು ಈ ಶಾಸನವು ತಿಳಿಸುತ್ತದೆ.[೫] ಈ

ಪ್ರದೇಶದಲ್ಲಿ ನಡೆಸಿದ ಉತ್ಖನನದಿಂದ ಈ ಕೆರೆಯು ಪ್ರಾಚೀನವಾದುದು ಎಂದು ದೃಢಪಟ್ಟಿದೆ. ಕರ್ನಾಟಕದಲ್ಲಿ ಶಾತವಾಹನರು, ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಚೋಳರು, ಹೊಯ್ಸಳರು, ಸೇವುಣರು ಮತ್ತು ವಿಜಯನಗರದ ಕಾಲದವರೆಗೆ ಕೆರೆ ನೀರಾವರಿ ಕಾಮಗಾರಿಗಳು ಸುಮಾರು ಸಾವಿರ ವರ್ಷಕ್ಕೂ ಹೆಚ್ಚು ಕಾಲ ನಿರಂತರವಾಗಿ ನಡೆಯಿತು.[೬]

ಅದೇ ರೀತಿ ಧಾರವಾಡ ಜಿಲ್ಲೆಯಲ್ಲಿ ಆಳಿದ ಅನೇಕ ಮನೆತನದ ಅರಸರು ಇಲ್ಲಿ ಕೆರೆಗಳನ್ನು ಕಂಡು ಬರುತ್ತದೆ. ಅವರಲ್ಲಿ ಕಲ್ಯಾಣಿ ಚಾಲುಕ್ಯರ ಕಾಲವನ್ನು ಕೆರೆಗಳ ಸುವರ್ಣಯುಗವೆಂದು ಕರೆಯಲಾಗಿದೆ.[೭] ಇವರ ಕಾಲದಲ್ಲಿ ಅಸಂಖ್ಯಾತ ಅಗ್ರಹಾರಗಳು, ಕೆರೆಗಳು ಹಾಗೂ ದೇವಾಲಯಗಳು ಮುಂತಾದವುಗಳನ್ನು ನಿರ್ಮಿಸಲಾಯಿತು. ಉದಾಹರಣೆಗೆ ಉಣಕಲ್ಲಿನ ಚಂದ್ರಮೌಳೇಶ್ವರ ದೇವಾಲಯ, ಸೋಮೇಶ್ವರದ ಈಶ್ವರ ದೇವಾಲಯ, ಅಣ್ಣಿಗೇರಿಯ ದೇವಾಲಯಗಳು ಹಾಗೂ ಮೊರಬ ಪ್ರದೇಶದಲ್ಲಿನ ಮುಂತಾದ ಕೆರೆಗಳನ್ನು ಇಲ್ಲಿ ಹೆಸರಿಸಬಹುದು. ಈ ಕೆರೆಗಳ ಮಹತ್ವದ ಬಗ್ಗೆ ಇಲ್ಲಿಯ ಶಾಸನಗಳಲ್ಲಿ ಉಲ್ಲೇಖಗಳು ದೊರೆತಿವೆ. ಉದಾಹರಣೆಗೆ ನವಲಗುಂದ ತಾಲೂಕಿನ ಭದ್ರಾಪೂರ ಚಾವಡಿಯ ಸಮೀಪ ಶಾಸನವೆಂದು ದೊರೆತಿದ್ದು, ಅದರಲ್ಲಿ ಕೆರೆಯನ್ನು ಅಗೆದ ವ್ಯಕ್ತಿಗಳಿಗೆ ನೀಡಿದ ದಾನದ ಬಗ್ಗೆ ಉಲ್ಲೇಖವಿದೆ.

ಧಾರವಾಡ ಜಿಲ್ಲೆಯ ಐದು ತಾಲೂಕಗಳಲ್ಲಿ ಒಂದಾದ ನವಲಗುಂದ ತಾಲೂಕಿನಲ್ಲಿ ಸುಮಾರು ೧೦೦ ಕ್ಕೂ ಹೆಚ್ಚು ಕೆರೆಗಳಿವೆ. ಆದರೆ ಅವುಗಳಲ್ಲಿ ಕೆಲವೇ ಕೆರೆಗಳ ಬಗ್ಗೆ ಶಾಸನಗಳು ಮಾಹಿತಿ ಒದಗಿಸುತ್ತವೆ. ಉದಾಹರಣೆಗೆ ಭದ್ರಾಪೂರ ಶಾಸನ, ಮೊರಬ ಶಾಸನ ಆದರೆ ಶಾಸನಗಳಲ್ಲಿ ಉಲ್ಲೇಖಿಸಿರುವ ಕೆರೆಗಳು ಇಂದು ಕಂಡು ಬರುವುದಿಲ್ಲ. ನಂತರ ಕಲ್ಯಾಣಿ ಚಾಲುಕ್ಯರ ಮೊರಬದ ಶಾಸನದಲ್ಲಿಯೂ ಕೆರೆಯ ಉಲ್ಲೇಖ ಕಂಡು ಬರುತ್ತದೆ. ಇವುಗಳನ್ನು ಹೊರತುಪಡಿಸಿದರೆ ಈ ತಾಲೂಕಿನಲ್ಲಿ ಸುಮಾರು ೭೦ಕ್ಕೂ ಶಾಸನಗಳು ದೊರೆತಿದ್ದರೂ, ಅವುಗಳನ್ನು ಓದಲು ಸಾಧ್ಯವಾಗಿಲ್ಲ. ಕಾರಣ ಅವುಗಳ ಸವೆತದಿಂದಾಗಿ ಹಾಗೂ ಅವು ಒಡೆದು ಹೋಗಿರುವುದರಿಂದ. ನಮ್ಮ ಕ್ಷೇತ್ರ ಕಾರ್ಯದ ಮೂಲಕ ತಾಲೂಕಿನಲ್ಲಿಯೇ ಸುಮಾರು ೬೦ ಕ್ಕಿಂತಲೂ ಹೆಚ್ಚು ಕೆರೆಗಳಿದ್ದು, ಅವುಗಳನ್ನು ಗಮನಿಸಿದಾಗ ಅವುಗಳಲ್ಲಿ ಕೆಲವೇ ಕೆರೆಗಳು ಅತೀ ಪ್ರಾಚೀನತೆಯಿಂದ ಕೂಡಿರುವುದು ಕಂಡು ಬರುತ್ತದೆ. ಆದರೆ ಅವುಗಳಿಗೆ ಯಾವುದೇ ಆಧಾರಗಳು ದೊರೆಯುವುದಿಲ್ಲ. ಈ ಪ್ರದೇಶದಲ್ಲಿ ನದಿಗಳ ಕೊರತೆ ಇರುವುದರಿಂದ ಮತ್ತು ಕೊಳವೆ ಬಾವಿಗಳ ನೀರು ಅಪ್ರಯೋಜವಾಗಿರುವುದರಿಂದ ಇಲ್ಲಿ ಕೆರೆಗಳು ಹೆಚ್ಚು ಮಹತ್ವವನ್ನು ಪಡೆದಿರುವುದಲ್ಲದೇ ಇಂದು ಅವು ವೈಜ್ಞಾನಿಕವಾಗಿ ತಮ್ಮದೇ ಆದ ಒಂದು ಹೊಸರೂಪ ಪಡೆದುಕೊಂಡಿರುವುದು ಕಂಡುಬರುತ್ತದೆ.

ನವಲಗುಂದ ತಾಲೂಕಿನಲ್ಲಿಯೇ ದಾಟನಾಳ ಕೆರೆಯು ಅತ್ಯಂತ ದೊಡ್ಡದಾದ ಆಧುನಿಕ ಕೆರೆಯಾಗಿದೆ. ಇಲ್ಲಿಯ ಹೆಚ್ಚಿನ ಕೆರೆಗಳು, ಕಾಲುವೆಗಳು, ಕೊಳವೆ ಬಾವಿ ನೀರು ಅವಲಂಬಿಸಿದರೇ ಇನ್ನೂ ಕೆಲವು ಕೆರೆಗಳು ಮಳೆಯನ್ನು ಅವಲಂಬಿಸಿವೆ. ಈ ಪ್ರದೇಶದ ಭೂಸ್ವರೂಪ ಮತ್ತು ಇಲ್ಲಿ ಮಳೆಯಾಗುವ ಪ್ರಮಾಣವನ್ನು ನಿರ್ಧರಿಸಿ ಅತೀ ದೊಡ್ಡದಾದ ಕೆರೆಗಳನ್ನು ನಿರ್ಮಿಸುವುದು ವಿಶಿಷ್ಟವಾಗಿದೆ. ಭೌಗೋಳಿಕ ಲಕ್ಷಣದ ಹಿನ್ನಲೆಯಲ್ಲಿ ಅವುಗಳನ್ನು ನಿರ್ಮಿಸಿರುವುದರಿಂದ ಮಳೆ ನೀರು ಸಹ ಇಲ್ಲಿ ಸಂಗ್ರಹಗೊಳ್ಳುತ್ತದೆ. ಅಲ್ಲದೇ ಅದಕ್ಕೆ ಹೆಚ್ಚು ನೀರು ಬಂದರೂ ಒಡ್ಡುಗಳನ್ನು ಒಡೆದ ಹಾಗೆ ನಿರ್ಮಿಸಿದ್ದಾರೆ.

ಒಂದು ಕೆರೆಯನ್ನು ನಿರ್ಮಿಸಬೇಕಾದರೆ ಏನೆಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು ಎಂಬುವದು ಪ್ರಾಚೀನ ಕಾಲದಿಂದಲೂ ಅನೇಕ ಗ್ರಂಥಗಳಲ್ಲಿ ಮತ್ತು ಶಾಸನಗಳಲ್ಲಿ ಅವುಗಳ ಮಹತ್ವವು ಅಡಗಿದೆ. ಅವುಗಳಲ್ಲಿ ಈ ಕೆಳಕಂಡಂತೆ

- ಕೆರೆಗಳನ್ನು ಕಟ್ಟಿಸುವವನು ಯಾರೇ ಆಗಿರಲಿ ಉದಾಹರಣೆಗೆ ರಾಜನಾಗಿರಲಿ, ಮಂತ್ರಿಯಾಗಿರಲಿ ಹಾಗೂ ಸಾಮಾನ್ಯ ಪ್ರಜೆಯಾಗಿರಲಿ, ಮೊದಲು ಅವನು ಸಂತೃಪ್ತನಾಗಿಯೂ, ಸಂತೋಷದಿಂದ ಕೂಡಿದವನಾಗಿ ಇರುವಂತವನು ಕೆರೆಯ ನಿರ್ಮಾಣಕ್ಕೆ ತೊಡಗಿಸಿಕೊಳ್ಳಬೇಕು.
- ಕೆರೆ ಕಟ್ಟುವವನು ಜನರ ಹಿತವನ್ನು ಬಯಸುತ್ತಿರಬೇಕು. ಅವರ ಜೀವನಕ್ಕಾಗಿ ಮತ್ತು ಅವರ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕೆರೆಯನ್ನು ಕಟ್ಟಿಸಬೇಕು.
- ಜಲಶಾಸ್ತ್ರದಲ್ಲಿ ನೈಪುಣ್ಯತೆಯನ್ನು ಹೊಂದಿರುವವರು ಈ ಕಾರ್ಯದಲ್ಲಿ ತೊಡಗಬೇಕು. ಉದಾಹರಣೆಗೆ ಬ್ರಾಹ್ಮಣರು, ಅಭಿಯಂತರರು.
- ಉತ್ತಮ ಜೇಡಿಮಣ್ಣು ಕೂಡಿರುವಂತಹ ಪ್ರದೇಶವನ್ನು ಕೆರೆ ಕಟ್ಟುವುದಕ್ಕೆ ಆಯ್ದುಕೊಳ್ಳಬೇಕು.
- ಸುತ್ತಲೂ ಬೆಟ್ಟಗಳ ಸಾಲುಗಳು ಇದ್ದಲ್ಲಿ ಅವುಗಳನ್ನು ಕೆರೆಯನ್ನು ನಿರ್ಮಿಸಲು ಉಪಯೋಗಿಸಿಕೊಳ್ಳಬೇಕು. ಕೆರೆಯ ಸಮೀಪದಲ್ಲಿ ಫಲವತ್ತಾದ ಫಲ ಕೊಡುವ ಭೂಮಿ ಇರಬೇಕು.
- ಕೆರೆಯ ಸಮೀಪದಲ್ಲಿ ಫಲ ಕೊಡುವ ಭೂಮಿ ಇರಬೇಕು.
- ಕೆರೆಯ ನೀರಿನ ಹರಿವು ಹೆಚ್ಚು ವಿಸ್ತೀರ್ಣವಾಗಿರಬೇಕು ಹಾಗೆಯೇ ಆಳವಾಗಿರಬೇಕು.
- ಸಮೀಪದಲ್ಲಿಯೇ ಕಲ್ಲುಗಳ ಗಣಿಯಿದ್ದು, ಅಲ್ಲಿ ಉದ್ದವಾದ ಮತ್ತು ಸಮವಾದ ಕಲ್ಲುಗಳು ದೊರೆಯಬೇಕು.

- ಕೆರೆಯ ತೂಬುಗಳಲ್ಲಿನ ಕಲ್ಲು ಅಥವಾ ನಿಯಂತ್ರಕಗಳು ಭದ್ರವಾಗಿರಬೇಕು. ಇದನ್ನು ನೀರಿನ ಒತ್ತಡದಿಂದ ಕಾಪಾಡುವಷ್ಟು ಸದೃಢವಾಗಿರಬೇಕು.
- ಕೆರೆಗಳನ್ನು ಕಟ್ಟುವ ತಂತ್ರಜ್ಞಾನ ಹೊಂದಿರಬೇಕು.

ಕೆರೆಯನ್ನು ಕಟ್ಟಿಸುವವರು ಈ ಮೇಲೆ ಉಲ್ಲೇಖಿಸಿದ ಅಂಶಗಳನ್ನು ಅರಿತುಕೊಳ್ಳುವುದರ ಜೊತೆಗೆ ಕೆಲವು ಮುಖ್ಯವಾದ ಮುನ್ನೆಚರಿಕೆ ಕ್ರಮಗಳನ್ನು ಸಹಿತ ಅನೇಕ ಶಾಸನಗಳಿಂದ ತಿಳಿದು ಬರುತ್ತವೆ. ಅವು ಈ ಕೆಳಗಿನಂತೆ ಇವೆ.

- ಕೆರೆಯಿಂದ ನೀರು ಸೋರಿಕೆಯಾಗಬಾರದು.
- ಕೆರೆಯ ತಳಭಾಗದಲ್ಲಿನ ಮಣ್ಣು ಉಪ್ಪಿನಾಂಶದಿಂದ ಕೂಡಿರಬಾರದು.
- ಕೆರೆಯು ಎರಡು ಪ್ರದೇಶಗಳ ನಡುವಿನ ಗಡಿ ಪ್ರದೇಶದಲ್ಲಿ ಇರಬಾರದು.
- ಅತೀ ಹೆಚ್ಚು ಆಯಾಕಟ್ಟು ಇರುವ ಜಾಗವನ್ನು ಆರಿಸಬಾರದು.
- ಕೆರೆಯ ಮಧ್ಯಭಾಗವನ್ನು ಗಮನಿಸಬೇಕು. ಅವು ಎತ್ತರ ಮತ್ತು ಉದ್ದವಾಗಿರಬಾರದು.
- ಅತ್ಯಲ್ಪ ನೀರು ಬರುವ ಪ್ರದೇಶವನ್ನು ಕೆರೆ ಕಟ್ಟಲು ಆಯ್ಕೆ ಮಾಡಬಾರದು.
- ಸ್ವಲ್ಪ ಭೂಮಿಯಿದ್ದು, ಅಧಿಕ ನೀರು ಬರುವಂತಹ ಉದಾಹರಣೆಗೆ ಅತೀವೃಷ್ಟಿ ಪ್ರದೇಶಗಳನ್ನು ಆಯ್ಕೆ ಮಾಡಬಾರದು.[೮]

ಹೀಗೆ ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಮೊದಲಿನ ಅರಸರ ಕಾಲದಲ್ಲಿ ತಂತ್ರಜ್ಞಾನ ಎಷ್ಟರ ಮಟ್ಟಿಗೆ ಬೆಳೆದಿತ್ತು ಎಂಬುದು ನಮಗೆ ಅನೇಕ ಶಾಸನಗಳಿಂದ ತಿಳಿದು ಬರುತ್ತದೆ. ಅದರಲ್ಲಿಯೂ ಪ್ರಮುಖವಾಗಿ ಈ ಮೇಲಿನ ಅಂಶಗಳು ವಿಜಯನಗರ ಶಾಸನಗಳಿಂದ ಆಯ್ದುಕೊಳ್ಳಲಾಗಿದೆ. ಇದೇ ರೀತಿ ತಂತ್ರಜ್ಞಾನಗಳನ್ನು ಬಳಸಿಕೊಂಡು ನಿರ್ಮಿತವಾಗಿರುವ ಕೆರೆಗಳು ನವಲಗುಂದ ತಾಲೂಕಿನಲ್ಲಿಯೂ ಕಾಣಬಹುದು.

ಧಾರವಾಡ ಜಿಲ್ಲೆಯ ಪ್ರಮುಖ ತಾಲೂಕುಗಳಲ್ಲಿ ನವಲಗುಂದ ತಾಲೂಕು ಒಂದಾಗಿದೆ. ಈ ತಾಲೂಕಿನಲ್ಲಿ ಅನೇಕ ಕೆರೆ ಕಟ್ಟೆಗಳಿದ್ದು ಇವುಗಳಲ್ಲಿ ಕೆಲವು ಪ್ರಾಚೀನ ಕಾಲದಲ್ಲಿ ನಿರ್ಮಿಸಿದಂತವುಗಳು ಆಗಿವೆ. ಈ ಕೆರೆಗಳು ಇಂದಿಗೂ ಇಲ್ಲಿನ ಕೃಷಿ ವ್ಯವಸಾಯಗಳಿಗೆ ನೀರನ್ನು ಪೂರೈಸುತ್ತಿವೆ. ತಾಲೂಕಿನಲ್ಲಿ ಸುಮಾರು ೬೦ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಕೆರೆಗಳಿವೆ. ಇಲ್ಲಿನ ಹೆಚ್ಚಿನ ಕೆರೆಗಳು ಕಲ್ಯಾಣಿ ಚಾಲುಕ್ಯರ ಮತ್ತು ದೇಸಾಯಿ ಪಾಳೆಗಾರರ ಆಳ್ವಿಕೆ ಕಾಲದಲ್ಲಿ ನಿರ್ಮಾಣವಾದವುಗಳು ಆಗಿವೆ. ಕೆರೆಗಳ ಕಟ್ಟುಪಾಡುಗಳು ಮತ್ತು ರಚನಾ ವಿಧಾನಗಳನ್ನು ಅಲ್ಲಿ ದೊರೆತಿರುವ ಲಿಖಿತ ಆಧಾರಗಳಿಂದ ಗುರುತಿಸಬಹುದು. ಈ ತಾಲೂಕಿನ ಕಲ್ಯಾಣಿ ಚಾಲುಕ್ಯರ

ಕಾಲದ ಕೆರೆಗಳು ಇಂದಿಗೂ ಸಹ ಒಂದು ನಿರ್ದಿಷ್ಟವಾದ ದಿಕ್ಕಿಗೆ ಇರುವುದು ಮತ್ತು ಬಹುತೇಕ ಕೆರೆಗಳು ಮೇಲಿನ ಅಂಶಗಳಿಗನುಗುಣವಾಗಿರುವುದು ಗಮನಾರ್ಹ ಸಂಗತಿ. ಈ ತಾಲೂಕಿನ ಉದ್ದಕ್ಕೂ ಉತ್ತರ ದಿಕ್ಕನ್ನು ಹೊರತುಪಡಿಸಿ ಉಳಿದೆಲ್ಲ ದಿಕ್ಕುಗಳಲ್ಲಿ ನಾವು ಕೆರೆಗಳನ್ನು ಕಾಣಬಹುದಾಗಿದೆ. ಕಾರಣ ಈ ತಾಲೂಕಿನ ಉತ್ತರ ಭಾಗವು ಬೆಟ್ಟ ಪ್ರದೇಶಗಳಿಂದ ಕೂಡಿದ್ದು ಮತ್ತು ಅದು ಬಹಳಷ್ಟು ಎತ್ತರವಾಗಿರುವುದರಿಂದ ಕೆರೆಗಳ ನಿರ್ಮಾಣಕ್ಕೆ ಅನುಕೂಲಕರವಾದ ಪ್ರದೇಶವಲ್ಲ. ಪ್ರಸ್ತುತ ನವಲಗುಂದ ತಾಲೂಕಿನ ಕ್ಷೇತ್ರ ಕಾರ್ಯ ಕೈಗೊಂಡು ಅಲ್ಲಿ ಲಭ್ಯವಿರುವ ಮಾಹಿತಿ ಸಂಗ್ರಹಿಸಿ, ಅವುಗಳ ಹಿನ್ನಲೆಯಲ್ಲಿ ಚರ್ಚಿಸಲಾಗಿದೆ. ಪ್ರಾಚೀನ ಕಾಲದಿಂದಲೂ ಇಲ್ಲಿನ ಕೆರೆಗಳಿಗೆ ಆಯಾ ಊರಿನ ಹೆಸರು ಮತ್ತು ಸ್ತ್ರೀಯರ ಹೆಸರುಗಳು ಇಟ್ಟಿರುವುದು ಸಹಜವಾಗಿದೆ. ಉದಾಹರಣೆಗೆ ದಾಟನಾಳ ಕೆರೆ, ನೀಲಮ್ಮನ ಕೆರೆ, ಚನ್ನಮ್ಮನ ಕೆರೆ, ಇಬ್ರಾಹಿಂಪುರ ಕೆರೆ, ಯಮನೂರ ಕೆರೆ ಮುಂತಾದವುಗಳು ಮತ್ತು ಕೆರೆ ವಿಸ್ತೀರ್ಣವನ್ನು ಸೂಚಿಸುವ ಕೆಲವೊಂದು ಪದಗಳು ಕೆರೆಯ ಹೆಸರಿನ ಜೊತೆಯಲ್ಲಿಯೇ ಬಳಕೆಯಲ್ಲಿವೆ. ಉದಾಹರಣೆಗೆ ಅಮರಗೋಳ ಪ್ರದೇಶದಲ್ಲಿರುವ ಎರಡು ಕೆರೆಗಳನ್ನು ಚಿಕ್ಕ ಕೆರೆ ಮತ್ತು ದೊಡ್ಡ ಕೆರೆ ಎಂದು ಕರೆಯುತ್ತಾರೆ. ಈ ರೀತಿ ಹೆಸರಿನಿಂದ ಕರೆಯುವ ಪದ್ಧತಿ ಅಲ್ಲಿಯ ಜನರಲ್ಲಿ ಇಂದಿಗೂ ಪ್ರಚಲಿತವಿದೆ.

ಫ್ರಾನ್ಸಿಸ್ ಬೂಕಾನನ್ ಕೆರೆ ಮತ್ತು ಕಟ್ಟೆಗಳನ್ನು ಹೀಗೆ ಗುರುತಿಸಿದ್ದಾನೆ. ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ನಿರ್ಮಿಸಲ್ಪಟ್ಟ ಚಿಕ್ಕ ಸರೋವರವನ್ನು ಕಟ್ಟೆ ಎಂದು, ಕೃಷಿ ಭೂಮಿಗೆ ನೀರುಣಿಸುವ ದೊಡ್ಡ ಸರೋವರವನ್ನು ಕೆರೆ ಎಂದು ಕರೆದಿದ್ದಾನೆ.[೬] ಪ್ರಸ್ತುತ ಕ್ಷೇತ್ರ ಕಾರ್ಯದಲ್ಲಿ ಕೆರೆ ಎಂಬ ಪದ ಮಾತ್ರ ಬಳಕೆಯಿದ್ದು, ಹೆಚ್ಚಾಗಿ ಉತ್ತರ ಕರ್ನಾಟಕದ ಕಡೆಗೆ ಅದರಲ್ಲಿಯೂ ಧಾರವಾಡ ಜಿಲ್ಲೆಯಲ್ಲಿಯೇ ಕಟ್ಟೆ ಎಂಬ ಪದವು ಇಲ್ಲದಿರುವುದು ಗಮನಿಸಬೇಕಾಗುತ್ತದೆ. ಈ ಕ್ಷೇತ್ರದಲ್ಲಿಯ ಜನರು ಕೆರೆ ಎಂಬ ಪದವನ್ನೇ ಮಾತ್ರ ಉಪಯೋಗಿಸಿರುವುದು ತಿಳಿದು ಬಂದಿದೆ.

ಕೆರೆಗೆ ನೀರನ್ನು ಒದಗಿಸುವ ಮೂಲದ ಆಧಾರಗಳ ಮೇಲೆ ಈ ತಾಲೂಕಿನಲ್ಲಿ ಕೆರೆಗಳನ್ನು ಮೂರು ಪ್ರಕಾರಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಮೊದಲ ಪ್ರಕಾರದಂತೆ ನದಿಯ ಕಾಲುವೆ ಆಶ್ರಿತ ಕೆರೆಗಳು, ಕೊಳವೆ ಬಾವಿ ನೀರನ್ನು ಅವಲಂಬಿಸಿರುವ ಕೆರೆಗಳು ಮತ್ತು ಮಳೆ ಆಶ್ರಿತ ಕೆರೆಗಳು, ಇವುಗಳಲ್ಲಿ ಹೆಚ್ಚಿನ ಕೆರೆಗಳು ನದಿ ಕಾಲುವೆ ಆಶ್ರಿತ ಕೆರೆಗಳಾಗಿವೆ.

ಮಳೆಯ ನೀರನ್ನು ಆಶ್ರಯಿಸಿರುವ ಕೆರೆಗಳನ್ನು ನಿರ್ಮಿಸುವಾಗ ಪರಿಸರಕ್ಕನುಗುಣವಾಗಿ ಮೂರು ಅಥವಾ ನಾಲ್ಕು ಕೆರೆಗಳನ್ನು ಒಂದಕ್ಕೊಂದು ಹೊಂದಿಕೊಂಡಿರುವಂತೆ ಸಮೀಪದಲ್ಲಿಯೇ ಕಟ್ಟಿರುವುದನ್ನು ಗಮನಿಸಬಹುದು. ಉದಾಹರಣೆಗೆ ಈ ತಾಲೂಕಿನ ಮೊರಬ ಮತ್ತು ತಲೆಮೊರಬದ ಕೆರೆಗಳು. ಇವುಗಳನ್ನು ಸರಣಿ ರೂಪದಲ್ಲಿ ಕಾಣಬಹುದು.

ಈ ಕೆರೆಗಳ ವಿಷಯವಾಗಿ ನಮಗೆ ಪ್ರಥಮವಾಗಿ ಸಿಗುವ ದಾಖಲೆ ಕರ್ನಲ್ ಮೆಕೆಂಜಿ ಮಾಡಿದ ಮೈಸೂರು ಪ್ರದೇಶದ ಸರ್ವೆ (ಸಮೀಕ್ಷೆ) ವಿವರಗಳಲ್ಲಿ ಪ್ರತಿಯೊಂದು ಹೋಬಳಿಯಲ್ಲಿ ಅಂದು ಇದ್ದಂತಹ ಕೆರೆಗಳು ಅದರಲ್ಲಿ ನಮಗೆ ಸಿಗುತ್ತವೆ. ೧೭೯೯ ರಿಂದ ೧೮೦೬ ಆದರೆ ಅವುಗಳಿಂದ ನೀರಾವರಿ ಉಪಯೋಗಪಡೆಯುತ್ತಿದ್ದ ಜಮೀನಿನ ವಿವರವಾಗಲಿ, ಕೆರೆಗಳ ವಿವರವಾಗಲಿ ತಿಳಿಯುವುದಿಲ್ಲ.

ಪ್ರಸ್ತುತ ನವಲಗುಂದ ತಾಲೂಕಿನ ಕೆರೆಗಳನ್ನು ಅಲ್ಲಿನ ಭೌಗೋಳಿಕತೆಗನುಗುಣವಾಗಿ ಹಲವಾರು ಪ್ರಾಚೀನ ಕೆರೆಗಳಿದ್ದು, ಅವುಗಳ ಭಾಗಗಳು ಈ ಕೆಳಗಿನಂತೆ ಇವೆ.

ಏರಿ ನಿರ್ಮಾಣ:

ಏರಿಯು ಕೆರೆಯ ಒಂದು ಪ್ರಮುಖ ಭಾಗವಾಗಿದ್ದು, ಸಾಮಾನ್ಯವಾಗಿ ನವಲಗುಂದ ತಾಲೂಕಿನ ಎಲ್ಲಾ ಕೆರೆಗಳ ಎರಿಗಳು ಮಣ್ಣಿನಿಂದ ನಿರ್ಮಿಸಲಾಗಿವೆ. ಇವು ಕೆರೆಗಳಿಗೆ ಆಧಾರ ಸ್ತಂಭಗಳಾಗಿ ನೀರನ್ನು ಸಂಗ್ರಹಿಸುತ್ತವೆ. ಆದುದರಿಂದ ಈ ಭಾಗವನ್ನು ಅತ್ಯಂತ ಗಟ್ಟಿಯಾಗಿ ಕಟ್ಟಬೇಕಾಗುತ್ತದೆ. ಹೀಗೆ ಏರಿಯನ್ನು ನಿರ್ಮಿಸಲು ಮಣ್ಣನ್ನು ಹಾಕುತ್ತಾ ಹೋಗುತ್ತಾರೆ.[೧೦] ಈ ರೀತಿ ಪದೇ ಪದೇ ಮಾಡುವುದರಿಂದ ಮಣ್ಣು ಚೆನ್ನಾಗಿ ಕೂಡಿಕೊಂಡು ಗಟ್ಟಿಯಾಗುತ್ತಾ ಹೋಗುತ್ತದೆ. ಏರಿಯನ್ನು ನಿರ್ಮಿಸಲು ಕೆರೆಯ ತಳಭಾಗದ ಮಣ್ಣನ್ನು ಬಳಿಸಿಕೊಳ್ಳುವುದರಿಂದ ಕೆರೆಯ ಆಳ ಮತ್ತು ಅಗಲವನ್ನು ವಿಸ್ತಾರವಾಗುತ್ತದೆ ಅಲ್ಲದೇ ನೀರಿನ ಸಂಗ್ರಹದ ಸಾಮರ್ಥ್ಯವು ಹೆಚ್ಚಾಗುತ್ತದೆ. ಕೆರೆ ಏರಿಯ ಎರಡು ಬದಿಗಳು ಇಳಿಜಾರಾಗಿದ್ದು, ಪಾರ್ಶ್ವದ ಇಳಿಜಾರಗಳಿಗನುಗುಣವಾಗಿ ನಿರ್ಮಿಸಲಾಗಿದೆ. ಎರಿಯ ಮೇಲ್ಭಾಗವು ಅಗಲ ಕಿರಿಯಾಗಿದ್ದು, ಜನರು ಮತ್ತು ದನಗಳು ಓಡಾಡುವಷ್ಟು ಜಾಗ ಇರುತ್ತಿತ್ತು. ಆದರೆ ಇಲ್ಲಿಯ ಕೆಲವು ಕೆರೆಗಳ ಏರಿಯು ವಾಹನಗಳನ್ನು ಓಡಾಡುವಷ್ಟು ಅಗಲವಾಗಿವೆ. ಉದಾಹರಣೆಗೆ ದಾಟನಾಳ ಕೆರೆ ಮತ್ತು ಅರೇಕುರಹಟ್ಟಿ ಕೆರೆ.

ಈ ರೀತಿಯಾಗಿ ಏರಿ ನಿರ್ಮಿಸುವುದು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ನಿರ್ಮಾಣವಾಗಿವೆ. ನೀರಿನ ಬದಿಯು ಏರಿ ಹೆಚ್ಚು ಲಂಬಾಕೃತಿಯಾಗಿರುತ್ತದೆ. ಈ ಬದಿಯನ್ನು ದೊಡ್ಡ ದೊಡ್ಡ ಬಂಡೆಗಳಿಂದ ಕಟ್ಟಲಾಗಿದೆ. ಆ ಕಲ್ಲು ಕಟ್ಟಡದ ಕಟ್ಟು ಪಾಡುವು ನೀರಿನ ಅಲೆಗಳ ಹೊಡೆತದಿಂದ ಎರಿಗೆ ಅಪಾಯ ಉಂಟಾಗದಂತೆ ರಕ್ಷಣೆ ಒದಗಿಸುತ್ತವೆ. ಬಂಡೆಕಲ್ಲುಗಳನ್ನು ಆಯಾಕಟ್ಟಿನಲ್ಲಿ ಅಧಿಕವಾಗಿ ಉಪಯೋಗಿಸಿದ್ದಾರೆ. ಈ ಭಾಗವು ಇಳಿಜಾರು ಆಗಿದ್ದು, ಇದನ್ನು ಕಟ್ಟುವಾಡ ಎನ್ನುವರು. ನೀರಿನ ಒತ್ತಡವನ್ನು ವಿರುದ್ಧ

ದಿಕ್ಕಿನಿಂದ ಪಡೆದು ಏರಿಗೆ ಸಾಕಷ್ಟು ಬಲವನ್ನು ಕೊಡುವಲ್ಲಿ ಸಹಾಯವಾಗಿರುತ್ತದೆ. ಏರಿಯ ಹಿಂಬದಿಯ ಇಳಿಜಾರಿಗೆ ಬಾರಿ ಮಳೆ ಬಿದ್ದು ಮಣ್ಣು ಕೊಚ್ಚು ಹೋಗದಂತೆ ಹುಲ್ಲು ಬೆಳೆಸಿ ರಕ್ಷಣೆ ನೀಡಿರುವುದು ಕಂಡು ಬರುತ್ತದೆ. ಈ ತಾಲೂಕಿನ ಕೆಲವು ಕಡೆಯಲ್ಲಂತೂ ಏರಿಯ ಹೊರ ಇಳಿಜಾರಿನಲ್ಲಿ ದೊಡ್ಡ ದೊಡ್ಡ ಮರಗಳು ಇರುವುದು ಕಂಡು ಬಂದಿದೆ. ಉದಾಹರಣೆಗೆ ಶಾನವಾಡ ಕೆರೆ, ಕೊಂಗವಾಡ ಕೆರೆ, ಪಡೆಸೂರ ಕೆರೆ, ಯಮನೂರ ಕೆರೆ ಮುಂತಾದವುಗಳು. ಕೆರೆಯ ಏರಿಯ ಒಳಪಾರ್ಶ್ವವು ಕಲ್ಲು ಕಟ್ಟಡ ಗೋಡೆಯಂತೆ ನಿರ್ಮಾಣವಾಗಿವೆ. ಇಂತಹ ರಚನೆಯು ಕೆಲವು ಕೆರೆಗಳ ಏರಿಯ ಎರಡೂ ಪಾರ್ಶ್ವಗಳಲ್ಲಿ ಕಂಡು ಬರುತ್ತದೆ. ಪ್ರಸ್ತುತ ಕ್ಷೇತ್ರ ಕಾರ್ಯ ಕೈಗೊಂಡ ಸಂದರ್ಭದಲ್ಲಿ ನವಲಗುಂದ ಪರಿಸರದ ಕೆರೆಗಳಲ್ಲಿ ದಾಟನಾಳ ಕೆರೆಯಲ್ಲಿ ಮಾತ್ರ ಈ ರೀತಿಯ ರಚನೆ ಕಂಡು ಬಂದಿದೆ. ನವಲಗುಂದ ತಾಲೂಕಿನಲ್ಲಿ ಕಂಡು ಬರುವ ಎಲ್ಲಾ ಕೆರೆಗಳ ಏರಿಗಳನ್ನು ಅಂಕುಡೊಂಕಾಗಿ ಕಟ್ಟಿದ್ದಾರೆ. ಇದರಿಂದಾಗಿ ನೀರಿನಿಂದ ಏರಿಗೆ ಬೀಳುವ ಒತ್ತಡವು ಸಮಾನವಾಗಿ ಹಂಚಿ ಹೋಗುತ್ತದೆ. ಏರಿ ಒಡೆದಲ್ಲಿ ಅದನ್ನು ಸುಲಭವಾಗಿ ಸರಿಪಡಿಸಲು ಸಹಾಯಕವಾಗುವದು. ಈ ರೀತಿಯ ವ್ಯವಸ್ಥೆ ವೈಜ್ಞಾನಿಕವಾಗಿ ಮಹತ್ವವನ್ನು ಪಡೆದಿದೆ.

ಉದಾಹರಣೆ : ಶಲವಡಿ ಕೆರೆಯ ಏರಿಯು ಸುಮಾರು ೯೦ ಮೀಟರ ಉದ್ದವಾಗಿದೆ. ಯಮನೂರ ಕೆರೆಯ ಏರಿಯು ಸುಮಾರು ೮೫ ಮೀಟರ ಉದ್ದವಾಗಿದೆ.

ತೂಬುಗಳ ರಚನೆ:

ತೂಬುಗಳು ಕೆರೆಯ ಒಂದು ಅವಿಭಾಜ್ಯ ಅಂಗ. ತೂಬುಗಳೇ ಕೆರೆಯ ನೀರನ್ನು ಹೊರಗೆ ಹೋಗದಂತೆ ತಡೆಹಿಡಿಯುವ ಸಾಧನಗಳಾಗಿವೆ. ಇವುಗಳನ್ನು ನಾವು ಇಂದಿನ ನಳಗಳಿಗೆ ಹೋಲಿಸಬಹುದು. ಇವು ಎಷ್ಟು ಇರಬೇಕು ಎಂಬುವದು ಕೆರೆಯ ಗಾತ್ರವನ್ನು ಅವಲಂಬಿಸಿದೆ. ಒಂದೊಂದು ಕೆರೆಗೆ ಒಂದು ಅಥವಾ ಎರಡು ಕೆಲವೊಮ್ಮೆ ದೊಡ್ಡ ಕೆರೆಗಳಿಗೆ ಮೂರು ಹಾಗೂ ನಾಲ್ಕು ತೂಬುಗಳು ಇರುವದು ಅವು ಕರೆಗಳ ಗಾತ್ರ ಮತ್ತು ಸಾಮರ್ಥ್ಯದ ಆಧಾರದ ಮೇಲೆ ಅಳವಡಿಸಿಕೊಳ್ಳಲಾಗುವುದು. ತಾಲೂಕಿನ ಅರೇಕುರಹಟ್ಟಿ ಕೆರೆಯಲ್ಲಿ ಎರಡು ತೂಬುಗಳಿವೆ. ತೂಬುಗಳನ್ನು ಸಾಮಾನ್ಯವಾಗಿ ಕಬ್ಬಿಣದಿಂದ ರಚಿಸಿದ್ದು, ಎರಡು ಕಂಬಗಳಿಂದ ಕೂಡಿರುತ್ತವೆ. ಕಂಬಗಳ ತಲೆಯಲ್ಲಿ ಒಂದು ಗಾಲಿಯಾಕಾರದಂತಿದ್ದು, ಕೆಳಗೆ ಕಬ್ಬಿಣದ ಪಟ್ಟಿಯನ್ನು ಇರಿಸಲಾಗಿದೆ. ಈ ಎರಡು ನಡುವೆ ಕಬ್ಬಿಣದ ಪಟ್ಟಿಯ ಬಾಗಿಲುಗಳಿವೆ. ಮೇಲಿನಿಂದ ಗಾಲಿಯನ್ನು ತಿರುಗಿಸಿದಾಗ ನೀರು ಹೊರಕ್ಕೆ ಹೋಗುತ್ತದೆ. ಮತ್ತೇ ಗಾಲಿ ತಿರುಗಿಸಿದಾಗ ಹೊರ ಹೋಗುವ ನೀರನ್ನು ತಡೆಹಿಡಿಯುತ್ತದೆ.

ತೂಬುಗಳನ್ನು ಕಾಲುವೆಗಳಿಗನುಗುಣವಾಗಿ ವಿವಿಧ ಎತ್ತರಗಳಲ್ಲಿ ಅಳವಡಿಸಲಾಗುತ್ತದೆ. ಕೆರೆಯ ವಿಸ್ತೀರ್ಣತೆ ನೀರು ಸಂಗ್ರಹದ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ತೂಬುಗಳನ್ನು ಅಳವಡಿಸಿಕೊಳ್ಳಲಾಗುವುದು. ತೂಬುಗಳನ್ನು ಸಾಮಾನ್ಯವಾಗಿ ಕೆರೆ ಎರಿಯ ಸುಮಾರು ೧೦ ರಿಂದ ೧೫ ಅಡಿ ದೂರದಲ್ಲಿ ಇರಿಸಲಾಗುವುದು. ಕೆಲವು ತೂಬುಗಳನ್ನು ಕೊಡಿ ಮತ್ತು ಎರಿಗಳಲ್ಲಿ ಅಳವಡಿಸಲಾಗಿದೆ. ದಾಟನಾಳ ಮತ್ತು ಇಬ್ರಾಹಿಂಪೂರ ಕೆರೆಯಲ್ಲಿ ಒಂದು ತೂಬನ್ನು ಕೊಡಿಗೆ, ಮತ್ತೊಂದು ತೂಬನ್ನು ಸುಮಾರು ೧೦ ಅಡಿ ದೂರದಲ್ಲಿ ನಿರ್ಮಿಸಲಾಗಿದೆ. ಅದೇ ರೀತಿ ಸಾಸ್ವಿಹಳ್ಳಿ ಕೆರೆ ಕೊಂಡಿಕೊಪ್ಪ ಕೆರೆಯ ತೂಬುಗಳು ಸುಮಾರು ೧೫ ಅಡಿ ದೂರದಲ್ಲಿವೆ. ಈ ಪರಿಸರದಲ್ಲಿನ ಹೆಚ್ಚಿನ ಕೆರೆಗಳ ತೂಬುಗಳು ಎರಿಯಲ್ಲಿಯೇ ಕಂಡು ಬಂದಿವೆ. ಅವುಗಳಲ್ಲಿ ಮುಖ್ಯವಾಗಿ ಕಡೆದಳ್ಳಿ, ಗುಡಿಸಾಗರ, ಸೊಟಕನಾಳ, ಯಮನೂರು, ನಾಗನೂರು ಕೆರೆಯ ತೊಬುಗಳನ್ನು ಎರಿಗೆ ಅಳವಡಿಸಲಾಗಿದೆ. ವಿಜಯನಗರ ಕಾಲದ ಕೆರೆಗಳ ತೂಬುಗಳನ್ನು ಏರಿಯಿಂದ ಸುಮಾರು ೧೦ ರಿಂದ ೧೫ ಅಡಿ ದೂರದಲ್ಲಿ ಇರಿಸಿದ್ದಾರೆ. ಇದರಿಂದ ಏರಿ, ತೂಬು ಮತ್ತು ಕಾಲುವೆಗಳಿಗೆ ಯಾವುದೇ ವಿಧವಾದ ಅಪಾಯ ಉಂಟಾಗುವುದಿಲ್ಲ.

ತೂಬುಗಳಿಂದ ನೀರು ಹಾಯಿಸುವ ಕಾರ್ಯವನ್ನು ನೀರ್ಘಂಟಿಗಳು ಮಾಡುತ್ತಿದ್ದರು. ನೀರು ಹಾಯಿಸಬೇಕೆಂದಾಗ ಅವರು ಕೆರೆಯಲ್ಲಿ ಈಜುಕೊಂಡು ಹೋಗಿ ತೂಬಿನ ಮರದ ತುಂಡನ್ನು ತೆಗೆದು ನೀರು ಹಾಯಿಸುತ್ತಿದ್ದರು. ಆಯಾಕಟ್ಟಿನ ಪ್ರದೇಶಕ್ಕೆ ಬೇಕಾಗುವಷ್ಟು ನೀರನ್ನು ಹಾಯಿಸಿ ನಂತರ ಮರದ ತುಂಡನ್ನು ತೂಬಿನ ರಂಧ್ರಕ್ಕೆ ಅಳವಡಿಸಿ ಕಾಲುವೆಯ ಬಾಯಿಯನ್ನು ಮುಚ್ಚುವುದರ ಮೂಲಕ ಕೆರೆಯ ನೀರನ್ನು ನಿಯಂತ್ರಿಸುತ್ತಿದ್ದರು. ಆದರೆ ಈ ರೀತಿಯ ವ್ಯವಸ್ಥೆ ನವಲಗುಂದ ಕ್ಷೇತ್ರದಲ್ಲಿ ಕಂಡು ಬಂದಿರುವುದಿಲ್ಲ. ಇತ್ತೀಚಿಗೆ ಕೆಲವು ಕೆರೆಗಳ ನಿರ್ವಹಣೆಯನ್ನು ಸಣ್ಣ ನೀರಾವರಿ ಇಲಾಖೆ ನಿರ್ವಹಿಸುತ್ತದೆ. ಉದಾಹರಣೆಗೆ ಹೆಬ್ಬಾಳ, ಇಬ್ರಾಹಿಂಪೂರ, ಸಾಸ್ವಿಹಳ್ಳಿ ಮುಂತಾದವು ಕೆರೆಗಳಲ್ಲಿ ಮೇಲೆ ವಿವರಿಸಿದ ಕಬ್ಬಿಣದ ತೂಬು ಬಳಕೆಯಲ್ಲಿದ್ದವು. ಆದರೆ ಇತ್ತೀಚಿಗೆ ಮುಚ್ಚಳ ಮತ್ತು ತೊಟ್ಟಿಯ ಮಾದರಿಯ ತೂಬುಗಳನ್ನು ಸಹ ಕೆರೆಗಳಿಗೆ ಅಳವಡಿಸಲಾಗಿದೆ. ಪ್ರಾಚೀನ ಕಾಲದ ಕೆರೆಗಳನ್ನು ಪುನುರುಜ್ಜೀವನಗೊಳಿಸುವ ಸಂದರ್ಭದಲ್ಲಿ ಸರಕಾರದ ನೀರಾವರಿ ಇಲಾಖೆಯವರು ಮೂಲ ತೂಬಿಗೆ ಯಾವುದೇ ವಿಧದ ಧಕ್ಕೆ ಉಂಟಾಗದಂತೆ ಮೇಲ್ಭಾಗಕ್ಕೆ ಕಬ್ಬಿಣದ ಸಲಾಕೆಯನ್ನು ಅಳವಡಿಸಿ ತಿರುಗಿಸುವ ಮೂಲಕ ಯಾಂತ್ರಿಕರಿಸಿದ್ದಾರೆ. ಕೆರೆ ಎರಿಯಿಂದ ತೂಬಿರುವ ಜಾಗವನ್ನು ತಲುಪಲು ಕಲ್ಲಿನ ಸೇತುವೆಯನ್ನು ಸಹ ಅಳವಡಿಸಿದ್ದಾರೆ. ಹೆಚ್ಚಿನ ಕೆರೆಗಳ ತೂಬನ್ನು ತಲುಪಲು ಕಲ್ಲಿನ ಸೇತುವೆಯನ್ನು ನಿರ್ಮಾಣ ಮಾಡಿದ್ದಾರೆ. ಈ ತೂಬಿನ ನಿರ್ವಹಣೆಗೆ ಅನುಕೂಲಕರವಾಗುವಂತೆ ಸ್ವಲ್ಪ ದೂರದಲ್ಲಿಯೇ

ಸುಮಾರು ೨ ಮೀಟರ ಎತ್ತರದ ಚೌಕಾಕಾರದ ಸಿಮೆಂಟ್ ಕಟ್ಟಡವನ್ನು ನಿರ್ಮಿಸಲಾಗಿದೆ. ಕೆಲವೊಂದು ಸಂದರ್ಭದಲ್ಲಿ ಮರದ ಬಾಗಿಲಿಗೆ ಬದಲಾಗಿ ಕಬ್ಬಿಣದ ಬಾಗಿಲನ್ನು ಬಳಸಿದ್ದಾರೆ. ಪ್ರಸ್ತುತ ತಾಲೂಕಿನಲ್ಲಿ ಯಾವುದೇ ಕೆರೆಯ ತೂಬುಗಳನ್ನು ಕಟ್ಟಿಗೆಯಿಂದ ನಿರ್ಮಾಣ ಮಾಡಿರುವುದು ಕಂಡು ಬರುವುದಿಲ್ಲ.

ಕಾಲುವೆಗಳ ವ್ಯವಸ್ಥೆ :

ಕಾಲುವೆಯು ಕೆರೆಯ ಇನ್ನೊಂದು ಭಾಗವಾಗಿದೆ. ಕೆರೆಯ ನೀರನ್ನು ನಿಯಂತ್ರಿಸಿ ಆಯಾಕಟ್ಟು ಪ್ರದೇಶಕ್ಕೆ ನೀರು ಹಾಯಿಸುವ ಮಾರ್ಗಕ್ಕೆ ಕಾಲುವೆ ಎಂದು ಹೆಸರು. ಕಾಲುವೆಗಳನ್ನು ನಾವು ಎರಡು ರೀತಿಯಲ್ಲಿ ವರ್ಗೀಕರಿಸಬಹುದು. ಅದರಂತೆ ಮೊದಲನೆಯದು ಕೆರೆಗೆ ನೀರು ಬರುವ ಕಾಲುವೆ ಎರಡನೆಯದು ಕೆರೆಯಿಂದ ಆಯಾಕಟ್ಟು ಪ್ರದೇಶಕ್ಕೆ ನೀರು ಹಾಯಿಸುವ ಕಾಲುವೆ. ಇವುಗಳಿಗೆ ತೂಬುಗಳನ್ನು ಇರಿಸಿ ಕೆರೆಯ ನೀರನ್ನು ಸಮರ್ಪಕವಾಗಿ ನಿಯಂತ್ರಿಸುತ್ತಿದ್ದರು. ಕಾಲುವೆಯ ಕೆರೆ ಏರಿಯು ಕೆಳಗಡೆಯಿಂದ ಹಾಯ್ದು ಬರುತ್ತದೆ. ಇವುಗಳನ್ನು ಸಹ ಕಲ್ಲುಗಳಿಂದ ಕಟ್ಟಲಾಗಿರುತ್ತದೆ.

ಒಂದು ಕೆರೆಗೆ ಎರಡು, ಮೂರು ಹಾಗೂ ನಾಲ್ಕು ಕಾಲುವೆಗಳಿದ್ದು, ಕೆರೆಯು ತುಂಬಿದಾಗ ಮೇಲ್ಮಟ್ಟದಲ್ಲಿದ್ದ ಕಾಲುವೆಯಿಂದ ನೀರನ್ನು ಹಾಯಿಸಲಾಗುತ್ತಿತ್ತು. ನೀರು ಕೆಳಮಟ್ಟ ಬಂದಾಗ ಕೆಳಮಟ್ಟ ಕಾಲುವೆಯಿಂದ ನೀರನ್ನು ಹಾಯಿಸಲಾಗುತ್ತಿತ್ತು. ಈ ರೀತಿಯ ವ್ಯವಸ್ಥೆಯು ಇಂದಿಗೂ ಪ್ರಚಲಿತದಲ್ಲಿದೆ. ನೀರಾವರಿ ಕಾರ್ಯಗಳಿಗೆಂದೇ ನಿರ್ಮಿಸಲಾದ ಕೆರೆ ಹಾಗೂ ಇತರ ಮೂಲಗಳಿಂದ ನೀರನ್ನು ಹರಿಸುವ ಕಾಲುವೆಗಳನ್ನು ರಕ್ಷಿಸುವುದು ಪ್ರಮುಖ ಕಾರ್ಯ ಎಂದರೆ ಈ ಕಾಲುವೆಗಳು ಇಲ್ಲದೇ ಹೋದಲ್ಲಿ ನೀರಾವರಿ ವ್ಯವಸ್ಥೆ ಇಲ್ಲದಂತಾಗುತ್ತದೆ. ನೀರನ್ನು ಸಂಗ್ರಹಿಸುವ ಮತ್ತು ಅದರ ಸದುಪಯೋಗಕ್ಕೆ ಕಾಲುವೆಗಳ ನಿರ್ಮಾಣ ಅಗತ್ಯವಾಗಿದೆ. ಈ ಕಾಲುವೆಗಳ ಕುರಿತು ಹಲವಾರು ಶಾಸನಗಳಲ್ಲಿಯೂ ಉಲ್ಲೇಖವಿದೆ.

ಕೆಲವು ಕೆರೆಗಳ ಕೊಡಿಗಳಲ್ಲಿ ತೂಬುಗಳಿದ್ದರೆ ತೊಬಿಗೆ ಹೊಂದಿಕೊಂಡಂತೆ ಕಾಲುವೆಗಳು ಕೊಡಿಯಿಂದ ಹೊರಬಂದಿರುತ್ತವೆ. ಇಂತಹ ಕಾಲುವೆಗಳ ರಚನೆ ಶಿರೂರ ಕೆರೆಯ ಉತ್ತರ ದಿಕ್ಕಿನ ಕರೆಯಲ್ಲಿದೆ. ನಲವಡಿ, ಚಿಲಕವಾಡಿ ಕೆರೆಗಳಲ್ಲಿ ಎರಡೆರಡು ಹೊರ ಕಾಲುವೆಗಳಿವೆ. ಅದರಲ್ಲಿ ಅನೇಕ ಸಣ್ಣಪುಟ್ಟ ಕಾಲುವೆಗಳನ್ನು ಜೋಡಿಸಿ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹಾಯಿಸಲಾಗುತ್ತದೆ. ಇಂತಹ ಕಾಲುವೆ ವ್ಯವಸ್ಥೆಗಳು ಈ ಪರಿಸರದ ನಾವಳ್ಳಿ, ಜಾವೂರ, ಬಳ್ಳೂರ, ಕರ್ಲವಾಡ ಮುಂತಾದ ಕೆರೆಗಳಲ್ಲಿ ಕಂಡು ಬಂದಿದೆ.

ಕೋಡಿಗಳು :

ಕೋಡಿಯು ಬಹಳ ಮುಖ್ಯವಾದ ಕೆರೆ ಭಾಗಗಳಲ್ಲಿ ಒಂದಾಗಿದೆ. ಕೋಡಿಯು ಪ್ರದೇಶವನ್ನು ಆಯ್ಕೆ ಮಾಡಿ ಅದನ್ನು ಅಳವಡಿಸುವುದಲ್ಲಿಯೇ ಕೆರೆಯನ್ನು ಕಟ್ಟುವವನಿಗೆ ಇರುವ ಸಾಮರ್ಥ್ಯವನ್ನು ತೋರಿಸಿಕೊಡುತ್ತದೆ. ಸಾಮಾನ್ಯವಾಗಿ ಕೋಡಿಯು ಕೆರೆಯ ನೀರಿರುವ ಯಾವುದಾದರೂ ದಿಕ್ಕಿಗೆ ಇರುತ್ತದೆ. ಏರಿಯ ದಿಕ್ಕಿನಲ್ಲಿ ಇರುವುದಿಲ್ಲ. ಕೆರೆಯಲ್ಲಿ ನೀರು ಸಂಗ್ರಹವಾಗಿ ಗರಿಷ್ಠ ಮಟ್ಟ ತಲುಪಿದಾಗ ಹೆಚ್ಚುವರಿ ನೀರು ಈ ಕೋಡಿಯ ಮೂಲಕ ಹಾಯ್ದು ಹೋಗುತ್ತದೆ. ಅತೀ ಹೆಚ್ಚು ನೀರು ಬಂದಾಗ ಕೆರೆಯ ಏರಿಗೆ ಒತ್ತಡ ಬೀಳುತ್ತದೆ. ಆ ಒತ್ತಡವನ್ನು ತಡೆಯಲು ಕೋಡಿಗಳನ್ನು ಅಳವಡಿಸಲಾಗಿರುತ್ತದೆ. ಒಂದು ಕೆರೆಯ ಕೋಡಿಯ ಮೇಲಿಂದ ನೀರು ಬಿತ್ತೆಂದರೆ ಆ ಕೆರೆಗೆ ಗರಿಷ್ಠ ಮಟ್ಟದ ನೀರು ಬಂದಿದೆ ಎಂದು ಅರ್ಥ. ಕೆಲವೊಂದು ಕಡೆಯಲ್ಲಿ ಕೋಡಿ ಬಿದ್ದು ನೀರು ಹರಿದು ಹೋಗುವ ಪ್ರದೇಶದ ಸಮೀಪದಲ್ಲಿಯೇ ಮತ್ತೊಂದು ಕೆರೆಯನ್ನು ನಿರ್ಮಿಸಿರುವ ಉದಾಹರಣೆಗಳು ತಾಲೂಕಿನಲ್ಲಿ ಸಾಕಷ್ಟು ಸಿಗುತ್ತವೆ. ಅವುಗಳನ್ನು ಈಗಾಗಲೇ ಚರ್ಚಿಸಲಾಗಿದೆ. ಕೆರೆಯ ಗರಿಷ್ಠ ಮಟ್ಟ ಹಾಗೂ ಕೋಡಿಯ ಮಟ್ಟ ಒಂದೇ ಆಗಿರಬೇಕು. ಕೆರೆಯು ಅತೀ ದೊಡ್ಡದಾಗಿದ್ದರೇ ಎರಡು ಕೋಡಿಗಳಿರುವುದನ್ನು ನೋಡಬಹುದು. ಇವುಗಳನ್ನು ಸಾಮಾನ್ಯವಾಗಿ ಕಲ್ಲುಗಾರೆಗಳಿಂದ ಕಟ್ಟುತ್ತಾರೆ. ಕೋಡಿಯ ಇಕ್ಕೆಲುಗಳಲ್ಲಿ ಕೆಲವೊಮ್ಮೆ ಭದ್ರವಾದ ಕಲ್ಲಿನ ಗೋಡೆಯನ್ನು ನಿರ್ಮಿಸಿ ಕೆರೆಯ ಏರಿಯು ಕೋಡಿಯ ಮೇಲೆ ಕುಸಿಯದಂತೆ ಕಾಪಾಡುತ್ತಾರೆ. ಕೆಲವು ಕೆರೆಗಳ ಕೋಡಿಯಲ್ಲಿ ಕಂಬಗಳನ್ನು ಇರಿಸುವ ವಾಡಿಕೆಯಿದೆ. ಕೋಡಿ ಬಿದ್ದ ಸಂದರ್ಭಗಳಲ್ಲಿ ಈ ಕಂಬಗಳ ಮೂಲಕ ಕೆರೆಯ ಏರಿಯ ಒಂದು ತುದಿಯಿಂದ ಮತ್ತೊಂದು ತುದಿಗೆ ಹೋಗಲು ಅನುಕೂಲವಾಗುವಂತೆ ಅಳವಡಿಸಲಾಗುತ್ತದೆ. ಹೆಚ್ಚು ನೀರು ಸಂಗ್ರಹ ಮಾಡಬೇಕೆಂದಾಗ ಆ ಕಂಬಗಳಿಗೆ ಅಡ್ಡಲಾಗಿ ಕೆಲವು ಮರಕಲ್ಲುಗಳನ್ನು ಇರಿಸಿ ನೀರನ್ನು ಶೇಖರಿಸುತ್ತಾರೆ. ಕರ್ನಾಟಕದಲ್ಲಿ ಅತ್ಯಂತ ದೊಡ್ಡ ಕೋಡಿಯು ಶಿವಮೊಗ್ಗ ಜಿಲ್ಲೆಯ ಮದಗಮಾಸೂರ ಕೆರೆಯಲ್ಲಿದೆ. ಇದರ ಉದ್ದವು ೧೫೨ ಅಡಿಯಾಗಿದೆ.[೧೧]

ವಿಜಯನಗರ ಕಾಲದಲ್ಲಿ ಕೆಲವು ತಜ್ಞರು ಕೋಡಿಯನ್ನು ಕಟ್ಟುವುದರಲ್ಲಿಯೇ ಪರಿಣಿತಿಯನ್ನು ಹೊಂದಿದ್ದರು ಎಂಬುದಾಗಿ ಒಂದು ಶಾಸನವು ತಿಳಿಸುತ್ತದೆ. ವೆಂಕಟಪತಿರಾಯನ ಕಾಲದ ರುದ್ರಪ್ಪನಾಯ್ಡು ಎಂಬಾತನು ಕೋಡಿಯನ್ನು ಕಟ್ಟುವುದರಲ್ಲಿ ಪರಿಣಿತಿಯನ್ನು ಹೊಂದಿದ್ದು, ಅವನು ಕೊಲ್ಲೂರು ಕರೆಗೆ ೯೯ ಕಂಬಗಳಿರುವ ಕೋಡಿಯನ್ನು ನಿರ್ಮಿಸಿದ್ದಾನೆ ಎಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.[೧೨]

ನವಲಗುಂದ ಪರಿಸರದ ಹೆಚ್ಚಿನ ಕೆರೆಗಳ ಕೋಡಿಗಳು ದಪ್ಪ ದಪ್ಪ ಕಲ್ಲು ಬಂಡೆಗಳಿಂದ ನಿರ್ಮಾಣವಾಗಿವೆ. ಇಬ್ರಾಹಿಂಪೂರ ಮತ್ತು ಯಮನೂರ ಕೆರೆಯ ಕೋಡಿಗಳು ಸುಮಾರು ೪೦ ರಿಂದ ೫೦ ಅಡಿಗಳಷ್ಟು ಉದ್ದವಾಗಿದ್ದು, ಅವುಗಳ ಸುತ್ತಲೂ ಗಟ್ಟಿಯಾಗಿರುವುದಕ್ಕಾಗಿ ಹುಲ್ಲಿನ ಗಡ್ಡೆಗಳನ್ನು ಹಚ್ಚಲಾಗಿದೆ. ಹಾಗೆಯೇ ಕೊಂಡಿಕೊಪ್ಪ, ಶಾನವಾಡ, ಶಲವಡಿ, ದಾಟನಾಳ ಮುಂತಾದ ಆಧುನಿಕ ಕೆರೆಗಳಿಗೆ ಸಿಮೆಂಟಿನ ಕೋಡಿಗಳನ್ನು ಕಟ್ಟಿಸಿರುವುದರಿಂದ ಅವು ಎತ್ತರವಾಗಿ ಗೋಡೆಯಂತೆ ಕಂಡು ಬರುತ್ತವೆ ಮತ್ತು ಇವುಗಳ ಅನುಸಾರವಾಗಿ ತೂಬುಗಳನ್ನು ನಿರ್ಮಿಸುತ್ತಾರೆ. ಇದರಿಂದ ಕೆರೆಯ ಹೆಚ್ಚುವರಿ ನೀರು ಈ ಕಟ್ಟಡದಲ್ಲಿ ಹರಿದು ಹೋಗುತ್ತದೆ. ಕೆಲವೊಂದು ಕಡೆಗಳಲ್ಲಿ ಹಾಗೆಯೇ ಮಣ್ಣಿನಿಂದ ನಿರ್ಮಿಸಿದ ಕೋಡಿಗಳು ಅಥವಾ ದುರಸ್ಥಿಯಲ್ಲಿರುವ ಕೋಡಿಗಳು ಒಡೆದು ನೀರು ಹರಿದಿರುವುದು ಕಂಡು ಬಂದಿದೆ.

ಕೆರೆಗಳ ನಿರ್ವಹಣೆ :

ಪ್ರಾಚೀನ ಭಾರತದಲ್ಲಿ ಕೆರೆಗಳ ನಿರ್ವಹಣೆಯ ಜವಾಬ್ದಾರಿಯು ರಾಜ ಮತ್ತು ಪ್ರಜೆಗಳ ಮೇಲೆಯೇ ಇತ್ತೆಂಬುವುದು ತಿಳಿಯುವಷ್ಟೇ ಅಲ್ಲದೇ ಪ್ರತಿನಿಧಿಗಳು ಒಂದು ಗ್ರಾಮದ ಅಥವಾ ಮಂಡಲದ ಸಭೆಯ ಸದಸ್ಯರುಗಳು ಸಹ ಈ ಕಾರ್ಯದ ಭಾರವನ್ನು ನಿರ್ವಹಿಸುತ್ತಿದ್ದರು. ಕೆಲವೊಂದು ಸಂದರ್ಭಗಳಲ್ಲಿ ಕೆರೆಯನ್ನು ಕಟ್ಟಿಸಿದವನಿಗೆ ಕೆರೆಯ ರಕ್ಷಣೆ ಮತ್ತು ನಿರ್ವಹಣಾ ಜವಾಬ್ದಾರಿಯನ್ನು ಹೊರಿಸಲಾಗುತ್ತಿತ್ತು ಎಂಬುವುದು ಶಾಸನಗಳಿಂದ ತಿಳಿದು ಬಂದಿರುವ ವಿಷಯ.[೧೩] ಅಂತೆಯೇ ಪ್ರತಿಯೊಂದು ಪ್ರದೇಶದಲ್ಲಿ ಕೆರೆಯನ್ನು ಕಟ್ಟುವ ಮಣ್ಣು ಒಡ್ಡರು ಮುಂತಾದ ಅನುಭವಿಗಳು, ಕುಶಲಕರ್ಮಿಗಳು ಆದ ಕುಸುಬುದಾರರು ಇದ್ದರು. ಕುಶಲಕರ್ಮಿಯರಲ್ಲದೇ ಕೂಲಿಗಳನ್ನು ಮಣ್ಣು ಕೆಲಸಕ್ಕೂ, ಕಲ್ಲು ಕೆಲಸಗಾರರನ್ನು ತೊಬು ರಚನೆಗೂ ನೇಮಿಸಿಕೊಂಡು ಕೆರೆಗಳನ್ನು ಕಟ್ಟಲಾಗುತ್ತಿತ್ತು ಎಂದು ಶಾಸನಗಳಿಂದ ತಿಳಿದು ಬರುತ್ತದೆ. ಉದಾಹರಣೆಗೆ ಭದ್ರಾಪೂರ ಶಾಸನವು ಕೆರೆಯನ್ನು ಅಗಿದ ವ್ಯಕ್ತಿಗಳಿಗೆ ನೀಡಿದ ದಾನವನ್ನು ಉಲ್ಲೇಖಿಸುತ್ತದೆ.

ಮಧ್ಯ ಕಾಲೀನ ಯುಗದಲ್ಲಿ ಅಂದರೆ ಕ್ರಿ.ಶ. ಸುಮಾರು ೧೦ನೇ ಶತಮಾನದಿಂದ ಕೆರೆ ಕಟ್ಟುವ ಕೆಲಸವನ್ನು ಅಂದಿನ ರಾಜಮನೆತನಗಳು ಘೋಷಿಸಿದವು. ಈ ದಿಸೆಯಲ್ಲಿ ಅವರು ಕಾರ್ಯಪ್ರವೃತ್ತರಾಗಲು ಮುಖ್ಯ ಕಾರಣವೆಂದರೆ ಮೇಲೆ ಉಲ್ಲೇಖಿಸಿದ ಶತಮಾನದಲ್ಲಿ ಹವಾಮಾನವು ಬದಲಾಗುತ್ತಾ ಬಂದಿತು. ಅದನ್ನು ಇಂದಿನ ಶತಮಾನದ ಹವಾಮಾನಕ್ಕೆ ಹೋಲಿಸಬಹುದು. ಮಳೆಯು ಸಕಾಲಕ್ಕೆ ಬರುತ್ತಿರಲಿಲ್ಲ. ಅದಕ್ಕಾಗಿ ಹಲವಾರು ಕೆರೆಗಳನ್ನು ನಿರ್ಮಿಸಿದರು.

ಈ ಮೇಲೆ ಉಲ್ಲೇಖಿಸಿದ ನಿರ್ವಾಹಕರೊಂದಿಗೆ ನೀರು ಆಯಾಕಟ್ಟು ಪ್ರದೇಶಗಳಿಗೆ ತೂಬುಗಳನ್ನು ನಿಯಂತ್ರಿಸಿ ಕಾಲುವೆಗಳ ಮುಖಾಂತರ ಹಾಯಿಸುತ್ತಿದ್ದರು. ಇವರ ಈ ಸೇವೆಗೆ ಪ್ರತಿಫಲವಾಗಿ ಆಯಾಕಟ್ಟಿನ ಉಪಯೋಗಕಾರರು ನಿರ್ಧಿಷ್ಟ ವೇತನವನ್ನು ಧನ ಅಥವಾ ಧಾನ್ಯಗಳ ರೂಪದಲ್ಲಿ ನೀಡುತ್ತಿದ್ದರು. ಇಂದಿಗೂ ನವಲಗುಂದ ತಾಲೂಕಿನ ತಡಹಾಳ, ನಾಗರಹಳ್ಳಿ, ಬೆಣ್ಣೂರ ಮುಂತಾದ ಕಡೆಗಳಲ್ಲಿನ ಕೆರೆಗಳ ನೀರನ್ನು ಕೆರೆಯ ಆಯಾಕಟ್ಟಿನ ಪ್ರದೇಶಗಳಿಗೆ ಹಾಯಿಸುತ್ತಾರೆ. ಇವರುಗಳು ವಂಶಪಾರಂಪರಿಕವಾಗಿ ಈ ಕೆಲಸದಲ್ಲಿ ತೊಡಗಿರುವರು. ಇವರು ಕೆರೆಯ ಹೂಳನ್ನು ಎತ್ತುವುದಿಲ್ಲ. ಕೆರೆಗಳು ಭರ್ತಿಯಾಗಿ ಆ ವರ್ಷ ಆಯಾಕಟ್ಟಿನಲ್ಲಿ ವ್ಯವಸಾಯವನ್ನು ಕೈಗೊಂಡರೆ ಮಾತ್ರ ಇವರುಗಳಿಗೆ ಕೆಲಸ ಇಲ್ಲದಿದ್ದರೆ ಈ ನೀರುಗಂಟಿಗಳು ಬೇರೆ ಕಡೆಗಳಲ್ಲಿ ವ್ಯವಸಾಯ ಮತ್ತು ಇತರ ಕೂಲಿ ಕೆಲಸಕ್ಕೆ ಹೋಗಿ ಹೊಟ್ಟೆಯನ್ನು ತುಂಬಿಕೊಳ್ಳುತ್ತಾರೆ.

ನವಲಗುಂದದಲ್ಲಿನ ಕೆಲವು ಕೆರೆಗಳು ಪ್ರಸ್ತುತ ಸರಕಾರದ ನೀರಾವರಿ ಇಲಾಖೆಯವರ ಆಧೀನದಲ್ಲಿವೆ. ಇವುಗಳ ಸಂರಕ್ಷಣಾ ಕಾರ್ಯವನ್ನು ಇಲಾಖೆಯವರೇ ಮಾಡುತ್ತಾ ಬಂದಿದ್ದಾರೆ. ಈ ಕೆರೆಗಳಿಂದ ನೀರನ್ನು ಕಿರಿಯ ಸಹಾಯಕರು ಆಯಕಟ್ಟಿನ ಪ್ರದೇಶಗಳ ಜನರಿಗೆ ನಿರ್ವಹಿಸುತ್ತಾರೆ. ಇವರುಗಳಿಗೆ ಸರಕಾರವೇ ವೇತನವನ್ನು ನೀಡುತ್ತಲಿದೆ. ತಾಲೂಕಿನ ಕೆರೆಗಳಿಗೆ ಮಳೆ ನೀರು ಹರಿದು ಬಂದಾಗ ಅದರೊಂದಿಗೆ ಅಪಾರ ಪ್ರಮಾಣದ ಮಣ್ಣು ಸಹ ಹರಿದು ಬಂದು ಸಂಗ್ರಹವಾಗುತ್ತದೆ. ಈ ಕೆರೆಗಳ ಹೂಳೆತ್ತುವ ಕಾರ್ಯದ ಕಡೆ ಸರಕಾರವು ಗಮನಹರಿಸಬೇಕು. ಹಾಗೂ ಇನ್ನೀತರ ಕಾರ್ಯಗಳೆಂದರೆ ಕೆರೆಯ ಎರಿ ಮಳೆ ಹಾಗೂ ಇತರ ಕಾರಣಗಳಿಂದ ಹಾನಿಗೊಂಡಿದ್ದರೆ ಸರಿಪಡಿಸುವುದು ತೂಬುಗಳು ಮತ್ತು ಕೋಡಿಗಳು ನಾಶವಾಗಿದ್ದರೆ ಕಾಲಕಾಲಕ್ಕೆ ದುರಸ್ತಿ ಮಾಡಿಸುವುದು, ಕೆರೆಗಳನ್ನು ಒತ್ತುವರಿಯಾಗದಂತೆ ರಕ್ಷಿಸುವುದು ಕೆರೆಯ ಗಾತ್ರ ಅವಶ್ಯವಿದಲ್ಲಿ ವಿಸ್ತರಿಸುವುದು ಹಾಗೂ ಮೆಟ್ಟಿಲುಗಳನ್ನು ನಿರ್ಮಿಸುವುದು ಮತ್ತು ನೀರಿನ ಬಳಕೆ ಕುರಿತಾದ ವಿವಾದಗಳನ್ನು ಬಗೆಹರಿಸುವುದು ಈ ಮೇಲಿನ ನಿರ್ವಹಣೆಯ ಕಾರ್ಯದಲ್ಲಿ ತೊಡಗಿದವರಿಗೆ ಕಂದಾಯ ರೂಪದಲ್ಲಿ ರಿಯಾಯಿತಿ ಮತ್ತು ಭೂಮಿ ರೂಪದ ಕೊಡುಗೆಗಳನ್ನು ನೀಡುತ್ತಿರುವುದನ್ನು ಶಾಸನಗಳು ತಿಳಿಸಿವೆ.

ನವಲಗುಂದ ತಾಲೂಕಿನ ಆಯ್ದ ಪ್ರಮುಖ ಕೆರೆಗಳು :

ಕ್ರಮ ಸಂಖ್ಯೆ	ಕೆರೆಯ ಹೆಸರು	ಊರಿನ ಹೆಸರು
೧	ನೀಲಮ್ಮನ ಕೆರೆ	ನವಲಗುಂದ
೨	ಚೆನ್ನಮ್ಮನ ಕೆರೆ	ನವಲಗುಂದ
೩	ಮೊರಬದ ಕೆರೆ	ಮೊರಬ
೪	ದಾಟನಾಳ ಕೆರೆ	ದಾಟನಾಳ
೫	ಅಣ್ಣಿಗೇರಿ ಕೆರೆ	ಅಣ್ಣಿಗೇರಿ
೬	ಶಲವಡಿ ಕೆರೆ	ಶಲವಡಿ
೭	ತೋಟದ ಬಸವೇಶ್ವರ ಕೆರೆ	ಖನ್ನೂರು
೮	ಹಳ್ಳಿಕೇರಿ ಕೆರೆ	ಹಳ್ಳಿಕೇರಿ
೯	ಯಮನೂರು ಕೆರೆ	ಯಮನೂರು
೧೦	ಹೆಬಸೂರು ಕೆರೆ	ಹೆಬಸೂರು
೧೧	ಅಳಗವಾಡಿ ಕೆರೆ	ಅಳಗವಾಡಿ
೧೨	ಬೆಳವಟಿಗಿ ಕೆರೆ	ಬೆಳವಟಿಗಿ
೧೩	ಬದ್ರಾಪೂರು ಕೆರೆ	ಬದ್ರಾಪೂರು
೧೪	ಗುಡಿಸಾಗರ ಕೆರೆ	ಗುಡಿಸಾಗರ
೧೫	ಗುಮಗೋಳ ಕೆರೆ	ಗುಮಗೋಳ
೧೬	ಹಾಳ ಕುಸುಗಲ ಕೆರೆ	ಹಾಳ ಕುಸುಗಲ
೧೭	ಹೆಬ್ಬಾಳ ಕೆರೆ	ಹೆಬ್ಬಾಳ
೧೮	ಇಬ್ರಾಹಿಂಪುರ ಕೆರೆ	ಇಬ್ರಾಹಿಂಪುರ
೧೯	ಜಾವೂರು ಕೆರೆ	ಜಾವೂರು
೨೦	ಕಾಲವಾಡ ಕೆರೆ	ಕಾಲವಾಡ
೨೧	ನಲವಡಿ ಕೆರೆ	ನಲವಡಿ

ನೀಲಮ್ಮನ ಕೆರೆ :

ಈ ಕೆರೆಯು ನವಲಗುಂದ ನಗರದ ಮಧ್ಯಭಾಗದಲ್ಲಿ ಕಂಡುಬರುತ್ತದೆ. ಸಂಪೂರ್ಣ ನವಲಗುಂದ ನಗರದ ಜನರೆಲ್ಲರು ದಿನನಿತ್ಯದ ಬಳಕೆಗೆ ಈ ಕೆರೆಯ ನೀರನ್ನೆ ಅವಲಂಭಿಸಿದ್ದಾರೆ.

ಇದನ್ನು ದೇಸಾಯಿ ಮನೆತನದ ಲಿಂಗರಾಜರು ಎಂಬವರು ಇದನ್ನು ನಿರ್ಮಿಸಿದ್ದಾರೆ. ಸುಮಾರು ೬೦ ವರ್ಷಗಳ ಹಿಂದೆ ಊರಿನಲ್ಲಿ ನೀರಿನ ಸಮಸ್ಯೆ ಉಂಟಾಗಲು ಅದಕ್ಕೊಂದು ಶಾಶ್ವತ ಪರಿಹಾರ ಕಂಡುಕೊಳ್ಳಲು ದೇಸಾಯಿಯವರು ಅವರದೇಯಾದ ಪ್ರದೇಶದಲ್ಲಿ ಅವರ ಮಡದಿಯ ಹೆಸರಿನಲ್ಲಿ ಒಂದು ಕೆರೆಯನ್ನು ಕಟ್ಟಿಸಿದರು. ಅದುವೇ ನೀಲಮ್ಮನ ಕೆರೆ. ಇಂದೂ ಅದಕ್ಕೆ ನೀಲಮ್ಮನ ಜಲಾಶಯ ಎಂದಲೂ ಕೆರೆಯವರು. ಊರಿನಲ್ಲಿ ನಲ್ಲಿಯ ಸೌಕರ್ಯ ಬುರವ ಮೊದಲೆ ಈ ಕೆರೆಯಿಂದಲೇ ತಮ್ಮ ತಮ್ಮ ಕೊಡಗಳಿಗೆ ತುಂಬಿಸಿ ಗಾಡಿಗಳಲ್ಲಿರಿಸಿಕೊಂಡು ಮನೆಮನೆಗೆ ಸಾಗಿಸಿಕೊಡುವ ಕಾರ್ಯಶೀಲರ ಒಂದು ತಂಡದವರಿದ್ದರು.[೧೪]

ಈಗಲೂ ಇದ್ದಾರೆ. ನೀಲಮ್ಮನಿಗೆ ಕೃತಜ್ಞತೆ ಅರ್ಪಿಸುವ ಸಲುವಾಗಿ ಮಾತೋಶ್ರೀ ನೀಲಮ್ಮತಾಯಿ ನೀರುಗಾಡಿ ಸಂಘ ಎಂಬುವದನ್ನು ಸ್ಥಾಪಿಸಿಕೊಂಡಿದ್ದಾರೆ. ಇದರಿಂದ ತಿಳಿಯುವ ವಿಷಯ ಎಂದರೆ ಅಲ್ಲಿ ಕೆರೆಯಿಂದ ನೀರು ತೆಗೆದುಕೊಂಡು ಹೋಗುವುದು ಸಾಮಾನ್ಯವಾಗಿತ್ತು ಎಂದು ತಿಳಿಯಬಹುದು. ಮತ್ತು ಸಂಘದವರೇ ೧೯೯೮ ರಲ್ಲಿ ಈ ಮಹಾತಾಯಿಯ ಮೂರ್ತಿಯೊಂದನ್ನು ಕೆರೆಯ ಎರಡನೇ ಪ್ರವೇಶ ದ್ವಾರದಲ್ಲಿ ನಿರ್ಮಿಸಲಾಗಿದೆ. ಕೆರೆಯ ಸುತ್ತಲೂ ದಂಡೆಯ ಮೇಲೆ ಬೇವಿನ ಮರಗಳ ತಂಪಾದ ನೆರಳಿದೆ.

ಕೆರೆಯು ಸುಮಾರು ೪೦ ಎಕರೆಗಳಷ್ಟು ಪ್ರದೇಶದಲ್ಲಿ ನಿರ್ಮಿಸಲಾಗಿದ್ದು ಊರಿ ಮಧ್ಯದಲ್ಲಿ ಇರುವುದರಿಂದ ಇದನ್ನು ಸುಂದರವಾಗಿ ನಿರ್ಮಿಸಿದ್ದಾರೆ. ಮತ್ತು ಕೆರೆಯ ಸುತ್ತಲೂ ಪ್ರಮುಖವಾಗಿ ಊರಿನ ಹತ್ತಿರ ದಂಡೆಯ ಏಲೆ ಉದ್ಯಾನವನ್ನು ನಿರ್ಮಿಸಿದ್ದಾರೆ. ಮುಂಜಾನೆ ಹಾಗೂ ಸಂಜೆಯ ವೇಳೆ ಅಲ್ಲಿಯ ಜನರು ವಾಯು ವಿಹರ ಮಾಡುವದು ಸಹಜವಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಅಲ್ಲಿ ಜನರು ದುಶ್ಚಟಗಳು ಮಾಡುವದು ದುರಾದೃಷ್ಟಕರ ಸಂಗತಿಯಾಗಿದೆ. ಕೆರೆಯ ನೀರು ಕೊಳಕಾದಂತೆ ರಕ್ಷಕರನ್ನಿಟ್ಟು ರಕ್ಷಿಸುತ್ತಿದ್ದಾರೆ. ಕೆರೆಗೆ ಇಳಿದು ಹೋಗಲು ಪರಿಷ್ಕರವಾದ ಮೆಟ್ಟಿಲುಗಳಿವೆ. ಆ ಮೆಟ್ಟಿಲುಗಳ ಮೇಲೆ ಪಾದರಕ್ಷೆಗಳು ಹಾಕಿಕೊಂಡು ಇಳಿಯುವಂತಿಲ್ಲ. ಆ ಕೆರೆಯನ್ನು ಎಷ್ಟು ನಿರ್ಮಲವಾಗಿರುವಂತೆ ಕಾಪಾಡಿಕೊಂಡಿದ್ದಾರೆ ಎಂಬುದನ್ನು ಊಹಿಸಬಹುದು.

ಒಂದು ಮೆಟ್ಟಿಲುಗಳ ಬದಿಯಲ್ಲಿ ಒಂದು ಬಸವಣ್ಣನ ಮೂರ್ತಿಯನ್ನಿಟ್ಟು ಅದಕ್ಕೆ ಪ್ರತ್ಯೇಕವಾದ ಮಂಟಪವನ್ನು ಕಟ್ಟಿಸಿದ್ದಾರೆ. ಅಲ್ಲಿಯೇ ಮೆಟ್ಟಿಲುಗಳ ಮೇಲೆ ಒಂದು ಮಹಾದ್ವಾರವನ್ನು ನಿರ್ಮಿಸಿ ಅದರ ಮೇಲೆ ನೀಲಮ್ಮನ ಜಲಾಶಯ ಎಂದು ಬರೆಸಿದ್ದಾರೆ. ಹಾಗೆಯೇ ದಂಡೆಯ ಮೇಲೆ ಸಾಗುತ್ತಾ ಹೋದಾಗ ಮತ್ತೊಂದು ಬದಿಯಲ್ಲೂ ಮೆಟ್ಟಿಲುಗಳನ್ನು

ನಿರ್ಮಿಸಿ ಅಲ್ಲಿ ನೀಲಮ್ಮನ ಮೂರ್ತಿಯನ್ನು ಸ್ಥಾಪಿಸಿ ಅದಕ್ಕೂ ಒಂದು ಮಂಟಪವನ್ನು ನಿರ್ಮಿಸಿದ್ದಾರೆ. ಅದನ್ನು ಈಗಲೂ ಸಹ ಪೂಜೆ ಮಾಡುವುದು ವಿಶೇಷವಾಗಿದೆ. ಮತ್ತು ಇದಕ್ಕೆ ಎತ್ತರವಾದ ಸುಮಾರು ೧೫ ಮೀಟರದಷ್ಟು ಎತ್ತರವಾದ ಒಡ್ಡನ್ನು ನಿರ್ಮಿಸಿದ್ದಾರೆ. ಕೆರೆಯ ಊರಿನ ಹೊರಗಡೆ ಇರುವ ಭಾಗದಲ್ಲಿ ಕೋಡಿಯನ್ನು ನಿರ್ಮಿಸಿದ್ದಾರೆ.[೧೫]

ನೀಲಮ್ಮನ ಕೆರೆ ಎಂದು ಕರೆಯಲು ಕಾರಣವೆಂದರೆ ದೇಸಾಯಿ ಲಿಂಗರಾಜ ಅರಸರಿಗೆ ಸುಮಾರು ೬ ಜನ ಪತ್ನಿಯರಿದ್ದರು. ಅವರಲ್ಲಿ ನೀಲಮ್ಮ ೫ ನೇ ಪತ್ನಿಯಾಗಿದ್ದಳು. ಅವರಿಗೆ ೬ ಜನ ಪತ್ನಿಯರಿದ್ದರೂ ಸಂತಾನ ಭಾಗ್ಯ ಪ್ರಾಪ್ತಿ ಆಗಿರಲಿಲ್ಲ. ತಮ್ಮ ಕೊನೆಯ ದಿನಗಳಲ್ಲಿ ತಮ್ಮೆಲ್ಲ ಭೂಮಿ ಮತ್ತು ಆಸ್ತಿಯನ್ನು ಕೆರೆ ಭಾವಿಗಳನ್ನು ಕಟ್ಟಲು ಮತ್ತು ದೇವಾಲಯಗಳಿಗೆ ಉದಾರವಾಗಿ ಕಾಣಿಕೆಗಳನ್ನು ನೀಡಿದರು.[೧೬] ಮತ್ತು ಅವರ ೨ ನೇ ಮತ್ತು ೫ ನೇ ಮಡದಿಯರ ಹೆಸರಿನಲ್ಲಿ ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆ. ಈಗಾಗಲೇ ನಾವು ನೀಲಮ್ಮನ ಕೆರೆಯ ಬಗ್ಗೆ ಈ ಮೇಲೆ ವಿವರಿಸಲಾಗಿದೆ.

ಚನ್ನಮ್ಮನ ಕೆರೆ :

ನವಲಗುಂದ ಪ್ರದೇಶದಿಂದ ಅಣ್ಣಿಗೇರಿಯ ರಸ್ತೆಯಲ್ಲಿ ಸುಮಾರು ೫ ಕಿ.ಮೀ. ದೂರದಲ್ಲಿ ಊರಿನ ದಕ್ಷಿಣ ಭಾಗದಲ್ಲಿ ಇದನ್ನು ನಿರ್ಮಾಣ ಮಾಡಿದ್ದು ಇದು ಅತಿ ದೊಡ್ಡದಾದ ಕೆರೆಯಾಗಿದೆ. ಇದು ಸಹಿತ ಲಿಂಗರಾಜ ದೇಸಾಯಿಯವರ ಕಾಲದಲ್ಲಿ ಅವರದೇಯಾದ ಭೂಮಿಯಲ್ಲಿ ಇದನ್ನು ನಿರ್ಮಿಸಿದ್ದಾರೆ. ಇದನ್ನು ಸುಮಾರು ೨೫ ಎಕರೆ ಪ್ರದೇಶದಲ್ಲಿ ನಿರ್ಮಾಣ ಮಾಡಲಾಗಿದ್ದು ಎತ್ತರವಾದ ಏರಿಯನ್ನು ಅದು ಸುಮಾರು ೮-೧೦ ಅಡಿಗಳಷ್ಟು ಎತ್ತರವಾಗಿದ್ದು ಅವು ಸುಭದ್ರವಾಗಿವೆ. ಈ ಕೆರೆಗೆ ಮಲಪ್ರಭಾ ನದಿಯ ಬಲದಂಡೆ ಕಾಲುವೆಯಿಂದ ನೀರನ್ನು ಸರಬರಾಜು ಮಾಡಲಾಗುವುದು.[೧೭]

ಯಮನೂರು ಕೆರೆ :

ನವಲಗುಂದ ಮತ್ತು ಹುಬ್ಬಳ್ಳಿಯ ಹೆದ್ದಾರಿಯಲ್ಲಿ ಇರುವ ಒಂದು ಗ್ರಾಮವಾಗಿದ್ದು ಇದು ರಾಜಾಭಾಸವಾರ ಎನಿಸಿದ್ದ ಚಾರಿಗದೇವನೆಂಬ ಮಹಾತ್ಮನ ಕಾರಣದಿಂದ ಅದೊಂದು ಪುಣ್ಯತೀರ್ಥವಾಗಿದ್ದು ಇಲ್ಲಿ ೨ ದೊಡ್ಡ ಕೆರೆಗಳು ಕಂಡುಬರುತ್ತವೆ. ಈ ದೇವಾಲಯಕ್ಕೆ ಬರುವವದರಿಂದ ಅವರ ಅನುಕೂಲಕ್ಕಾಗಿ ಕೆರೆಗಳನ್ನು ನಿರ್ಮಾಣಮಾಡಲಾಗಿದೆ.[೧೮] ಅವುಗಳಲ್ಲಿ ಮೊದಲನೆಯದು ಅತಿ ದೊಡ್ಡದಾಗಿದ್ದು ಅದರ ಒಂದು ಕಡೆ ಇಳಿಯಲು ಮೆಟ್ಟಿಲುಗಳಿದ್ದು ಅದನ್ನು ಅಚ್ಚುಕಟ್ಟಾಗಿ ನಿರ್ಮಾಣ ಮಾಡಲಾಗಿದೆ. ಅದಕ್ಕೆ ಎತ್ತರವಾದ ಮತ್ತು ಅಗಲವಾದ

ಒಡ್ಡನ್ನು ಹಾಕಿದ್ದಾರೆ. ಜಾತ್ರೆಯ ಅಥವಾ ಉರುಸಿನ ಸಂದರ್ಭದಲ್ಲಿ ನೂರಾರು ಜನರು ಕೆರೆಯ ಒಡ್ಡುಗಳ ಮೇಲೆಯೇ ಊಟವನ್ನು ಮಾಡುತ್ತಾರೆ. ಮತ್ತು ಮೆಟ್ಟಿಲುಗಳ ಹತ್ತಿರ ಹೊರಗಡೆಯ ಭಾಗದಲ್ಲಿ ಒಂದು ಪಂಪಹೌಸನ್ನು ನಿರ್ಮಾಣ ಮಾಡಿದ್ದಾರೆ. ಅದರ ಮೂಲಕ ಊರಿಗೆ ಕರೆಯ ನೀರನ್ನು ಸರಬರಾಜು ಮಾಡುತ್ತಾರೆ. ಇದರ ಒಡ್ಡುಗಳು ಸುಮಾರು ೧೦ ಅಡಿಗಳಷ್ಟು ಎತ್ತರವಿದ್ದು ೮ ಅಡಿಗಳಷ್ಟು ಅಗಲವಾಗಿದ್ದು ಅವುಗಳ ಮೇಲೆಯು ಸಣ್ಣ ಪ್ರಮಾಣದ ಅಂದರೆ ಎತ್ತಿನ ಬಂಡಿಗಳು ಓಡಾಡುತ್ತವೆ. ಮತ್ತು ಒಡ್ಡುಗಳನ್ನು ಒಡೆಯದೆ ಹಾಗೆ ಕಾಪಾಡಲು ಅವುಗಳ ಹೋರಭಾಗದಲ್ಲಿ ಜಾಲಿ ಜಾತಿಯ ಮರಗಳನ್ನು ನೆಡಲಾಗಿದ್ದು ಒಳ ಭಾಗದಲ್ಲಿ ಹುಲ್ಲಿನ ಗಡ್ಡೆಗಳನ್ನು ಹಚ್ಚಲಾಗಿದೆ.

ದಾಟನಾಳ ಕೆರೆ:

ನವಲಗುಂದ ತಾಲೂಕಿನಲ್ಲಯೇ ಎರಡನೇ ಅತೀ ದೊಡ್ಡ ಕೆರೆಯಾಗಿದ್ದು ಇದು ನವಲಗುಂದದಿಂದ ರೋಣಕ್ಕೆ ಹೋಗುವ ಹೆದ್ದಾರಿಯಲ್ಲಿ ಬಲ ಬದಿಯಲ್ಲಿ ಕಂಡು ಬರುತ್ತದೆ. ನಾವು ಅಲ್ಲಿ ಕ್ಷೇತ್ರ ಕಾರ್ಯ ಕೈಗೊಂಡಾಗ ಕೆರೆಯ ಅಗಲೀಕರಣ ಕಾರ್ಯ ಕೈಗೊಳ್ಳಲಾಗಿದ್ದು, ಹಳೆಯ ಕೆರೆಯ ಪಕ್ಕದಲ್ಲಿಯೇ ಅಗಲೀಕರಣ ಕಾರ್ಯ ನಡೆದಿತ್ತು. ಹಳೆಯ ಕೆರೆಯ ನೀರಿಗೆ ಒಡ್ಡನ್ನು ಹಾಕಿ ನೀರು ಬರದ ಹಾಗೆಯೇ ಮಾಡಿದ್ದರು. ಈ ಕೆರೆಯು ಸ್ಥಳೀಯ ಶಾಸಕರ ಅನುದಾನದಲ್ಲಿ ಸಂಪೂರ್ಣವಾಗಿ ಹೊಸ ತಂತ್ರಜ್ಞಾನವನ್ನು ಅಳವಡಿಸಿ ಈ ಕೆರೆಯನ್ನು ನಿರ್ಮಿಸಲಾಗುತ್ತಿದೆ.

ಈ ಕೆರೆಯು ಸುಮಾರು ೪೦ ಎಕರೆ ಪ್ರದೇಶವನ್ನು ಆವರಿಸಿಕೊಂಡಿದ್ದು, ಸುಮಾರು ೧೦ ರಿಂದ ೧೫ ಅಡಿಯ ಎತ್ತರದ ಏರಿಯನ್ನು ಹೊಂದಿದ್ದು ಅದು ಸುಮಾರು ೧೦ ಅಡಿಯಷ್ಟು ಅಗಲವಾಗಿದ್ದು ಅವುಗಳ ಮೇಲೆ ವಾಹನಗಳು ಓಡಾಡಲು ಸಹಿತ ಅವಕಾಶ ಮಾಡಲಾಗಿದೆ. ಈ ಕೆರೆಯ ಏರಿಗಳನ್ನು ಗಮನಿಸಿದಾಗ ಅವುಗಳಿಗೆ ಹೊಸ ತಂತ್ರಜ್ಞಾನವನ್ನು ಅಳವಡಿಸುವುದು ಕಂಡು ಬಂದಿತು. ಏರಿಯ ಒಳ ಭಾಗದಲ್ಲಿ ಸುಮಾರು ೨೦ ರಿಂದ ೩೦ ಅಡಿಗಳ ಅಂತರದಲ್ಲಿ ಒಂದೊಂದು ಸಿಮೆಂಟಿನ ತಡೆ ಗೋಡೆಗಳನ್ನು ನಿರ್ಮಿಸಿದ್ದಾರೆ. ಏಕೆಂದರೆ ನೀರಿನ ರಬಸದಿಂದ ಒಡ್ಡಿಗೆ ಪೆಟ್ಟಾಗದಂತೆ ಮತ್ತು ಅದು ಒಡೆಯದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ ಮತ್ತು ಅದರ ತಳ ವಿನ್ಯಾಸವನ್ನು ಗಮನಿಸಿದಾಗ ಅದನ್ನು ನಿರ್ಮಾಣ ಮಾಡುವಾಗ ಅಲ್ಲಲ್ಲಿ ಸುಮಾರು ೫ ರಿಂದ ೧೦ ಅಡಿ ಎತ್ತರದ ಕಂಬಗಳ ಹಾಗೇ ಮಣ್ಣನ್ನು ಬಿಡಲಾಗಿದೆ. ಅವುಗಳನ್ನು ಕೆರೆಯ ಜವಳು ತಡೆಯಲು ನಿರ್ಮಿಸಿರಬಹುದೆಂದು ತಿಳಿಯಬಹುದು.

ಸಂಪೂರ್ಣ ಈ ಹಳ್ಳಿಯು ಕುಡುಯಲು ಈ ಕೆರೆಯ ನೀರನ್ನು ಅವಲಂಬಿಸಿರುವುದರಿಂದ ಅದರ ಸ್ವಚ್ಚತೆಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿದೆ. ಕೆರೆಯ ತಳ ಭಾಗದಲ್ಲಿ ಒಂದು ನೀರಿನ ಶುದ್ಧೀಕರಣ ಯಂತ್ರವನ್ನು ಅಳವಡಿಸಿದ್ದಾರೆ. ಆ ಯಂತ್ರದಿಂದ ಒಂದು ಕೊಳವೆಯ ಮೂಲಕ ನೀರು ಹೊರಗಡೆ ಬರುತ್ತದೆ. ಕೆರೆಯ ಪಕ್ಕದಲ್ಲಿಯೇ ಒಂದು ನೀರಿನ ಮೇಲ್ಮಟ್ಟದ ಜಲಾಗಾರವನ್ನು ನಿರ್ಮಿಸಿದ್ದಾರೆ. ಅದರಲ್ಲಿ ನೀರು ಶೇಕರಣೆಗೊಂಡು ನಂತರ ಊರಿನ ಅನುಕೂಲತೆಗೆ ತಕ್ಕಂತೆ ನೀರು ಸರಬರಾಜು ಆಗುತ್ತದೆ. ಇದು ಮಲಪ್ರಭಾ ನದಿಯ ಬಲದಂಡೆ ಕಾಲುವೆಯ ನೀರನ್ನು ಅವಲಂಬಿಸಿದೆ ಅಷ್ಟೇ ಅಲ್ಲ ಮಳೆಗಾಲದಲ್ಲಿ ಮಳೆಯ ನೀರನ್ನು ಸಹಿತ ಕೆರೆಗೆ ಬರುವ ಹಾಗೇ ವ್ಯವಸ್ಥೆಯನ್ನು ಮಾಡಲಾಗಿದೆ. ಇದರ ನಿರ್ವಹಣೆಯನ್ನು ಈ ವಿಭಾಗದ ಸಣ್ಣ ನೀರಾವರಿ ಇಲಾಖೆಯು ನೋಡಿಕೊಳ್ಳುತ್ತದೆ. ಕೆರೆಯ ದಕ್ಷಿಣ ದಿಕ್ಕಿನಲ್ಲಿ ಒಂದು ತೋಬು ಹೊಂದಿದ್ದು ಕೆರೆಗೆ ನೀರು ಹೆಚ್ಚಾದಾಗ (ಮಳೆಗಾಲದಲ್ಲಿ) ಅದರ ಕೆಳಗಿನ ಭಾಗದ ಭೂಮಿಯು ನೀರಿನ ಅನುಕೂಲತೆ ಪಡೆದುಕೊಳ್ಳುತ್ತದೆ. ಹಾಗೆಯೇ ಊರಿಗೆ ಕುಡಿಯವ ನೀರಿನ ಉದ್ದೇಶಕ್ಕಾಗಿ ಈ ಕೆರೆಯನ್ನು ಕಲ್ಪಿಸಲಾಗಿದ್ದು ಮೀನುಗಾರಿಕೆಯು ಈ ಕೆರೆಯಲ್ಲಿ ಕಂಡು ಬರುವುದಿಲ್ಲ.

ಹಳ್ಳಿಕೆರೆ ಕೆರೆ:

ಇದು ನವಗುಂದದಿಂದ ಸುಮಾರು ೧೫ ಕಿ ಮೀ ದಕ್ಷಿಣ ಕಡೆ ಇರುವ ಪ್ರದೇಶವಾಗಿದ್ದು ಇಲ್ಲಿ ದೊಡ್ಡದಾದ ಕೆರೆ ಇರುವುದರಿಂದ ಇದನ್ನು ಹಳ್ಳಿಕೆರೆ ಎಂದು ಕರೆಯುವರು. ಈ ಕೆರೆಯ ಪಕ್ಕದಲ್ಲಿಯೇ ಒಂದು ದ್ಯಾಮವ್ವನ ಗುಡಿ ಇರುವುದರಿಂದ ಇದನ್ನು ದ್ಯಾಮವ್ವನ ಕೆರೆ ಎಂದು ಸಹ ಕರೆಯುವರು. ಇದು ಸಂಪೂರ್ಣವಾಗಿ ಮಳೆಯಾಶ್ರಿತ ಕೆರೆಯಾಗಿರುವುದರಿಂದ ಇದರ ನೀರಿನ ಮಟ್ಟವು ಬೇಸಿಗೆಯಲ್ಲಿ ಕಡಿಮೆ ಪ್ರಮಾಣದಲ್ಲಿರುವುದರಿಂದ ಸರ್ಕಾರವು ಕೊಳವೆ ಬಾವಿ ಯೋಜನೆಯನ್ನು ಪ್ರರಂಭಿಸಿದೆ. ಈ ಕೆರೆಯ ನೀರಿನ ಸಾಮರ್ಥ್ಯವು ಸುಮಾರು ೫.೬೫ ಎಂಸಿಎಫ್‌ಟಿ ಆಗಿದ್ದು ೨೦೦ ಹೆಕ್ಟೇರ್ ಮತ್ತು ಅಚ್ಚುಕಟ್ಟು ಪ್ರದೇಶ ೩೦.೫೦ ಹೆಕ್ಟೇರ್‌ಗಳು ಈ ಕೆರೆಯಲ್ಲಿ ಒಂದು ತೊಬು ಮತ್ತು ಒಂದು ಕೊಡಿ ಇದ್ದು, ಈ ಕೊಡಿಯು ದಕ್ಷಿಣಾಭಿಮುಖವಾಗಿದ್ದು ಇದು ಸುಮಾರು ೨೦ ಅಡಿಗಳಷ್ಟು ಎತ್ತರವಾಗಿದೆ.

ಕೆರೆಯ ಒಡ್ಡು ಉತ್ತರ ದಕ್ಷಿಣಾಭಿಮುಖವಾಗಿದ್ದು ಪೂರ್ವದಲ್ಲಿ ಸಣ್ಣ ತೊರೆಗಳು ಕಂಡು ಬಂದಿವೆ. ಕೆರೆಗೆ ನೀರನ್ನು ಸಂಗ್ರಹಿಸಲು ಪೂರ್ವ ಭಾಗದಲ್ಲಿ ಏರಿಯನ್ನು ಕಲ್ಪಿಸಲಾಗಿದೆ ಇಲ್ಲಿ ಮುಖ್ಯವಾಗಿ ಇದರ ನೀರನ್ನು ಕುಡಿಯಲು ಉಪಯೋಗಿಸುತ್ತಾರೆ. ಈ ಕೆರೆಯಲ್ಲಿ ಬಹಳ

ಹಿಂದಿನಿಂದಲೂ ಕೆರೆಯ ಹೂಳೆತ್ತುವ ಕಾರ್ಯ ನಡೆಯುತ್ತಿದ್ದು, ಹೆಚ್ಚು ನೀರನ್ನು ಸಂಗ್ರಹಿಸುವ ಸಾಮರ್ಥ್ಯ ಹೊಂದಿದೆ. ಈ ಕೆರೆಯು ಹಳ್ಳಿಕೆರಿ ಗ್ರಾಮದ ಪಂಚಾಯತಿಯ ರಕ್ಷಣೆಯಲ್ಲಿದ್ದು. ಈಗಲೂ ಸಹ ಹಲವು ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ.

ಅಳಗವಾಡಿ ಕೆರೆ:

ಇದು ನವಲಗುಂದದಿಂದ ಉತ್ತರ ದಿಕ್ಕಿನಲ್ಲಿ ೩೦ ಕಿ ಮೀ ದೂರದಲ್ಲಿದೆ. ಅಲ್ಲಿ ಚಿಕ್ಕ ಕೆರೆಯಿದ್ದು ಅದನ್ನು ಅಳಗವಾಡಿ ಕೆರೆ ಎಂದು ಕರೆಯುವರು. ಈ ಕೆರೆಯ ಉದ್ದ ಸುಮಾರು ೧೦ ಮೀಟರ್, ಹಾಗೂ ಎತ್ತರ ೮ ಮೀಟರ್‌ಗಳಷ್ಟಿದೆ. ಇಲ್ಲಿ ಕೆರೆಯ ದಂಡೆಯ ಮೇಲೆ ಒಂದು ಬಸವಣ್ಣನ ದೇವಾಲಯವನ್ನು ನಿರ್ಮಿಸಲಾಗಿದೆ. ಅದರ ಗರ್ಭಗ್ರಹದಲ್ಲಿ ಒಂದು ಲಿಂಗ ಇದ್ದು ಅದನ್ನು ಪೂಜೆ ಮಾಡುತ್ತಾರೆ. ಆದರೆ ಈ ದೇವಾಲಯಕ್ಕೆ ಸಂಬಂಧಿಸಿದಂತೆ ಯಾವುದೇ ಶಾಸನಗಳು ದೊರೆತಿಲ್ಲ. ಬಹುಶಹ ಅದೊಂದು ಇತ್ತೀಚಿನ ದೇವಾಲಯ ಆಗಿರಬಹುದು. ಈ ಕೆರೆಯ ಒಡ್ಡು ಉತ್ತರ ದಕ್ಷಿಣಾಭಿಮುಖವಾಗಿದ್ದು ಇಲ್ಲಿ ಒಂದು ತೊಬು ಮತ್ತು ಒಂದು ಕೊಡಿಯನ್ನು ಕಾಣಬಹುದು. ಇದರ ಜಲ ಸಾಮರ್ಥ್ಯವು ೩೦ ರಿಂದ ೫೦ ಎಂಸಿಎಫ್‌ಟಿ ರಷ್ಟಿದ್ದು ೬೦ ಹೆಕ್ಟೇರ್ ಜಲಾನಯನ ಪ್ರದೇಶವನ್ನು ಮತ್ತು ೧೦೦ ಹೆಕ್ಟೇರ್ ಪ್ರದೇಶವನ್ನು ಹೊಂದಿದ್ದು ಇದು ಇಂದಿಗೂ ಸುವ್ಯವಸ್ಥೆಯಲ್ಲಿದೆ.

ಅಣ್ಣೀಗೇರಿ ಕೆರೆ:

ಅಣ್ಣೀಗೇರಿಯು ನವಲಗುಂದ ತಾಲೂಕಿನಲ್ಲಿಯ ಒಂದು ಹೊಬಳಿ ಕೇಂದ್ರವಾಗಿದ್ದು, ತಾಲೂಕಿನಲ್ಲಿಯೇ ಮೂರನೇ ದೊಡ್ಡದಾದ ಕೆರೆಯನ್ನು ಹೊಂದಿದ್ದು ಹುಬ್ಬಳ್ಳಿಯಿಂದ ಗದಗ ಕಡೆಗೆ ಹೋಗುವಾಗ ಊರಿನ ಬಲಬದಿಯಲ್ಲಿ ಈ ಕೆರೆಯು ಸವಿಸ್ಥಾರವಾಗಿ ಕಂಡು ಬರುತ್ತದೆ. ಅಲ್ಲಿಯ ಕೆಲವು ಜನರ ಹೇಳಿಕೆಗಳ ಪ್ರಕಾರ ಕೆರೆಯು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿದೆ[೯] ಎಂದು ಹೇಳುತ್ತಾರೆ. ಆದರೆ ಅಲ್ಲಿ ಯಾವುದೇ ರೀತಿಯ ಆಧಾರಗಳು ದೊರೆತಿರುವುದಿಲ್ಲ. ಈ ಕೆರೆಯ ಒಡ್ಡು ಸುಮಾರು ೨ ಕಿ ಮೀ ದಷ್ಟು ಉದ್ದವಿದ್ದು ಮತ್ತು ಸುಮಾರು ೩೦ ಅಡಿಯಷ್ಟು ಎತ್ತರವಾಗಿದೆ ಅಲ್ಲದೆ ಈ ಕೆರೆಯ ಒಡ್ಡಿನ ಮೇಲೆಯೇ ಹಾಯ್ದು ಬೇರೆ ಹಳ್ಳಿಗೆ ಹೋಗುವ ಮಾರ್ಗವನ್ನು ಕಲ್ಪಿಸಲಾಗಿದೆ. ಇದು ಸುಮಾರು ೨೦ ರಿಂದ ೩೦ ಎಕರೆಯಷ್ಟು ಭೂಮಿಯನ್ನು ಆವರಿಸಿಕೊಂಡಿದೆ. ಈ ಕೆರೆಗೆ ಪ್ರಮುಖವಾಗಿ ಮಲಪ್ರಭಾ ಬಲದಂಡೆಯ ಕಾಲುವೆಯಿಂದ ನೀರಿನ ಸರಬರಾಜು ಮಾಡಲಾಗುತ್ತಿದ್ದು, ಯಾವತ್ತಲೂ ಇದು ನೀರಿನ ತೊಂದರೆಯನ್ನು ಅನುಭವಿಸಿದ ಉದಾಹರಣೆಯು ಕಂಡು ಬಂದಿಲ್ಲ.

ಇದು ಸಾಕಷ್ಟು ಎತ್ತರವಾದ ಒಡ್ಡನ್ನು ಹೊಂದಿದ್ದು ಅದು ಒಳ ಭಾಗದಲ್ಲಿ ಪೂರ್ವ ಮತ್ತು ಪಶ್ಚಿಮದ ಕಡೆಯ ಒಡ್ಡುಗಳಿಗೆ ಕಲ್ಲನ್ನು ಜೋಡಿಸಲಾಗಿದ್ದು ಉಳಿದೆರಡು ಒಡ್ಡುಗಳಿಗೆ ಹುಲ್ಲಿನ ಗಡ್ಡೆಗಳನ್ನು ಹಚ್ಚಿದ್ದಾರೆ ಹಾಗೆಯೇ ಹೊರಗಡೆ ಒಡ್ಡುಗಳಿಗೆ ಮೂರು ಕಡೆ ಜಾಲೀಯ ಗಿಡಗಳನ್ನು ಹಚ್ಚಿದ್ದು ಒಂದು ಕಡೆ ನೀರು ಶುದ್ಧೀಕರಣ ಕೇಂದ್ರ ಮತ್ತು ಊರಿಗೆ ಸರಬರಾಜು ಮಾಡಲು ಎರಡು ದೊಡ್ಡದಾದ ಜಲ ಸಂಗ್ರಹಣಾಗಾರಗಳನ್ನು ನಿರ್ಮಿಸಲಾಗಿದೆ.

ಊರಿನ ದೇವಿಯ ಮತ್ತು ಅಮೃತೇಶ್ವರ ದೇವಾಲಯಗಳ ಜಾತ್ರೆಯ ಸಂದರ್ಭದಲ್ಲಿ ಮೆರವಣಿಗೆಯ ಮುಖಾಂತರ ದೇವರ ಪಲ್ಲಕ್ಕಿಯನ್ನು ತಂದು ಕೆರೆಗೆ ಪೂಜೆ ಮಾಡುವ ವಿಧಾನವು ಮೊದಲಿನಿಂದಲೂ ನಡೆದು ಬಂದಿದೆ ಎಂದು ಅಲ್ಲಿಯ ಜನರ ಹೇಳಿಕೆಯಾಗಿದೆ. ಈ ಕೆರೆಯು ನೀರಾವರಿ ಇಲಾಖೆಯ ಅಧೀನದಲ್ಲಿದ್ದು ವರ್ಷಕ್ಕೊಮ್ಮೆ ಇದನ್ನು ಹುಳೆತ್ತುವ ಕಾರ್ಯವು ಬೇಸಿಗೆಯಲ್ಲಿ ನಡೆಯುತ್ತದೆ. ಅಲ್ಲಿ ಇಬ್ಬರು ಇಲಾಖೆಯ ವ್ಯಕ್ತಿಗಳು ಕಾರ್ಯನಿರ್ವಹಿಸುತ್ತಾರೆ. ಒಬ್ಬ ವಾಲ್‌ಮನ್ (ಊರಿಗೆ ನೀರು ಬಿಡುವವನು) ಮತ್ತೊಬ್ಬ ವಾಚಮನ್ (ಕಾವಲುಗಾರ) ಇದ್ದಾರೆ.

ಮೊರಬ ಕೆರೆ:

ಮೊರಬ ಪ್ರದೇಶವು ನವಲಗುಂದ ತಾಲೂಕಿನ ಎರಡನೇ ಹೊಬಳಿ ಕೇಂದ್ರವಾಗಿದ್ದು ಇದು ನವಲಗುಂದದಿಂದ ಸುಮಾರು ೩೦ ಕಿ ಮೀ ದೂರದಲ್ಲಿ ಉತ್ತರ ದಿಕ್ಕಿನಲ್ಲಿದೆ. ಇಲ್ಲಿಯು ಸಹಿತ ಕಲ್ಯಾಣಿ ಚಾಲುಕ್ಯರಿಗೆ ಸಂಬಂಧಿಸಿದ ಕೆಲವು ಶಾಸನಗಳು ದೊರೆತಿದ್ದು ಇಲ್ಲಿಯ ಕೆರೆಯು ತಾಲೂಕಿನಲ್ಲಿ ಹೆಚ್ಚು ಪುರಾತನವಾದದ್ದು ಮತ್ತು ಗಾತ್ರದಲ್ಲಿ ಅತೀ ದೊಡ್ಡದಾದ ಕೆರೆಯು ಇದಾಗಿದೆ. ಕೆರೆಯು ಊರಿನ ಮದ್ಯದಲ್ಲಿಯೇ ಅಂದರೆ ಬಸ್ ನಿಲ್ದಾಣದ ಹಿಂದಯೇ ಕಂಡು ಬರುತ್ತದೆ.[೨೦] ಇಲ್ಲಿಯ ಜನರು ಕೆರೆಯನ್ನು ಹೆಚ್ಚು ಪೂಜ್ಯನೀಯ ಭಾವನೆಯಿಂದ ನೋಡುತ್ತಿರುವುದು ಇಲ್ಲಿ ಕಂಡು ಬರುತ್ತದೆ. ಅದನ್ನು ಇಂದಿಗೂ ದಿನನಿತ್ಯ ಪೂಜೆಯನ್ನು ಮಾಡುತ್ತಾರೆ. ಪ್ರಮುಖವಾಗಿ ಸ್ತ್ರೀಯರು ತಮ್ಮ ಸಮಸ್ಯೆಗಳು ಇದ್ದಾಗ ಇಲ್ಲಿಯ ಕೆರೆಗೆ ಪೂಜೆ ಮಾಡುವುದರಿಂದ ಅವುಗಳನ್ನು ಪರಿಹರಿಸಿಕೊಳ್ಳುತ್ತಾರೆ ಎಂಬ ನಂಬಿಕೆಯು ಅಲ್ಲಿಯ ಜನರಲ್ಲಿದೆ.

ಕೆರೆಯು ಸುಮಾರು ೪೦ ಎಕರೆ ಪ್ರದೇಶವನ್ನು ಆವರಿಸಿಕೊಂಡಿದ್ದು ಇದರ ಒಡ್ಡುಗಳು ಸುಮಾರು ೨೦ ರಿಂದ ೩೦ ಅಡಿಗಳಷ್ಟು ಎತ್ತರವಾಗಿದ್ದು ಕೆರೆಯ ಉತ್ತರ ದಿಕ್ಕಿನಲ್ಲಿ ಮೆಟ್ಟಿಲುಗಳಿದ್ದು ಅವು ಊರಿನ ಜನರಿಗೆ ಅಂದರೆ ಹೆಚ್ಚಿನ ಜನರಿಗೆ ದೂರವಾಗಿರುವುದರಿಂದ ದಕ್ಷಿಣದ ಕಡೆಗೂ ಒಂದು ಪ್ರದೇಶವನ್ನು ಮಾಡಿಕೊಂಡಿದ್ದಾರೆ. ಇದಕ್ಕೆ ದಕ್ಷಿಣ ಕಡೆಯಿಂದಲೇ

ಕಾಲುವೆಯ ಮೂಲಕ ನೀರು ಬರುವ ಕೊಳವೆಯನ್ನು ಕೊಡಲಾಗಿದೆ. ಈ ಕೆರೆಯ ಎರಡು ಕಡೆಗೆ ತೊಬುಗಳನ್ನು ರಚಿಸಲಾಗಿದ್ದು ಅವು ಸಿಮೆಂಟಿನಿಂದ ಬೃಹತ್ ಗೋಡೆ ಆಕಾರದಲ್ಲಿ ನಿರ್ಮಿಸಲಾಗಿವೆ. ಇದರ ಬೃಹತ್ ಆಕಾರದ ಒಡ್ಡುಗಳನ್ನು ಒಳ ಭಾಗದಲ್ಲಿ ಕಲ್ಲುಗಳಿಂದ ನಿರ್ಮಿಸಿದರೆ ಹೊರ ಭಾಗದಲ್ಲಿ ದೊಡ್ಡ ದೊಡ್ಡ ಮರಗಳು ಇವೆ. ಈ ಮರಗಳ ಆಧಾರದ ಮೇಲೆ ಈ ಕೆರೆಯು ಎಷ್ಟು ಪುರಾತನವಾಗಿದೆ ಎಂದು ತಿಳಿದು ಬರುತ್ತದೆ. ಈ ಕೆರೆಯ ಒಡ್ಡಿನ ನಾಲ್ಕು ದಿಕ್ಕಿನಲ್ಲೂ ತಂತಿಯ ಬೇಲಿಯನ್ನು ಹಚ್ಚುರುವುದು ಅಲ್ಲಿ ಕೆರೆಗೆ ನೀಡಿದ ಸುರಕ್ಷತೆಯನ್ನು ತಿಳಿಸುತ್ತದೆ. ಅಲ್ಲಿ ಹೆಚ್ಚು ಜನರಿಗೆ ವಿಚಾರಿಸಿದಾಗ ಆಕೆರೆಯು ಬರಿದಾಗಿದ್ದು ಎಂದಿಗೂ ಕಂಡು ಬಂದಿಲ್ಲ ಎಂಬ ಹೇಳಿಕೆಯು ಬಂದಿದೆ. ಇಂದಿಗೂ ಇಡೀ ಊರಿನ ಜನರೆಲ್ಲರೂ ಈ ಕೆರೆಯ ನೀರನ್ನೇ ಅವಲಂಬಿಸಿರುವುದು ಕಂಡು ಬಂದಿದೆ. ಇದು ನವಲಗುಂದ ತಾಲೂಕಿಲ್ಲಿಯೇ ಅಲ್ಲ ಧಾರವಾಡ ಜಿಲ್ಲೆಯಲ್ಲಿಯೇ ದೊಡ್ಡದಾದ ಪುರಾತನ ಕೆರೆ ಇದಾಗಿದೆ ಎಂದರೂ ತಪ್ಪಾಗಲಾರದು.

ಶಲವಡಿ ಕೆರೆ:

ನವಲಗುಂದದಿಂದ ರೋಣಕ್ಕೆ ಹೋಗುವ ಹೆದ್ದಾರಿಯಲ್ಲಿ ಈ ಗ್ರಾಮವು ಕಂಡು ಬಂದಿದ್ದು ಇದು ಸುಮಾರು ೧೫ ಕಿ ಮೀ ಪೂರ್ವದಲ್ಲಿ ಕಂಡು ಬಂದಿದ್ದು ಈ ಊರಿನಿಂದ ಗದಗ ಪ್ರದೇಶಕ್ಕೆ ಹೊಗುವ ಹೆದ್ದಾರಿಯ ಎಡ ಭಾಗದಲ್ಲಿ ಕಂಡು ಬಂದಿದೆ.ಇದು ಹೊರಗಿನಿಂದ ಗಮನಿಸಿದಾಗ ಕೆರೆಯ ಒಡ್ಡಿನ ಹೊರ ಬದಿಯಲ್ಲಿ ಬೆಳೆದ ಗಿಡಗಳನ್ನು ನೋಡಿದಾಗ ಅದು ಕೆರೆಯಂದು ಕಂಡು ಬರುವುದಿಲ್ಲ.ಆದರೆ ಸಮೀಪದಿಂದ ಹೋಗಿ ನೋಡಿದಾಗ ಅಲ್ಲಿ ಬೃಹದಾಕಾರದ ಕೆರೆಯೊಂದು ಕಂಡು ಬರುತ್ತದೆ.ಅದರ ಒಡ್ಡಿನ ಹೊರಗಡೆ ಭಾಗದಲ್ಲಿ ದೊಡ್ಡ ದೊಡ್ಡ ಗಿಡಗಳನ್ನು ಹಚ್ಚಲಾಗಿದ್ದು ಅದರ ಸುತ್ತಲೂ ಕಬ್ಬಿಣದ ತಂತಿಯ ಬೇಲಿಯನ್ನು ಹಚ್ಚಿದ್ದಾರೆ. ಕ್ಷೇತ್ರಕಾರ್ಯ ಕೈಗೊಂಡಾಗ ತಿಳಿದ ವಿಷಯ ಎಂದರೆ ಕಾಲುವೆ ನೀರಿನ ಜೊತೆಗೆ ಸುಮಾರು ೬ ತಿಂಗಳ ಹಿಂದೆ ಒಂದು ಮೊಸಳೆ ಮರಿಯು ಮರಿಯು ಬಂದಿದ್ದು ಅದರಿಂದ ಭಯಬೀತರಾದ ಜನರು ಕೆರೆಯ ಹತ್ತಿರ ಹೋಗಲು ಭಯ ಪಡುತ್ತಿರುವುದು ಕಂಡು ಬರುತ್ತದೆ.

ಕೆರೆಯು ಸುಮಾರು ೩೫ ಎಕರೆಯಷ್ಟು ಭೂಮಿಯನ್ನು ಆವರಿಸಿದ್ದು ೨೦ ಎಕರೆಯಷ್ಟು ಜಲಾನಯನ ಪ್ರದೇಶವನ್ನು ಹೊಂದಿದೆ. ಈ ಕೆರೆಯ ದಕ್ಷಿಣ ಭಾಗಕ್ಕೆ ಒಂದು ತೊಬು ಇದ್ದು ಅದು ಸಿಮೆಂಟಿನಿಂದ ಮಾಡಿದ್ದಾರೆ. ಅದು ಎತ್ತರವಾದ ಗೋಡೆಯಂತೆ ಕಂಡು ಬರುತ್ತದೆ. ಕೆರೆಯ ಪಶ್ಚಿಮ ಭಾಗದಲ್ಲಿ ಒಂದು ನೀರು ಶುದ್ದೀಕರಣ ಕೇಂದ್ರವು ಕಂಡು ಬಂದಿದೆ. ಅಲ್ಲಿ ನಾಲ್ಕು ನೀರಿನ ತೊಟ್ಟಿಗಳನ್ನು ಮಾಡಿದ್ದು ಮೊದಲೆರೆಡು ತೊಟ್ಟಿಗಳಲ್ಲಿಕೆರೆಯಿಂದ ನೀರು ಬಂದು

ಎರಡು ತೊಟ್ಟಿ ತುಂಬಿ ೩ನೇ ತೊಟ್ಟಿಗೆ ಹೊಗುತ್ತದೆ. ಹಾಗೆಯೇ ೪ನೇ ತೊಟ್ಟಿಯು ತುಂಬಿದಾಗ ನೀರು ಶುದ್ದೀಕರಣ ಕೇಂದ್ರಕ್ಕೆ ಹೊಗುವುದು. ಅಲ್ಲಿಂದ ಶುದ್ಧವಾದ ನೀರು ಭೂಮಿಯಲ್ಲಿ ನಿರ್ಮಿಸಿದ ಸಂಗ್ರಹಣಾ ತೊಟ್ಟಿಗೆ ಹೋಗಿ ಊರಿಗೆ ಸರಬರಾಜು ಆಗುತ್ತದೆ. ಇದರ ಎಲ್ಲ ಮೇಲ್ವಿಚಾರಣೆಯನ್ನು ನೀರಾವರಿ ಇಲಾಖೆಯು ಕಾಮಗಾರಿ ನಡೆಸುತ್ತಿರುವುದು ಕಂಡು ಬರುತ್ತದೆ.

ಖನ್ನೂರ ಕೆರೆ:

ಇದು ನವಲಗುಂದದಿಂದ ಶಲವಡಿ ಮಾರ್ಗ ಮದ್ಯದಲ್ಲಿ ಇರುವಂತ ಗ್ರಾಮವಾಗಿದ್ದು ಉರಿನಿಂದ ಹೊರಗಡೆ ಒಂದು ತೋಟ ಬಸವೇಶ್ವರ ಮಠದ ಪಕ್ಕದಲ್ಲಿಯೇ ಒಂದು ಸುಂದರವಾದ ಚಿಕ್ಕ ಕೆರೆಯಿದ್ದು ಬಸವ ಮಠದ ತೋಟದ ಕೆರೆಯೆಂದೇ ಕರೆಯುತ್ತಾರೆ. ಅದು ಚಿಕ್ಕದಾಗಿದ್ದರೂ ಸುಂದರವಾಗಿ ಮತ್ತು ಚೊಕ್ಕದಾಗಿರುವುದು ಕಂಡು ಬಂದಿದೆ. ಇದನ್ನು ಮಠಕ್ಕೆ ಮತ್ತು ಮಠದ ಹೊಲಗಳಿಗೆ ಉಪಯೋಗಿಸುತ್ತಾರೆ ಎಂದು ತಿಳಿದು ಬಂದಿದೆ.

ಕೆರೆಯು ಸುಮಾರು ೩ರಿಂದ ೪ ಹೆಕ್ಟೇರುಗಳಲ್ಲಿ ನಿರ್ಮಿಸಿದ್ದು ಒಂದು ಹೆಕ್ಟೇರ ಜಲಾನಯನ ಪ್ರದೇಶವನ್ನು ಹೊಂದಿದೆ. ದೇವಾಲಯವು ಪೂರ್ವಾಭಿಮುಖವಾಗಿದ್ದು ಕೆರೆಯು ದಕ್ಷಿಣದಲ್ಲಿದ್ದು ಅದರ ಮೆಟ್ಟಿಲುಗಳು ದಕ್ಷಿಣಾಭಿಮುಖವಾಗಿದ್ದು ಅದರ ಒಡ್ಡುಗಳು ಮಣ್ಣಿನಿಂದ ನಿರ್ಮಿಸಲಾಗಿದ್ದು ಅವುಗಳ ಮೇಲೆ ಹೂವಿನ ತೋಟವನ್ನು ಮಾಡಿರುವುದು ವಿಶೇಷಾರ್ಹವಾಗಿದೆ. ಒಂದು ನೀರೆತ್ತುವ ಯಂತ್ರದ ಸಹಾಯದಿಂದ ನೀರನ್ನೂ ಮಠಕ್ಕೆ ಉಪಯೊಗಿಸಿಕೊಳ್ಳುತ್ತಾರೆ. ಕೆರೆಯ ಪೂರ್ವದ ಒಡ್ಡಿನ ಮೇಲೆ ಎರಡು ಸಣ್ಣದಾದ ನೀರು ಸಂಗ್ರಹಣಾ ತೊಟ್ಟಿಗಳನ್ನು ನಿರ್ಮಿಸಿದ್ದಾರೆ. ಅವುಗಳ ಮೂಲಕ ಹೊಲಗಳಿಗೆ ನೀರನ್ನು ಹಾಯಿಸುವರು ಮತ್ತು ಕೆರೆಗೆ ದಕ್ಷಿಣದಲ್ಲಿ ಒಂದು ಕೊಡಿಯಿದ್ದು ಇದಕ್ಕೆ ಯಾವುದೇ ರೀತಿಯ ತೂಬುಗಳು ಕಂಡು ಬರುವುದಿಲ್ಲ.

ಹೆಬಸೂರು ಕೆರೆ:

ಈ ಪ್ರದೇಶವು ನವಲಗುಂದದಿಂದ ಹುಬ್ಬಳ್ಳಿಯ ಹೆದ್ದಾರಿಯಲ್ಲಿ ಸುಮಾರು ೧೫ ಕಿ ಮೀ ದೂರದಲ್ಲಿದೆ. ಕೆರೆಯು ಹುಬ್ಬಳ್ಳಿಗೆ ಹೋಗುವಾಗ ಹೆದ್ದಾರಿಯ ಬಲಬದಿಯಲ್ಲಿ ಕಂಡು ಬರುತ್ತದೆ. ಇದು ಉತ್ತರಾಭಿಮುಖವಾಗಿದ್ದು ಇದರ ಒಡ್ಡುಗಳು ಉತ್ತರ ದಕ್ಷಿಣಾಭಿಮುಖವಾಗಿದ್ದು ಅದು ಸುಮಾರು ಒಂದು ಕಿ ಮೀ ಉದ್ದವಿದೆ. ಅದರ ಮೇಲ್ಭಾಗದ ಅಗಲವು ಸುಮಾರು ೪ ಮೀಟರ್‌ದಷ್ಟು ಇದ್ದು ೧೫ ಅಡಿಗಳಷ್ಟು ಎತ್ತರವಾಗಿದೆ. ಈ ಕೆರೆಯು ೨೫.೫೦ ಎಂಸಿಎಫ್‌ಟಿ

ರಷ್ಟು ನೀರಿನ ಸಂಗ್ರಹ ಹೊಂದಿದ್ದು ೧೫ ಹೆಕ್ಟೇರ್ ದಷ್ಟು ಜಲ ವಿಸ್ತೀರ್ಣ ಹೊಂದಿದ್ದು ಇದು ಸಂಪೂರ್ಣ ಹೆಬಸುರು ಗ್ರಾಮಕ್ಕೆ ಕುಡಿಯಲು ನೀರನ್ನು ಒದಗಿಸುತ್ತದೆ. ಕೆರೆಯ ಮೇಲ್ಭಾಗದಲ್ಲಿ ಹಲವು ಹರಿವುಗಳಿದ್ದು ಅವುಗಳ ಮೂಲಕ ಕೆರೆಗೆ ಸಾಕಷ್ಟು ನೀರು ಸಂಗ್ರಹವಾಗುತ್ತದೆ. ಕೆರೆಯ ಉತ್ತರ ಭಾಗದಲ್ಲಿ ಒಂದು ಕೊಡಿ ಇದ್ದು ಅದನ್ನು ಕಲ್ಲುಗಳಿಂದ ನಿರ್ಮಿಸಿದ್ದು ಸುಮಾರು ೧೫ ರಿಂದ ೨೦ ಅಡಿಗಳಷ್ಟು ಅಗಲವಾಗಿದೆ ಮತ್ತು ಕೆರೆಗೆ ಒಂದು ತೂಬು ಇದ್ದು ಅದು ಪೂರ್ವದ ಭಾಗದಲ್ಲಿ ಕಂಡು ಬರುತ್ತದೆ. ಇದು ಊರಿನ ಮೂಲ ನೀರಿನ ಸಂಗ್ರಹವಾಗಿರುವುದರಿಂದ ಸ್ವಚ್ಛತೆಗೆ ಹೆಚ್ಚಿನ ಮಹತ್ವ ನೀಡಿದ್ದು ಅದು ನೀರಾವರಿ ಇಲಾಖೆಯ ಆಡಳಿತಕ್ಕೆ ಒಳಪಟ್ಟಿರುವುದರಿಂದ ಅದನ್ನು ಪ್ರತಿವರ್ಷ ಹುಳೆತ್ತುವ ಕಾರ್ಯ ಮಾಡಿ ಕಾಲುವೆಯಿಂದ ನೀರು ಸರಬರಾಜು ಮಾಡುತ್ತಾರೆ.

ಕಾಲುವೆಯ ಪ್ರವೇಶ ದ್ವಾರದಲ್ಲಿ ಎರಡು ಕಂಬಗಳಿಂದ ಕೂಡಿದ ಪ್ರವೇಶ ದ್ವಾರವನ್ನು ಮಾಡಿದ್ದಾರೆ. ಅದರ ಬಲ ಬದಿಯಲ್ಲಿ ಕೆರೆಯನ್ನು ಕಟ್ಟಿಸಿದ ವರ್ಷವನ್ನು ಕೆತ್ತಲಾಗಿದ್ದು(೧೯೫೮) ಅದರ ಮತ್ತೊಂದು ಎಡ ಬದಿಯಲ್ಲಿ ಕೆರೆಯನ್ನು ಕಟ್ಟಲು ಸಹಾಯ ಮಾಡಿದವರ ಹೆಸರುಗಳು ಮತ್ತು ಸರ್ಕಾರದ ಲಾಂಛನ ಇರುವ ಒಂದು ಫಲಕವನ್ನು ಇಡಲಾಗಿದೆ.

ಅಡಿಟಿಪ್ಪಣಿಗಳು :

೧. ಸಿ.ಎಸ್. ವಾಸುದೇವನ್, ಹಂಪಿ ಪರಿಸರದ ಕೆರೆಗಳು, ಪುಟ–೬.

೨. ಬಿ.ಕೆ. ಥಾಪರ್, ರಿಸೆಂಟ್ ಆರ್ಕಿಯಾಲಾಜಿಕಲ್ ಡಿಸ್ಕವರಿ ಇನ್ ಇಂಡಿಯಾ, ಪುಟ–೧೭೧.

೩. ಸಿ.ಎಸ್. ವಾಸುದೇವನ್, ಹಂಪಿ ಪರಿಸರದ ಕೆರೆಗಳು, ಪುಟ–೭

೪. ಎಂ.ಎಸ್. ನಾಗರಾಜ್‌ರಾವ್, ಪ್ರೋಟೊ ಹಿಸ್ಟೋರಿಕ್ ಕಲ್ಚರ್ಸ್ ಆಫ್ ತುಂಗಾಭದ್ರಾ ವ್ಯಾಲಿ, ಪುಟ–೨೩.

೫. ಬಿ. ಷೇಕ್ ಆಲಿ ಮತ್ತು ಅ. ಸುಂದರ (ಸಂ), ಕರ್ನಾಟಕ ಚರಿತ್ರೆ ಸಂಪುಟ–೧, ಪುಟ–೩೬೮.

೬. ಜಿ.ಎಸ್. ದೀಕ್ಷಿತ್, ಜಿ.ಆರ್. ಕುಪ್ಪುಸ್ವಾಮಿ ಮತ್ತು ಎಸ್.ಕೆ. ಮೋಹನ್, ಕರ್ನಾಟಕದಲ್ಲಿ ಕೆರೆ ನೀರಾವರಿ, ಪುಟ–೨೬.

೭. ಎಂ.ಎಂ. ಕಲಬುರ್ಗಿ, ಧಾರವಾಡ ಜಿಲ್ಲೆಯ ಶಾಸನ ಸೂಚಿ, ಪುಟ–೨೭.

೮. ದೇವರ ಕೊಂಡಾ ರೆಡ್ಡಿ, ಹಂಪಿ ಸಂಪುಟ, ಪುಟ–೪೫೭.

೯. Buchanan Francis, 1807, Journy From Madras Through Countries of Mysore, Canara and Malabar, P. 85.

೧೦. ಸಿ.ಎಸ್. ವಾಸುದೇವನ್, ಹಂಪಿ ಪರಿಸರದ ಕೆರೆಗಳು, ಪುಟ–೪೧.

೧೧. ದೇವರಕೊಂಡಾರೆಡ್ಡಿ, ಹಂಪಿ ಸಂಪುಟ, ಪುಟ–೪೭೦.

೧೨. ಅದೇ ಪುಟ

೧೩. ಸಿ.ಎಸ್. ವಾಸುದೇವನ್, ಹಂಪಿ ಪರಿಸರದ ಕೆರೆಗಳು, ಪುಟ–೫೧.

೧೪. ಕ್ಷೇತ್ರ ಕಾರ್ಯ ವರದಿ

೧೫. ಕ್ಷೇತ್ರ ಕಾರ್ಯ ವರದಿ

೧೬. ಕ್ಷೇತ್ರ ಕಾರ್ಯ ವರದಿ

೧೭. ಕ್ಷೇತ್ರ ಕಾರ್ಯ ವರದಿ

೧೮. ಕ್ಷೇತ್ರ ಕಾರ್ಯ ವರದಿ

೧೯. ಕ್ಷೇತ್ರ ಕಾರ್ಯ ವರದಿ

೨೦. ಕ್ಷೇತ್ರ ಕಾರ್ಯ ವರದಿ

ಅಧ್ಯಯ – ನಾಲ್ಕು

ಕೆರೆಗಳಿಗೆ ಸಂಬಂಧಿಸಿದ ನಂಬಿಕೆ ಮತ್ತು ಆಚರಣೆಗಳು

ಅಧ್ಯಾಯ–ನಾಲ್ಕು

ಕೆರೆಗಳಿಗೆ ಸಂಬಂಧಿಸಿದ ನಂಬಿಕೆ ಮತ್ತು ಆಚರಣೆಗಳು

ಪ್ರಮುಖವಾಗಿ ಕೆರೆಗಳನ್ನು ಕಟ್ಟಿಸುವುದಕ್ಕೆ ಹಲವಾರು ಕಾರಣಗಳಿವೆ ಅದೊಂದು ಮಹತ್ವದ ಮತ್ತು ಪುಣ್ಯದ ಕಾರ್ಯ ಎಂಬ ನಂಬಿಕೆ ಪ್ರಾಚೀನ ಕಾಲದಿಂದ ಇಂದಿನ ಕಾಲದವರೆಗೂ ಕಾಣಬಹುದು. ನೀರು ಸಂಗ್ರಹಿಸಿ ಅದನ್ನು ತಮ್ಮ ಅವಶ್ಯಕತೆಗೆ ಅನುಗುಣವಾಗಿ ಉಪಯೋಗಿಸುವ ಉದ್ದೇಶದಿಂದ ಕೆರೆಗಳನ್ನು ನಿರ್ಮಿಸುತ್ತಿದ್ದರು. ಮತ್ತು ಇನ್ನೊಂದು ಅರ್ಥದಲ್ಲಿ ನಾವು ಇತಿಹಾಸವನ್ನು ನೋಡಿದಾಗ ಹಲವಾರು ರಾಜ–ಮಹಾರಾಜರು ಪ್ರಜಾಹಿತ ದೃಷ್ಟಿಯಿಂದ ಕೆರೆಗಳನ್ನು ಕಟ್ಟಿಸಿದ್ದಾರೆ. ಮತ್ತು ಕೆಲವು ಪ್ರಾಚೀನ ಕಥೆಗಳಲ್ಲಿ ಮತ್ತು ಗ್ರಂಥಗಳಲ್ಲಿ ಕೆರೆಗಳನ್ನು ಕಟ್ಟಿಸುವದು ಮಹಾಕಾರ್ಯ ಇದನ್ನು ಮಾಡಿದರೆ ಪರಲೋಕದಲ್ಲಿ ಮೋಕ್ಷ ದೊರೆಯುವುದು ಎಂದು ಪ್ರಾಚೀನ ಭಾತದ ಜನರಲ್ಲಿ ನಂಬಿಕೆಯು ಕೆರೆಗಳ ನಿರ್ಮಾಣಕ್ಕೆ ಮತ್ತೊಂದು ಪ್ರಮುಖ ಕಾರಣವಾಗಿದೆ. ಪ್ರಾಚೀನ ಇತಿಹಾಸದಿಂದ ಮದ್ಯಕಾಲಿನ ಇತಿಹಾಸವನ್ನು ಅವಲೋಕನ ಮಾಡಿದಾಗ ಮಧ್ಯಕಾಲದಲ್ಲಿ ಹೆಚ್ಚಾಗಿ ಕೃಷಿಯ ಅಭಿವೃದ್ಧಿಗಾಗಿ ಹೆಚ್ಚು ಕೆರೆಗಳು ನಿರ್ಮಾಣಗೊಂಡಿದ್ದನ್ನು ನಾವು ಕಾಣಬಹುದು. ಉದಾ: ವಿಜಯನಗರದ ಅರಸರು ಹಲವಾರು ಕೆರೆಗಳನ್ನು ಕಟ್ಟಿಸಿದರು. ಅಲ್ಲದೆ ಕೆರೆಗಳನ್ನು ಕಟ್ಟಿಸುವುದು, ಒಡ್ಡುಗಳನ್ನು ಹಾಕುವುದು, ಪುಣ್ಯದ ಕಾರ್ಯ ಎಂ ಧಾರ್ಮಿಕ ನಂಬಿಕೆ ಅವರಲ್ಲಿತ್ತು ಆದುದರಿಂದ ಜನರು ಈ ಕಾರ್ಯದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದ್ದರು. ಎಂಬ ವಿಷಯವು ನಮಗೆ ತಿಳಿದು ಬರುತ್ತದೆ. ಹಾಗೆಯೇ ನವಲಗುಂದ ತಾಲೂಕಿನಲ್ಲಿಯ ಕೆರೆಗಳಿಗೂ ಅಲ್ಲಿಯ ಆದೆಂತ ಕೆಲವು ಆಚರಣೆಗಳು ಇಲ್ಲಿ ಅಧ್ಯಯನ ಮಾಡಲಾಗಿದೆ.

ಕೆರೆಯ ಬಗೆಗೆ ಪ್ರಾಚೀನ ಕಾಲದಿಂದಲೂ ಮಹತ್ವ ಇರುವದನ್ನು ನಾವು ಹಲವಾರು ಗ್ರಂಥಗಳಲ್ಲಿ ಕಾಣಬಹುದು. ಹಾಗೆಯೇ ಅತ್ಯಂತ ಪ್ರಾಚೀನವಾದ ಸಾಂಖ್ಯನ ಗೃಹ ಸೂತ್ರದಲ್ಲಿಯ ಉಲ್ಲೇಖವು ಅತ್ಯಂತ ಪ್ರಾಚೀನವಾದುದು. ಕೆರೆ, ಭಾವಿಗಳನ್ನು ಉಪಯೋಗಿಸುವ ಮೊದಲು ಅದಕ್ಕೆ ಪೂಜೆ ಮಾಡಿ ವರುಣ ದೇವನಿಗೆ ಸಂಬಂಧಿಸಿದ ಮಂತ್ರಗಳನ್ನು ಪೂಜೆ ಮಾಡಿದ ನಂತರವೇ ಕೆರೆ ಭಾವಿಗಳನ್ನು ಉಪಯೋಗಿಸಬೇಕು ಎಂಬ ಉಲ್ಲೇಖವು ಗ್ರಂಥದಲ್ಲಿ ತಿಳಿದು ಬರುತ್ತದೆ.[೧] ಹಾಗೆಯೇ ಒಬ್ಬ ಅರಸ ಕಟ್ಟಿಸಿದ ಕೆರೆಯಲ್ಲಿ ಪ್ರಾಣಿ–ಪಕ್ಷಿಗಳು ಮತ್ತು ಮನುಷ್ಯರು ಕೆರೆಯ ನೀರನ್ನು ಕುಡಿದು ತೃಪ್ತರಾದೆ ಆ ಅರಸ ಅಶ್ವಮೇಧ ಯಾಗದ ಫಲವನ್ನು

ಪಡೆಯುತ್ತಾನೆ[೨] ಎಂಬ ಉಲ್ಲೆಖ ಮಹಾಭಾರತದಿಂದ ತಿಳೀದು ಬರುತ್ತದೆ ಹಾಗೆಯೇ ಅಗ್ನಿ ಪುರಾಣದ ೬೪ ನೇ ಅಧ್ಯಾಯದಲ್ಲಿ ವರುಣ ದೇವನನ್ನು ಜಲ ದೇವನೆಂದೇ ವರ್ಣಿಸಲಾಗಿದೆ. ಅದರಂತೆ ನೀರಿಗೆ ಸಂಬಂಧಿಸಿದ ಕೆಲವು ವಿಧಿ ವಿಧಾನಗಳು ಆಚರಣೆಗಳು ಕುರಿತು ಮಾಹಿತಿ ನೀಡುತ್ತದೆ. ಭಾವಿ ಕೆರೆಗಳನ್ನು ಕಟ್ಟಿಸುವ ಮೊದಲು ಆ ಜಾಗದಲ್ಲಿ ಎಂಟು ಮಡಿಕೆಗಳಲ್ಲಿ ಎಂಟು ಬಗೆಯ ನೀರನ್ನು ತುಂಬಿಸಿ ಅವುಗಳನ್ನು ಎಂಟು ದಿಕ್ಕಿನಲ್ಲಿ ಸ್ಥಾಪಿಸಿ ಅಷ್ಟದಿಕ್ಪಾಲಕರನ್ನು ಪೂಜಿಸಿದಾಗ ಆ ಅಷ್ಟದಿಕ್ಪಾಲಕರಲ್ಲಿ ಒಬ್ಬನಾದ ಮಳೆಯ ಅಧಿದೇವತೆ ವರುಣ ಮೂರ್ತಿಯನ್ನು ಊರಿನಲ್ಲಿ ಮೆರವಣಿಗೆ ಮಾಡಿ ನಂತರ ಕೊಳದ ನೀರಿನಲ್ಲಿ ಮುಳುಗಿಸಬೇಕು. ಈ ರೀತಿ ಮಾಡಿದವರಿಗೆ ಅಶ್ವಮೇಧಯಾಗದ ಫಲಕ್ಕಿಂತಲೂ ಹೆಚ್ಚಿನ ಫಲ ದೊರೆಯುತ್ತದೆ ಎಂದು ಪರಿಗಣಿಸಲಾಗಿದೆ.[೩]

ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಯಾವುದೇ ಒಂದು ಕಾರ್ಯ ಮಾಡಬೇಕಾದರೆ ಒಳ್ಳೆಯ ದಿನ ಮತ್ತು ಸಮಯ (ಮುಹರ್ತ)ವನ್ನು ನೋಡಿ ಕಾರ್ಯವನ್ನು ಮಾಡುತ್ತಿದ್ದರು. ಹಾಗೆಯೇ ಕೆರೆ ಭಾವಿಗಳನ್ನು ಕಟ್ಟಿಸುವಾಗ ಸಹಿತ ಇಂತಹ ಸಮಯ ಮತ್ತು ದಿನವನ್ನು ನೋಡುತ್ತಿದ್ದರು ಎಂಬುವದಕ್ಕೆ ಸಾಕಷ್ಟು ಶಾಸನಗಳಲ್ಲಿ ಉಲ್ಲೇಖ ಕಂಡುಬರುತ್ತದೆ. ಉದಾ: ಆಂದ್ರ ಪ್ರದೇಶದ ಕಡಪ ಜಿಲ್ಲೆಯಲ್ಲಿ ಕಂಡು ಬರುವ ಪುರುಮಾಮಿಲ್ಲ ಕೆರೆಯನ್ನು ಮೊದಲನೆಯ ಬುಕ್ಕರಾಯನ ಕಾಲದಲ್ಲಿ (ಕ್ರಿ.ಶ. ೧೩೬೯ ರಲ್ಲಿ) ಕಟ್ಟಿಸಲಾಯಿತು ಎಂದು ಮತ್ತು ಈ ಶಾಸನವು ಕೆಲವು ಬಗೆಯ ಅತೀ ಮುಖ್ಯ ವಿಚಾರಗಳನ್ನು ತಿಳಿಸುತ್ತದೆ.[೪] ಅವುಗಳಲ್ಲಿ ಕೆರೆಯನ್ನು ಒಂದು ಒಳ್ಳೆಯ ದಿನದ ಮುಹೂರ್ತದಲ್ಲಿ ಕಟ್ಟಲಾಯಿತು ಎಂದು ವಿವರಿಸಲಾಗಿದೆ. ಆ ದಿನದ ವಿವರಣೆಯನ್ನು ಶಾಸನದಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ. ಶಕವರ್ಷ ೧೨೩೧ ರ ಸೌಮ್ಯ ಸಂವತ್ಸರ ಕಾರ್ತಿಕ ಶುದ್ದ ೧೪ ನೇ ದಿನ ಗುರುವಾರದ ಪುಷ್ಯ ನಕ್ಷತ್ರ ಕರ್ಕಾಟಕ ಲಗ್ನದ ದಿನದಂದು ಕೆರೆಯನ್ನು ಕಟ್ಟಿಸಲು ಎಲ್ಲಾ ಗ್ರಹಗಳು ಅನುಕೂಲಕರವಾಗಿವೆ ಎಂಬ ಉಲ್ಲೇಖ ಕಂಡು ಬರುತ್ತದೆ. ಹಾಗೆಯೇ ಧಾರವಾಡ ಜಿಲ್ಲೆಯಲ್ಲಿ ಮುಗಧ ಶಾಸನದಲ್ಲಿ ಶಕವರ್ಷ ೧೦೪೭ ನೆಯ ವಿಶ್ವವಸುಸಂವತ್ಸರದ ಪುಷ್ಯ ಶುದ್ದ ೫ ಡಿಸೆಂಬರ ೨ ಬುಧವಾರದಂದು ಈ ಮೂಹರ್ತದಲ್ಲಿ ಮುಗುಂದು ಮೂವತ್ತರ ಸಾಮಂತ ಬಮ್ಮದೇವನು ಅಜ್ಜ ಮಾರ್ತಾಂಡಯ್ಯನು ಕೆರೆಗೆ ಧಾನವನ್ನು ನೀಡುರುವುದು ಈ ಶಾಸನ ಉಲ್ಲೆಖಿಸುತ್ತದೆ.[೫] ಹೀಗೆ ಯಾವುದೇ ಪ್ರಾಚೀನ ಕಾಲದ ಕೆರೆಗಳಿಗೆ ಸಂಧಿಸಿದ ಶಾಸನಗಳ ವಿವರಣೆಗಳನ್ನು ಗಮನಿಸಿದಾ ಇಂತಹ ಅನೇಕ ಉದಾಹರಣೆಗಳು ನಮಗೆ ದೊರೆಯುತ್ತವೆ.

ಇಂತಹ ಯಾವುದೇ ಕಾರ್ಯದ ಆರಂಭದಲ್ಲಿ ಭೂಮಿ ಪೂಜೆಮಾಡುವಾಗ ಬುನಾದಿ ಕಲ್ಲನ್ನು ಹಾಕುವಾಗ ಮೊದಲು ಬಾರಿಗೆ ನೀರು ಬಂದಾಗ ಅದಕ್ಕೆ ಒಡ್ಡುಗಳನ್ನು ಕಟ್ಟುವಾಗಲೂ ಸಹಿತ ಹಾಗೆಯೇ ಅದಕ್ಕೆ ಸಂಬಂಧಿಸಿದ ಶಾಸನಗಳನ್ನು ನೆಡುವಾಗಲೂ ಸಹಿತ ಹಲವು ಬಗೆಯ ಪೂಜೆಗಳನ್ನು ಮಾಡುತ್ತಿದ್ದರು. ಹಾಗೆಯೇ ಕೆಲವು ಸಮಾಜಕ್ಕೆ ಸಂಬಂಧಿಸಿದ ಜನರು ಹಲವು ಧಾರ್ಮಿಕ ಸಮಾರಂಭಗಳಲ್ಲಿ ಪ್ರಾಣಿಗಳ ಬಲಿದಾನ ನೀಡುವ ಪದ್ಧತಿಯನ್ನು ರೂಢಿಯಲ್ಲಿ ಇಟ್ಟುಕೊಂಡಿದ್ದಾರೆ. ಅದರಲ್ಲಿ ವಿಶೇಷವಾಗಿ ಕೆರೆ ಭಾವಿಗಳ ಪೂಜೆಗಳಲ್ಲಿ ಬಲಿದಾನಗಳು ಹೆಚ್ಚಾಗಿ ಕಂಡುಬಂದಿವೆ. ಅದಕ್ಕೆ ಕಾರಣ ಬಾವಿ ಕೆರೆಗಳು ದೆವ್ವಗಳ ವಾಸಸ್ಥಾನ ಅವುಗಳಿಗೆ ಬಲಿ ಕೊಡಬೇಕು ಎಂಬ ನಂಬಿಕೆ ಆಗಿನ ಜನರಲ್ಲಿ ಕಂಡುಬಂದಿದೆ. ಕೆಲವು ವೇಳೆಯಲ್ಲಿ ಕೆರೆ ಬಾವಿಗಳು ನೀರಿಲ್ಲದೆ ಬರಿದಾದಾಗ ಅದು ಅಲ್ಲಿರುವ ಭೂತಗಳ ಚೇಷ್ಟೆ ಅದಕ್ಕಾಗಿ ಅವುಗಳಿಗೆ ಬಲಿ ಕೊಡಬೇಕು ಎಂದು ತಿಳಿದುಕೊಂಡಿದ್ದರು. ಹಾಗೆಯೇ ಮತ್ತೇ ಕೆಲವು ವೇಳೆ ಕೆರೆ, ಬಾವಿಗಳು ಸಾಕಷ್ಟು ತುಂಬಿದಾಗಲೂ ಸಹಿತ ಅದಕ್ಕೂ ಪ್ರಾಣಿ ಬಲಿಯನ್ನು ಕೊಡುತ್ತಿದ್ದರು. ಪ್ರಾಣಿ ಬಲಿಗಳ್ಲದೆ ಕೆಲವು ಸಂದರ್ಭದಲ್ಲಿ ನರ ಬಲಿಗಳನ್ನು ಕೊಟ್ಟಿರುವುದು ಹಲವಾರು ಕಡೆ ಕಂಡುಬರುತ್ತದೆ. ಇಂತಹ ಬಲಿಧಾನದ ವ್ಯವಸ್ಥೆಯು ಋಗ್ವೇದ ಮತ್ತು ಯಜುರವೇದ ಕಾಲದಲ್ಲಿಯು ಉಲ್ಲೇಖವಾಗಿದೆ.

ಋಗ್ವೇದದಲ್ಲಿ ವರುಣದೇವನಿಗೆ ನರಬಲಿ ನೀಡಿದ ಉದಾಹರಣೆಯಿದ್ದರೆ ಯಜುರವೇದದಲ್ಲಿ ಕೋಟೆ ಕೊತ್ತಲು ಊರ ಹೆಬ್ಬಾಗಿಲು ಮತ್ತು ಕೆರೆಗಳನ್ನು ಆಣೆಕಟ್ಟುಗಳನ್ನು ಕಟ್ಟುವಾಗ ನರಬಲಿಯನ್ನು ನೀಡಿ ಬಲಿಯಾದ ವ್ಯಕ್ತಿಯ ದೇಹವನ್ನು ಅವುಗಳ ಬುನಾದಿಗಳ ಅಡಿಪಾಯದಲ್ಲಿಯೇ ಹೂಳಬೇಕು ಎಂದು ತಿಳಿಸುತ್ತದೆ.

ಕೆರೆಗೆ ಬಲಿಯಾದ ಹೆಣ್ಣುಗಳೆಲ್ಲಾ ಜೀವಂತ ಬಲಿಯಾಗಿ ಅವರು ಅಲ್ಲಿಯೇ ದೇವತೆಗಳಾಗಿ ನೆಲೆಗೊಂಡಿದ್ದಾರೆ ಎಂಬ ವಿವರಣೆಯಿರುವ ಸಾಕಷ್ಟು ಮಾಸ್ತಿಕಲ್ಲುಗಳು ಕರ್ನಾಟಕದ ವಿವಿಧ ಭಾಗಗಳಲ್ಲಿ ಕಂಡುಬರುತ್ತವೆ. ದೊಡ್ಡ ದೊಡ್ಡ ಕೆರೆಗಳು ಆಣೆಕಟ್ಟುಗಳನ್ನು ಕಟ್ಟುವಾಗ ಹೆಂಗಸರನ್ನು ಮತ್ತು ಮಕ್ಕಳನ್ನು ಬಲಿ ನೀಡುತ್ತಾರೆ ಎಂಬುವದನ್ನು ಇಂದಿಗೂ ಜನರು ನಂಬಿದ್ದಾರೆ. ಈ ಕಾರಣದಿಂದಲೇ ನಂಬಿಕೆಗಳು ಸೃಷ್ಟಿಯಾಗಿವೆ. ಅದಕ್ಕಾಗಿ ಹಳ್ಳಿಗಳಲ್ಲಿ ಯಾರೂ ಬಾವಿ ಹತ್ತಿರ ಹೋಗಬಾರದು ಅದು ಸೆಳೆದುಕೊಳ್ಳುತ್ತದೆ. ಕೆರೆ ಕಟ್ಟಡಕ್ಕೆ ಹೆಂಗಸರನ್ನು ಬಲಿ ಕೊಡಬೇಕು ತುಂಬಿದ ಕೆರೆ ಕೂಗುತೆ ಬಾವಿ ತೊಡುವಾಗ ಜಲಕಣ್ಣು ಕಂಡ ತಕ್ಷಣ ಅದಕ್ಕೆ ರಕ್ತ ತೋರಿಸಬೇಕು ಈ ರೀತಿಯ ನಂಬಿಕೆ ಆಚರಣೆಗಳು ಜನರಲ್ಲಿ ಸಾಕಷ್ಟು ಕಂಡು ಬಂದಿವೆ.

ವಿಜಯನಗರ ಕಾಲದಲ್ಲಿಯೂ ನರಬಲಿಯು ಪ್ರಚಲಿತ ಇತ್ತೆಂದು ಕೆಲವು ಮೂಲಗಳಿಂದ ತಿಳಿದುಬರುತ್ತದೆ. ಕ್ರಿ.ಶ. ೧೩೬೪ ರಲ್ಲಿ ಬುಕ್ಕರಾಯನ ಮಂತ್ರಿಯಾದ ಚಿಕ್ಕ ಒಡೆಯನು ಕೆರೆಯ ಏರಿಯನ್ನು ನಿರ್ಮಿಸುವಾಗ ಒಬ್ಬ ಬಾಲಕಿಯನ್ನು ಬಲಿ ಕೊಟ್ಟಿರುವುದಾಗಿ ದಾಖಲಾಗಿದೆ. ಹಾಗೆಯೇ ಕೃಷ್ಣ ದೇವರಾನು ನಿರ್ಮಿದಂತ ಬಹುದೊಡ್ಡ ಕೆರೆಯಾದ ರಾಯಕೆರೆಯನ್ನು ನಿರ್ಮಿಸುವಾಗ ಕೆರೆಯ ಏರಿಯು ಪದೇ ಪದೇ ಒಡೆಯುತ್ತಿರಲು ಅವನು ಬ್ರಾಹ್ಮಣರನ್ನು ಕರಣ ಏನೆಂದು ವಿಚಾರಿಸುತ್ತಾನೆ. ಅದಕ್ಕೆ ಅವರು ನರಬಲಿ, ಕುದುರೆ ಮತ್ತು ಎಮ್ಮೆಗಳನ್ನು ಬಲಿ ನೀಡಬೇಕೆಂದು ತಿಳಿಸುತ್ತಾರೆ. ಅದರಂತೆ ರಾಜನು ೬೦ ಜನರನ್ನು ಕುದುರೆ ಹಾಗೂ ಎಮ್ಮೆಗಳನ್ನು ಬಲಿ ಕೊಡುತ್ತಾನೆ ಎಂಬ ವಿಷಯ ವಿದೇಶಿಯರ ಬರಹಗಳಲ್ಲಿ ದಾಖಲಾಗಿದೆ.

ಈ ರೀತಿಯಾದ ಕಥೆಗಳು ಮತ್ತು ಸಾಂಸ್ಕೃತಿಕ ಆಚರಣೆಗಳು ನವಲಗುಂದ ತಾಲೂಕಿನಲ್ಲಿಯೂ ಸಾಕಷ್ಟು ಕಂಡು ಬಂದಿವೆ ಅಲ್ಲಿಯ ವೀರಪ್ಪ ಎಂಬ ಜಮೀನ್ದಾರನು ತನ್ನ ಹೊಲದಲ್ಲಿ ಕೆರೆಯೊಂದನ್ನು ತೋಡಿಸುವ ಕೆಲವನ್ನು ಕೈಗೊಂಡನು. ಸಾಕಷ್ಟು ಆಳಕ್ಕೆ ತೋಡಿದರು ಗಟ್ಟಿ ನೆಲವು ಸಿಗದೆ ಪುಡಿ ಮಣ್ಣಿನ ಭೂಮಿಯೇ ಆಗಿ ಮೇಲಿಂದ ಮೇಲೆ ಮಣ್ಣು ಕುಸಿದು ಬಿಳುತ್ತಿತ್ತು ಮಾನವ ಪ್ರಯತ್ನಗಳಿಂದ ಪ್ರಯೋಜನ ಆಗಲಿಲ್ಲ. ಆಗ ಜಮೀನ್ದಾರನು ನಾನು ವೀರಯ್ಯಸ್ವಾಮಿ ಆಶೀರ್ವಾದ ಪಡೆದು ಕಾರ್ಯಪ್ರವೃತ್ತ ನಾಗಬೇಕಿತ್ತು ಈಗಲಾದರು ನಾನು ಅವನಿಗೆ ಶರಣಾಗುತ್ತೇನೆ ಎಂದು ನಿಶ್ಚಿಯಿಸಿಕೊಂಡು ನವಲಗುಂದಕ್ಕೆ ಹೋಗಿ ಸ್ವಾಮಿಯ ಮುಂದೆ ತನ್ನ ಕಷ್ಟವನ್ನು ಹೇಳಿಕೊಂಡನು. ಆಗ ವೀರಯ್ಯ ಸ್ವಾಮಿಯವರು ನಾಗಲಿಂಗನ ಗದ್ದುಗೆಯನ್ನು ಪೂಜಿಸಿ, ಭಸ್ಮಾದಿ ಪ್ರಸಾದಗಳನ್ನು ಪತ್ತಾರನ ಕೈಗೆ ಕೊಟ್ಟು ಇನ್ನು ಹೋಗು ನಿನ್ನ ಕೆಲಸ ಮಾಡು ಎಂದು ಹೇಳಿದರು. ಪತ್ತಾರನು ಆ ಪ್ರಸಾದವನ್ನು ತಂದು ಕೆರೆಗೆ ಹಾಕಿ ಪೂಜಿಸಿ ಕಾರ್ಯವನ್ನು ಪುನರಾರಂಭ ಮಾಡಿಸಿದನು. ಆಗ ಮಣ್ಣು ಕುಸಿಯುವದು ತಪ್ಪಿ ಎಲ್ಲವು ನಿರ್ವಿಘ್ನವಾಗಿ ನೆರವೇರಿ ಗಂಗೆಯು ಉಕ್ಕಿದಳು ಕೆರೆಯು ಪೂರ್ಣಗೊಂಡಬಳಿಕ ವೀರಯ್ಯ ಸ್ವಾಮಿಯವರು ಅಲ್ಲಿಯೇ ಆಗಮಿಸಿ ಕೆರೆಗೆ ಪೂಜೆ ಸಲ್ಲಿಸಿ ಅದನ್ನು ಉದ್ಘಾಟಿಸಿ ಎಲ್ಲರನ್ನು ಆಶೀರ್ವದಿಸಿದರು. ಈಗಲೂ ಆ ಕೆರೆಯು ಉರ್ಜಿತಾವಸ್ಥೆಯಲ್ಲಿರುವುದು ಸಂತಸದ ಸಂಗತಿಯಾಗಿದೆ.[೬]

ನವಲಗುಂದ ತಾಲೂಕಿನ ಎಲ್ಲಾ ಊರುಗಳಲ್ಲಿ ಗಣೇಶ ಚತುರ್ಥಿಯ ಸಮಯದಲ್ಲಿ ಗಣೇಶನ ಮೂರ್ತಿಯನ್ನು ೫, ೭, ೧೧ ದಿನಗಳವರೆಗೆ ಇಟ್ಟು ಪೂಜೆಯನ್ನು ಮಾಡಿ ಅದನ್ನು ಕೊನೆಯಲ್ಲಿ ಮೆರೆವಣಿಗೆಯ ಮೂಲಕ ಕೆರೆಗಳಲ್ಲಿ ವಿಸರ್ಜನೆ ಮಾಡುವರು ಇದು ಮೊದಲಿನಿಂದಲೂ ಇಂದಿನವರೆಗೆ ಆಚರಣೆಯಲ್ಲಿರುವ ಪದ್ದತಿಯಾಗಿದೆ. ಹಾಗೆಯೇ

ನವಲಗುಂದ ನವಲಗುಂದ ಪ್ರದೇಶದಲ್ಲಿಯ ನೀಲಮ್ಮನ ಕೆರೆಯ ಲಕ್ಷಣವನ್ನು ಅವಲೋಕನ ಮಾಡಿದಾಗ ಕೆರೆಯ ಮೊದಲನೆಯ ಪ್ರವೇಶ ದ್ವಾರದಲ್ಲಿ ಬಸವಣ್ಣನ ಮೂರ್ತಿಯಿದ್ದು ಅದನ್ನು ದಿನನಿತ್ಯ ಇಂದಿಗೂ ಪೂಜೆಯನ್ನು ಮಾಡುತ್ತಾರೆ. ಅದೇ ಕೆರೆಯ ಎರಡನೆಯ ದ್ವಾರದಲ್ಲಿ ನೀಲಮ್ಮನ ಮೂರ್ತಿಯಿದ್ದು ಅದನ್ನು ಹೆಚ್ಚಾಗಿ ಸ್ತ್ರೀಯರು ಪೂಜೆಯನ್ನು ಮಾಡುವರು. ಅಲ್ಲದೆ ಹೆಣ್ಣು ಮಕ್ಕಳ ಬೇಡಿಕೆಗಳನ್ನು ಇಡೇರಿಸುವ ದೇವತೆ ಎಂಬ ನಂಬಿಕೆ ಅಲ್ಲಿಯ ಸ್ತ್ರೀಯರಲ್ಲಿದೆ. ಇಲ್ಲಿಯ ೩ ಕೆರೆಗಳು ದೇಸಾಯಿಯವರು ತಮ್ಮ ೩ ಜನ ಹೆಂಡತಿಯರ ನೆನಪಿಗಾಗಿ ಕಟ್ಟಿಸಿದರು. ಅದರಲ್ಲಿ ನೀಲಮ್ಮನ ಕೆರೆಯು ಅತಿ ದೊಡ್ಡದಾಗಿದ್ದು ಇಂದಿಗೂ ಇಡೀ ನವಲಗುಮದ ಪ್ರದೇಶಕ್ಕೆ ನೀರನ್ನು ಸರಬರಾಜು ಮಾಡುವ ಕೆರೆಯಾಗಿದೆ.[೭]

ಕೆಲವು ವರ್ಷಗಳು ಬರಗಾಲದ ಸ್ಥಿತಿಯಲ್ಲಿ ಕೆರೆಯಲ್ಲಿ ನೀರು ಇಲ್ಲದೆ ಬರಿದಾದಾಗಲೂ ಹಲವಾರು ಆಚರನೆಗಳು ಮಾಡಿರುವುದು ಕಂಡುಬಂದಿದೆ. ಕೆರೆಗಳಿಗೆ ನೀರು ಬರಲೆಂದು ಅವುಗಳನ್ನು ಪೂಜೆ ಮಾಡುವದು ಅವುಗಳಿಗೆ ಬಲಿ ಕೊಡುವುದು ಹೀಗೆ ಮಾಡುವುದರಿಂದ ಕೆರೆಯಲ್ಲಿ ನೀರು ಬರುತ್ತದೆ ಎಂಬ ನಂಬಿಕೆ ಜನರಲ್ಲಿತ್ತು. ಹಾಗೆಯೇ ಅಪಾರ ಮಳೆ ಬಂದು ಅತಿವೃಷ್ಟಿಯಾಗಿ ಕೆರೆಯ ಕೋಡಿ ಒಡೆದು ನೀರು ಹರಿದಾಗಲೂ ಅದನ್ನು ಪೂಜೆ ಮಾಡುವ ಪದ್ಧತಿಯು ಕಂಡುಬಂದಿದ್ದು ಈ ಎರಡು ಸಂದರ್ಭದಲ್ಲಿ ಕೆರೆಗಳಿಗೆ ಕುರಿ–ಕೋಳಿಗಳನ್ನು ಬಲಿಕೊಡುವದು ಸಾಮಾನ್ಯವಾಗಿತ್ತು. ಎಂಬುವದು ಅಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ತಿಳಿದುಬಂದ ವಿಷಯವಾಗಿದೆ.

ಅದೇ ರೀತಿಯಲ್ಲಿ ಅಣ್ಣಿಗೇರಿಯ ಕೆರೆಗೆ ಬೇಟಿ ನೀಡಿದಾಗ ಅಲ್ಲಿಯ ಜನರು ಊರು ದೇವಿಯ ಜಾತ್ರೆಯ ಮತ್ತು ಅಮೃತೇಶ್ವರ ದೇವಾಲಯದ ಜಾತ್ರೆಯ ಸಂದರ್ಭದಲ್ಲಿ ದೇವರನ್ನು ಪಲ್ಲಕ್ಕಿಯಲ್ಲಿ ಮೆರವಣಿಗೆಯ ಮೂಲಕ ಕೆರೆಯವರೆಗೂ ಬಂದು ಕೆರೆಯ ನೀರಿನಿಂದ ದೇವರನ್ನು ಪೂಜೆ ಮಾಡುವ ಪದ್ದತಿಯು ಅಲ್ಲಿ ಪ್ರಮುಖವಾಗಿದೆ. ಈ ಒಂದು ಆಚರಣೆಯು ಅಲ್ಲಿ ಮೊದಲಿನಿಂದಲೂ ಕಮಡುಬಂದಿದೆ ಎಂದು ಅಲ್ಲಿಯ ಹಿರಿಯ ವ್ಯಕ್ತಿಯಾದ ಮಾರುತಿ ತಂಬದ ಎಂಬುವರಿಂದ ತಿಳಿದು ಬಂದಿದೆ.

ಹಾಗೆಯೇ ಬರಗಾಲದ ಸಂದರ್ಭದಲ್ಲಿ ಊರಿನ ಕೆರೆಗಳು ಬತ್ತಿ ಹೋದಾಗ ಅಲ್ಲಿನ ಜನರೆಲ್ಲರು ಊರಿನ ದೇವರ ಗುಡಿಗೆ ತಮ್ಮ ತಮ್ಮ ಮನೆಯಿಂದ ಅರಿಶಿನ, ಕುಂಕುಮ, ಲಿಂಬೆಹಣ್ಣು, ತೆಂಗಿನಕಾಯಿ ಅಲ್ಲದೆ ದೇವತೆಯ ವಸ್ತ್ರಾಭರಣಗಳು ತೆಗೆದುಕೊಂಡು ಹೋಗಿ ದೇವತೆಗೆ ವಿಶೇಷ ಪೂಜೆಯನ್ನು ಸಲ್ಲಿಸುವುದು ಮತ್ತು ಊರಿನ ಕೆರೆಯ ಅಭಿವೃದ್ಧಿಗಾಗಿ

ಶ್ರಮಧಾನವನ್ನು ಮಾಡುವದು ಸಹಿತ ತಿಳಿದುಬಂದಿದೆ. ಹೀಗೆ ಮಾಡುವುದರಿಂದ ಊರಲ್ಲಿ ಧಾರಾಖಾ ಮಳೆಯಾಗಿ ಕೆರೆಗಳು ತುಂಬುತ್ತವೆ ಎಂಬ ನಂಬಿಕೆ ಅವರಲ್ಲಿದೆ. ಈ ಆಚರಣೆಯು ಹಿಂದಿಇಂದ ಇಂದಿನವರೆಗೂ ರೂಢಿಯಲ್ಲಿರುವುದನ್ನು ಕಾಣಬಹುದು.

ಪರು ಆಚರಣೆ :

ಮಳೆಯ ಪ್ರಮಾಣ ಕಡಿಮೆ ಆದಾಗ ಅಥವಾ ಮಳೆಯು ಬರದೆ ಹೋದಾಗ ಊರಿನ ಮುಖಂಡರೆಲ್ಲರು ಸೇರಿ ಒಂದು ನಿರ್ಣಯ ಮಾಡಿಕೊಂಡು ಪರು ಎಂಬ ಪೂಜೆಯನ್ನು ಆಚರಣೆ ಮಾಡುವರು ಅದಕ್ಕಾಗಿ ಅವರು ಒಂದು ವಾರವನ್ನು ಆಯ್ಕೆ ಮಾಡಿಕೊಳ್ಳುವರು ಅದಕ್ಕೆ ಅವರು ವಾರ ಬಿಡುವದು ಎಂದು ಕರೆಯುತ್ತಾರೆ. ಆ ಪೂಜೆ ಪ್ರಾರಂಭವಾದ ವಾರದಿಂದ ಹೆಣ್ಣು ದೇವರಿಗೆ ಸಂಬಂಧಿಸಿದ ದಿನಗಳಲ್ಲಿ ಅವು ಸಾಮಾನ್ಯವಾಗಿ ಮಂಗಳವಾರ ಮತ್ತು ಶುಕ್ರವಾರದ ದಿನ ಊರಿನಲ್ಲಿ ಯಾರ ಮನೆಯಲ್ಲೂ ರೊಟ್ಟಿ ಅಥವಾ ಸಿಹಿ ತಿಂಡಿಯ ಅಡುಗೆಯನ್ನು ಮಾಡುವ ಹಾಗಿಲ್ಲ ಆ ತಿಂಗಳದ ಕೊನೆಯ ದಿನ ಅಂದರೆ ಅದು ಕೊನೆಯ ಶುಕ್ರವಾರ ಅಥವಾ ಮಂಗಳವಾರದ ದಿನ ಎಲ್ಲರ ಮನೆಯಲ್ಲಿ ಸಿಹಿ ಅಡುಗೆಯನ್ನು ಮಾಡಿ ಮೆರವಣಿಗೆಯ ಮೂಲಕ ಊರಿನ ಎಲ್ಲ ದೇವಾಲಯಗಳಿಗೆ ಬೇಟಿ ನೀಡಿ ಕೊನೆಯಲ್ಲಿ ಕೆರೆಗೆ ಹೋಗಿ ಅಲ್ಲಿ ಕೆರೆಯನ್ನು ಪೂಜೆ ಮಾಡಿ ಅಲ್ಲಿಯೇ ಎಲ್ಲರು ಊಟವನ್ನು ಮಾಡುವರು ಹೀಗೆ ವಾರ ಬಿಟ್ಟು ದೇವತೆಯರ ಪೂಜೆ ಆಡುವುದರಿಂದ ಊರಿಗೆ ಮಳೆ ಬರುತ್ತದೆ ಎಂಬ ನಂಬಿಕೆ ಆ ಊರಿನ ಜನರಲ್ಲಿದೆ.

ಇಲ್ಲಿಯ ಹಳ್ಳಿಕೇರಿ ಎಂಬ ಊರಿನಲ್ಲಿಯ ಒಂದು ಕೆರೆಗೆ ಬೇಟನೀಡಿದಾಗ ಅದೊಂದು ವಿಶೇಷವಾದ ಕೆರೆಯಾಗಿತ್ತು ಎಂಬ ವಿಷಯ ತಿಳಿದು ಬಂದಿತು. ಕಾರಣ ಆ ಕೆರೆಯ ಒಂದು ಪಕ್ಕದಲ್ಲಿ ದ್ಯಾಮವ್ವನ ಗುಡಿ ಹತ್ತಿ ಇರುವದರಿಂದ ಅದನ್ನು ದ್ಯಾಮವ್ವನ ಕೆರೆ ಎಂತಲೂ ಕೆರೆಯವರು ಮತ್ತು ಅಲ್ಲಿಯ ಇನ್ನೊದು ವಿಶೇಷ ಎಂದರೆ ಕೆರೆಯ ಇನ್ನೊಂದು ದಂಡೆಯ ಮೇಲೆ ಮುಸ್ಲಿಂ ಸಂತನಾದ ಮಾಬುಸುಬಾನಿ ಎಂಬುವನ ಹೆಸರಿನ ದರ್ಗಾವು ಅಲ್ಲಿ ಕಂಡುಬಂದಿದೆ. ಈ ಊರಿನ ಜನರು ಎರಡೂ ದೇವರ ಆರಾಧನೆ ಮಾಡುವುದು ಕಂಡುಬಂದಿರುವುದು ವಿಶೇಷವಾಗಿದೆ.[೮] ಮತ್ತು ಅಲ್ಲಿಯೇ ಒಂದು ಬೇವಿನ ಮರವೊಂದು ಇದ್ದು ಜನರು ಅದನ್ನು ಸಹಿತ ಪೂಜೆ ಮಾಡುವುದು ಸಾಮಾನ್ಯವಾಗಿತ್ತು. ಈ ರೀತಿಯ ಧರ್ಮದ ಭಾವೈಕ್ಯತೆಯನ್ನು ಮತ್ತು ಪ್ರಾಚೀನವಾದ ಆಚರಣೆಗಳು ಇಂದಿಗೂ ಇಲ್ಲಿ ಉಳಿದುಬಂದಿರುವುದನ್ನು ನಾವು ಕಾಣಬಹುದು.

ಮಹಾನವಮಿಯಲ್ಲಿ ಆಚರಣೆ :

ನವಲಗುಂದ ತಾಲೂಕಿನ ಹೆಚ್ಚಿನ ಕೆರೆಗಳು ಅಧ್ಯಯ ಕೈಗೊಂಡಾಗ ಸಾಮಾನ್ಯವಾಗಿ ಕಂಡುಬಂದ ವಿಷಯ ಎಂದರೆ ಹೆಚ್ಚು ಕೆರೆಗಳ ದಡಗಳಲ್ಲಿ ಬೇವಿನಮರ ಅಥವಾ ಬನ್ನಿಮರ ಕಂಡುಬಂದಿರುವುದು ಸರ್ವೇಸಾಮಾನ್ಯವಾಗಿದೆ. ಇಲ್ಲಿಯ ಇಬ್ರಾಹಿಂಪುರ ಎಂಬ ಕೆರೆಗೆ ಬೇಟಿ ನೀಡಿದಾಗ ಆ ಕೆರೆಯ ದಂಡೆಯ ಮೇಲೆ ಒಂದು ಬನ್ನಿಮರವೊಂದು ಕಂಡು ಬಂದಿತು. ಅದನ್ನು ವಿಚಾರಣೆ ಮಾಡಿದಾಗ ತಿಳಿದುಬಂದ ವಿಷಯವೆಂದರೆ ಪ್ರತಿವರ್ಷ ನವರಾತ್ರಿಯ ಕೊನೆಯ ದಿನದಂತೆ ರಾತ್ರಿಯಲ್ಲಿ ಊರಿನ ದೇವರ ಪಲ್ಲಕ್ಕಿಯ ಮೆರವಣಿಗೆಯ ಮೂಲಕ ಈ ಕೆರೆಗೆ ಬಂದು ಈ ಗಿಡದಲ್ಲಿನ ಒಂದು ರಂಬೆಯನ್ನು ಮುರಿದು ಅದನ್ನು ಪಲ್ಲಕ್ಕಿಯಲ್ಲಿ ಇಟ್ಟುಕೊಂಡು ಮತ್ತೆ ಮೆರವಣಿಗೆಯ ಮೂಲಕ ಊರಿನಲ್ಲಿ ಹೋಗುತ್ತಾರೆ. ಆಗಲೇ ಊರಿನಲ್ಲಿ ಬನ್ನಿಯನ್ನು ಕೊಡಲು ಆರಂಭಿಸುತ್ತಾರೆ ಹೀಗೆ ಕೆರೆಯ ಮೇಲಿನ ಗಿಡಗಳು ವಿಶೇಷ ರೀತಿಯ ಪೂಜೆಗಳು ನಡೆಯುವದು ಕಂಡುಬಂದಿದೆ.

ಕೆಲವೊಂದು ಕಡೆಯಲ್ಲಿ ಹಳ್ಳಿಯಲ್ಲಿ ಹುಡುಗರೆಲ್ಲರು ಸೇರಿ ಮಣ್ಣಿನಿಂದ ಮಳೆರಾಯನ ವಿಗ್ರಹವನ್ನು ಮಾಡಿ ಅದಕ್ಕೆ ಅರಿಸಿಣ ಕುಂಕುಮ ಹೂ ಮುಂತಾದವುಗಳಿಂದಾ ಅಲಂಕರಿಸಿ ಪೂಜೆ ಮಾಡಿ ಅದನ್ನು ಒಬ್ಬ ಬಾಲಕ ತಲೆ ಮೇಲೆ ಇಟ್ಟುಕೊಂಡು ಅವನಿಗೂ ಒಂದು ಹೂ ಮಾಲೆಯನ್ನು ಹಾಕಿ ಊರಿನ ಹುಡಗರೆಲ್ಲರೂ ಅವನ ಜೊತೆಜೊತೆಯಲ್ಲಿಯೇ ಊರಿನಲ್ಲಿ ಸಂಚರಿಸುವರು ಹಾಗೆ ಸಂಚರಿಸುವಾಗ ಊರಿನ ಹೆಣ್ಣು ಮಕ್ಕಳು ಮಳೆರಾಯನ ವಿಗ್ರಹ ಪೂಜೆಮಾಡಿ ಧವಸ, ಧಾನ್ಯ ಅಥವಾ ಹಣದ ರೂಪದ ಕಾಣಿಕೆಯನ್ನು ಹುಡುಗನಿಗೆ ನೀಡುತ್ತಾರೆ. ಹಾಗೆ ಪೂಜೆ ಮಾಡಿದ ನಂತರ ಎಲ್ಲರೂ ಹುಡುಗರು ಸೇರಿ ಕೆರೆದಂಡೆಗೆ ಹೋಗಿ ಆ ಮಳೆರಾಯನ ಮೂರ್ತಿಯನ್ನು ಪೂಜೆ ಮಾಡಿ ಅದನ್ನು ಕೆರೆಯಲ್ಲಿ ಬಿಟ್ಟು ಬಿಡುತ್ತಾರೆ. ನಂತರ ಊರಿನಲ್ಲಿ ಬಂದು ಎಲ್ಲರಿಗೂ ಪ್ರಸಾದವನ್ನು ಹಂಚುತ್ತಾರೆ. ಈ ಪದ್ದತಿಯು ಇಂದಿಗೂ ಹಲವಾರು ಗ್ರಾಮಗಳಲ್ಲಿ ಕಂಡುಬಂದಿದೆ.

ನವಲಗುಂದ ತಾಲೂಕಿನಲ್ಲಿ ಈಗಲೂ ಕೆಲವು ಆಚರಣೆಗಳ, ಬೆಳಕಿನಲ್ಲಿವೆ. ಒಂದು ಕರೆಯು ತುಂಬಿ ಕೋಡಿ ಹರಿದಾಗ ಆ ಊರಿನ ಜನರು ಕೆರೆಯ ನೀರಿಗೆ ಪೂಜೆ ಸಲ್ಲಿಸಿ ಒಂದು ಕುರಿಯನ್ನು ಬಲಿಕೊಡುತ್ತಾರೆ. ಈ ಪದ್ಧತಿಯು ತಾಲೂಕಿನ ಕೆಲವೇ ಕೆಲವು ಹಳ್ಳಿಗಳಲ್ಲಿ ಕಂಡುಬರುತ್ತದೆ. ಆದರೆ ಈ ಪದ್ಧತಿಯ ವಾರ್ಷಿಕವಾಗಿ ಕಂಡುಬರುವುದಿಲ್ಲಾ. ಕೆರೆಯ ತುಂಬಿ ಕೋಡಿಹರಿದಾಗ ಮಾತ್ರ ಈ ಆಚರಣೆ ಕಂಡಬರುತ್ತದೆ. ಇತ್ತಿಚಿನ ದಿನಗಳಲ್ಲಿ ಇಂತಹ ಬಲಿಕೊಡುವ ಪದ್ಧತಿ ಮಾಡಿಲ್ಲವೆಂದು ಕ್ಷೇತ್ರಕಾರ್ಯ ಕೈಗೊಂಡಾಗ ಜನರು ತಿಳಿಸುವರು.

ತಾಲೂಕಿನ ಕೆಲವು ಗ್ರಾಮಗಳಲ್ಲಿ ೧೦, ೨೦ ಮಹಿಳೆಯರು ಸೇರಿ ಮಣ್ಣಿನ ಮಡಿಕೆಗಳಲ್ಲಿ ಪಂಚಾಮೃತವನ್ನು (ಹಾಲು, ಮೊಸರು, ಬೆಣ್ಣೆ, ತುಪ್ಪ, ಮಜ್ಜಿಗೆ) ತುಂಬಿಕೊಂಡು ತಲೆ ಮೇಲೆ ಹೊತ್ತುಕೊಂಡು ಮಳೆರಾಯನಿಗೆ ಸಂಬಂಧಿಸಿದ ಹಾಗೂ ಗಂಗಮ್ಮನಿಗೆ ಸಂಬಂಧಿಸಿದ ಹಾಡುಗಳನ್ನು ಹಾಡುತ್ತಾ ಆ ಗ್ರಾಮದ ಪ್ರತಿಯೊಂದು ಮನೆಗೂ ಬೇಟಿನೀಡಿ ಆ ಮಡಿಕೆಗಳನ್ನು ಪೂಜೆಮಾಡಿಸಿಕೊಂಡು ಜೊತೆಗೆ ದವಸ, ಧಾನ್ಯ ಮತ್ತು ಹಣದ ರೂಪದಲ್ಲಿ ಅವರಿಗೆ ಕಾಣಿಕೆ ರೂಪದಲ್ಲಿ ಕಾಣಿಕೆಯನ್ನು ಪಡೆದುಕೊಂಡು ಕೊನೆಗೆ ಊರೆಲ್ಲಾ ಸುತ್ತಿದ ಮೇಲೆ ಕೆರೆಹತ್ತಿರಾ ಹೋಗಿ ಆ ಮಡಿಕೆಗಳನ್ನು ಪೂಜೆ ಮಾಡಿ ಪ್ರಸಾದವನ್ನು ಸೇವಿಸಿ ಬರುವಾಗ ಮಡಿಕೆಗಳನ್ನು ಕೆರೆಯಲ್ಲಿ ಬಿಟ್ಟ ಬಿಡುತ್ತಾರೆ.

ಈ ರೀತಿಯ ಆಚರಣೆ ಮಾಡುವುದರಿಂದಾ ಮಳೆಬರುತ್ತದೆ ಎಂಬ ನಂಬಿಕೆ ಜನಸಾಮಾನ್ಯರಲ್ಲಿ ಮನೆಮಾಡಿದೆ. ಇಂತಹ ಆಚರಣಗಳು ಇತ್ತಿಚಿಗೆ ಕಡಿಮೆ ಪ್ರಮಾಣದಲ್ಲಿ ಕೆಲವೇ ಕೆಲವು ಹಳ್ಳಿಗಳಲ್ಲಿ ಕಾಣಬಹುದು.

ಕೆರೆಗೆ ಹಾರ :

ಕಲ್ಲಿನಕೇರಿ ಮಲ್ಲನಗೌಡ ಕೆರೆಯೊಂದು ಕಟ್ಟಿಸ್ಯಾನು
ಕರೆಯೊಂದು ಕಟ್ಟಿಸ್ಯಾನು ಸೆರೆಮುಕ್ಕ ನೀರಿಲ್ಲ
ಸೆರೆಮುಕ್ಕ ನೀರಿಲ್ಲ ಹೊತ್ತಿಗೆ ತೆಸ್ಯಾರು
ಹೊತ್ತಿಗೆ ತಗಸ್ಯಾರು ಜೋಯಿಸ ಕೇಳ್ಯಾರು
ಕಿರಿ ಸೊಸಿ ಭಾಗೀರತಿನ್ನ ಹಾರವ ಕೊಡಬೇಕು
ಹಾರಾ ಕೊಡಬೇಕೆಂದು ಮಾತಾತು ಮನಿಯಾಗ
ಸಣ್ಣಸೊಸಿ ಭಾಗೀರಥಿ ತವರಮನೆಗೆ ಹೊಂಟಾಳ
ಅತ್ತೆಮ್ಮ ನಾ ನಮ್ಮ ತವರ ಮನೆಗೆ ಹೋಗುತೀನಿ
ಸರ್‍ರನೆ ಹೋಗವ್ವಾ ಭರ್‍ರನೆ ಬಾರವ್ವ
ಸಣ್ಣ ಸೊಸೆ ಬಾಗೀರತಿ ತವರುಮನೆಗೆ ಹೋದಾಳು
ಮನೆ ಮುಂದ ಹೋಗುವದಕ ಅವರಪ್ಪ ಬಂದಾನು
ಎಂದಿಲ್ಲದ ಬಾಗೀರರತಿ ಇದ್ಯಾಕ ಬಂದವ್ವ
ಬಾಡಿದ ಮಾರ್‍ಯಾಕ ಕಣ್ಣಗ ನೀರ್‍ಯಾಕ?
ಸಣ್ಣ ಸೊಸಿ ಭಾಗೀರತಿ ತವರ ಮನಿಯ ಬಿಟ್ಟು

ತವರಮನಿಯ ಬಿಟ್ಟು ಗೆಣತಿ ಮನೆಗೆ ನಡೆದಳು
ತಲಬಾಗಿಲದಾಗ ಗೆಳತಿನ್ನ ಕಂಡಳು.
ಸಣ್ಣ ಸೊಸಿ ಬಂಗವ್ವ ನೀನರೆ ಜಳಕಮಾಡು
ಸಣ್ಣ ಸೊಸಿ ಭಾಗೀರತಿ ಜಳಕನ ಮಾಡ್ಯಾಳು
ಜಳಕನ ಮಾಡ್ಯಾಳು ಸಿಂಗಾಸಿಂಬಿ ಮಾಡ್ಯಾಳು
ಸಿಂಗಾರಸಿಂಬಿ ಮಾಡ್ಯಾಳು ಮುಂದ ಮುಂದ ಹೊರಟಾಳು
ಮುಂದ ಮುಂದ ಭಾಗೀರಥಿ ಹಿಂದಿಂದ ಎಲ್ಲರೊ
ಸಣ್ಣಸೊಸಿ ಭಾಗೀರತಿ ನೀ ತರಹೋಗವ್ವ
ಸಣ್ಣಸೊ ಭಾಗೀರತಿ ಬಿರಿ ಬಿರಿ ನಡೆದಾಳು
ಬಿರಿ ಬಿರಿ ಹೋದಾಳು ಬಂಗಾರ ಬಟ್ಲ ತಗೊಂಡಳು
ಒಂದು ಮೆಟ್ಟೇರುದಕ ಪಾದಕ ಬಂದಾಳು ಗಂಗಿ
ಎರಡು ಮೆಟ್ಲೇರುದಗ ಪಾದ ಮುಣಿಗಿಸ್ಯಾಳು ಗಂಗಿ
ಮೂರು ಮೆಟ್ಲೇರುದಕ ಮೊಣಕಾಲಿಗೆ ಬಂದಳು ಗಂಗಿ
ನಾಲ್ಕು ಮೆಟ್ಲೇರುದಕ ನಡುಮಟ ಬಂದಾಳು ಗಂಗಿ
ಐದು ಮೇಟ್ಲೇರುದಕ ತುಂಬಿ ಹರಿದಾಳು ಗಂಗಿ
ಸಣ್ಣ ಸೊಸಿ ಭಾಗೀರತಿ ಕೆರೆಗ್ವಾರವಾದಳು

ಊರಿನ ಹಿತಕ್ಕಾಗಿ ನಾಡಿನ ಕ್ಷೇಮಕ್ಕಾಗಿ ಕೆಲಸಗಳನ್ನು ಕೈಗೊಂಡಾಗ ಅಡ್ಡತಡೆಗಳು ಒದಗುವುದು ಸಹಜ. ದನಕರಗಳಿಗೂ ಪೈರುಪಚ್ಚೆಗಳಿಗೂ ನೀರು ಒದಗಲೆಂದು ಬಲುವೆಚ್ಚದಿಂದ ಕೆರೆಯನ್ನು ಕಟ್ಟಿದರೆ ನೀರೇ ಬೀಳದಿರಬಹುದು ಪ್ರಜೆಗಳು ಸುರಕ್ಷಿತವಾಗಿರಲೆಂದು ಕೋಟೆಯನ್ನು ಎಬ್ಬಿಸಿದರೆ ಗೋಡೆಯೇ ಭದ್ರವಾಗಿ ನಿಲ್ಲದಿರಬಹುದು. ಇಂಥ ಸಂದರ್ಭದಲ್ಲಿ ನಮ್ಮ ಹಿಂದಿನವರು ಇಲ್ಲಿಯೋ ದೈವಿಕವಾದ ಕಾರಣವಿರಬೇಕೆಂದು ನಂಬಿ ಜೋಯಿಸರನ್ನು ವಿಚಾರಿಸುತ್ತಿದ್ದರು. ಗ್ರಹಶಾಂತಿಯನ್ನೂ ಭೂತಬಲಿಯನ್ನು ನಡೆಸಿ ಮುಂದುವರೆಯುತ್ತಿದ್ದರು. ಅಂತು ಊರೊಟ್ಟಿನ ಹಿತಕ್ಕಾಗಿ ಆಗಿನ ಬಲ್ಲವರು ಹೇಳಿದ ತ್ಯಾಗಕಾರ್ಯವನ್ನು ಅದು ಎಷ್ಟೇ ಕಠಿಣವಾಗಿದ್ದರೂ ಕೈಗೊಳ್ಳಲು ಅವರು ಹಿಂದೆ ಮುಂದೆ ನೋಡುತ್ತಿರಲಿಲ್ಲ.

ಕಲ್ಲಿನಕೇರಿ ಎಂಬ ಊರಿನಲ್ಲಿ ಮಲ್ಲನಗೌಡ ಎಂಬ ಜಮೀನ್ದಾರನು ಕೆರೆಯೊಂದು ಕಟ್ಟಿಸಲು ಆರಂಭಿಸಿದನು. ಆದರೆ ಕರೆಯು ಎಷ್ಟು ಅಗೆದರೂ ನೀರೆ ಬರಲಿಲ್ಲ ಆಗ

ಮಲ್ಲನಗೌಡರು ಹೊತ್ತಿಗೆಯನ್ನು ತೆಗೆಯಿಸಿ ಪ್ರಶ್ನೆ ನೋಡಿದಾಗ ಜೋಯಿಸರು ಇದು ದೇವರ ಕಾಟ ದೆವ್ವದ ಕಾಟ ಅಲ್ಲ. "ಹಿರಿಸೊಸೆ ಮಲ್ಲವ್ವನ ಹಾರವ ಕೊಡಬೇಕು. ಆಕೆಯನ್ನು ಆಹಾರವಾಗಿ ಒಪ್ಪಿಸಿದರೆ ಕೆರೆಯಲ್ಲಿ ನೀರು ಬೀಳುತ್ತದೆ" ಎಂದರು. ಉತ್ತರ ಕರ್ನಾಟಕದ ಜನರ ಮಾತಿನಲ್ಲಿ "ಆಹಾರ" ಎಂಬುವದು ಹಾರ ಎಂದಾಗಿದೆ) ಗೌಡನ ಮನೆಯಲ್ಲಿ ಆಲೋಚನಗಿಟ್ಟಿತು. ಹಿರಿಯ ಸೊಸೆಯನ್ನು ಹಾರವಾಗಿ ಕೊಟ್ಟರೆ ಹೇಗೆ? ಮನೆತನದ ಹಿರಿಯ ಸಂತತಿ ಮುಂದುವರಿಯುವದು ಬೇಡವೆ? ಬಲಿಯನ್ನಂತು ಕೊಡಲೇ ಬೇಕು ಇಲ್ಲವಾದರೆ ಕೈಹಿಡಿದ ಧರ್ಮಕಾರ್ಯ ಕೆಟ್ಟು ಹೋಗುತ್ತದೆ. ಎಂದು ಯೋಚಿಸಿ ತನ್ನ ಸನ್ಣ ಸೊಸಿಯಾದ ಭಾಗೀರತಿಯನ್ನು ಹಾರ ಕೊಡಲು ತಿರ್ಮಾನಿಸಿದರು. ಈ ವಿಷಯ ಅವಳ ಕಿವಿಗೆ ಬಿದ್ದೆ ಹೋಯಿತು. ಆದರೆ ಅವಳ ಜೊತೆ ಹಿರಿಯರು ನೇರವಾಗಿ ಪ್ರಸ್ತಾಪಿಸಲಾರರು ಇವಳು ಅವರಿಗೆ ಎದುರು ನಿಂತು ಪ್ರಶ್ನೆ ಕೇಳಲಾರಳು. ಹಾಗೆ ಕೇಳಿದರೆ ಅದು ಹಿರಿಯರ ಸಂಪ್ರದಾಯಕ್ಕೆ ವಿರೋಧ ಎಂದು ತಿಳಿದು ಸಿದ್ದಳಾದಳು. ಆದರೆ ಒಮ್ಮೆ ತವರು ಮನೆಗ ಎಹೋಗಿ ಬರಬೇಕು ಎಂಬ ಆಸೆ ಅವಳಲ್ಲಿ ಮೂಡಿತು. ಅತ್ತೆ ಮಾವನಿಗೆ ಕೇಳಿದಳು ಅವರ ಕೈ ಕಟ್ಟಿಹೋಗಿದೆ ಸೊಸೆ ತವರಿಗೆ ಹೋಗಿ ಬರಲು ಒಪ್ಪಿಗೆ ಕೊಟ್ಟು ಸರ್ರನೆ ಹೋಗಿ ಭರ್ರನೆ ಬಾರವ್ವಾ ಎಂದು ಹೇಳಿ ಕಳುಹಿಸಿದರು.

ಭಾಗೀರತಿ ಮನೆ ಮುಂದೆ ಹೋಗುವದಕ್ಕೆ ಅವರಪ್ಪ ಬಂದು "ಎಂದಿಲ್ಲದ ಭಾಗೀರತಿ ಇಂದ್ಯಾಕ ಬಂದವ್ವ ಬಾಡಿದ ಮಾರ್‍ಯಾಕ ಕಣ್ಣಾಗ ನೀರ್‍ಯಾಕ?" ಎಂದು ಕೇಳಿದಾಗ ಆದರ ಎಭಾಗೀರತಿಗೆ ವಿಷಯ ಹೇಳಲು ಬಾಯಿ ಬರಲಿಲ್ಲ ನನ್ನ ಮಾವ ಅತ್ತೆ ನನ್ನನ್ನು ಬೇರೆ ಇಡುತ್ತಾರಂತೆ ಎಂದು ಉತ್ತರಿಸಿದಳು ಅದಕ್ಕೆ ತಂದೆ "ಇಟ್ಟರೆ ಇಡಲೇಳು ಹೋಲಮನಿ ಕೊಡತೇನು" ಎಂದು ದಿಟ್ಟತನದಿಂದ ಉತ್ತರಿಸಿದನು. ತಾಯಿಗೆ ಬೇಟಿಯಾದಾಗ ತಾಯಿಗೂ ಅದೇ ಹಾಗೆಯೇ ಹೇಳಿದಳು ಅದಕ್ಕೆ ತಾಯಿ ಓಲೆಯ ಜೋಡನ್ನು ಕೊಡುತ್ತೇನೆ ಎಂದು ಸಮಾಧಾನ ಹೇಳಿದಳು. ಹಾಗೆಯೇ ಅವಳ ಅಕ್ಕನು ನಿನ್ನ ರಕ್ಷಣೆಗೆ ಮಕ್ಕಳನ್ನು ಕಳುಹಿಸುತ್ತೇನೆ ಎಂದು ಆಶ್ವಾಸನೆ ಕೊಟ್ಟಳು.

ಮನೆಯವರ ಎಲ್ಲರ ಮಾತಿಗೂ ಸಮಾಧಾನವಾಗದ ಭಾಗೀರತಿಯು ತನ್ನ ಗೆಳತಿಯ ಮನೆಗೆ ಹೋದಳು ಧೈರ್ಯವಾಗಿ ಅವಳ ಮುಂದೆ ವಿಷಯ ಹೇಳಿದಾಗ ಗೆಳತಿ "ಹಾರ ಕೊಟ್ಟರೆ ಕೊಡಲೇಳು ಇಟ್ಟಾಂಗ ಇರಬೇಕು" ಎಂಬುವದೆ ಅವಳ ನಿರ್ಧಾರವಾದ ಬುದ್ದಿವಾದ. ಇದನ್ನು ಕೇಳಿದ ಭಾಗೀರಥಿ ಬಲಿದಾನಕ್ಕಾಗಿ ಎದೆಯನ್ನು ಗಟ್ಟಿಮಾಡಿಕೊಂಡು ಅತ್ತೆಯ ಮನೆಗೆ ಹಿಂತಿರುಗಿದಳು.

ಆ ದಿನ ಮನೆಯಲ್ಲಿ ದೊಡ್ಡ ಹಬ್ಬದ ಅಡುಗೆ ಜಳಕ್ಕಾಗಿ ಹತ್ತು ಕೊಪ್ಪರಿಗೆ ನೀರು ಬೀಸಿಯಾಗುತ್ತಿತ್ತು. ಅತ್ತೆ ನಿಂಗವ್ವ ನೀಲವ್ವ ಮೊದಲಾದ ದೊಡ್ಡ ಸೊಸೆಯರೆನ್ನೆಲ್ಲಾ ಕ್ರಮವಾಗಿ ಕರೆಗಳು ಈ ವಷಿಯ ತಿಳಿದ ಎಲ್ಲ ಹಿರಿಯ ಸೊಸೆಯಂದಿರು ನಾವೊಲ್ಲೆ, ನಾವೊಲ್ಲೆ ಎಂದು ಹಿಂಜರಿದರು. ಆದರೆ ಸಣ್ಣ ಸೊಸೆಗೆ ನೀನ್ಹಾದ್ರು ಜಳಕ ಮಾಡು ಎಂದಾಗ ಭಾಗೀರಥಿ ಜಳಕ ಮಾಡಿ ಸಿಂಗರಿಸಿಕೊಂಡು ಬಂಗಾರದ ಬುಟ್ಟಿ ತೆಲೆಯ ಮೇಲೆ ಇಟ್ಟುಕೊಂಡು ಭಾಗೀರಥಿ ಮುಂದ ಮುಂದ ಹೊರಟಾಳು ಹಿಂದ್ದಿಂದ ಎಲ್ಲರು ಇದ್ದರು.

ಕೆರೆಯಲ್ಲಿ ಎಲ್ಲರು ಸೇರಿ ಪೂಜೆ ಮಾಡಿ ನೈವೇದ್ಯವಾಯಿತು. ಊಟವಾಯಿತು. ಎಲ್ಲವೂ ಮುಗಿದ ನಂತರ ಎಲ್ಲರು ಪಾತ್ರೆ ಪದಾರ್ಥಗಳನ್ನು ಕಟ್ಟಿಕೊಂಡು ಹಿಂದಕ್ಕೆ (ಮನೆ ಕಡೆಗೆ) ಹೋರಟು ಸ್ವಲ್ಪ ದೂರ ಹೋದ ಮೇಲೆ ಉದ್ದೇಶ ಪೂರ್ವಕವಾಗಿ ಬಂಗಾರದ ಬುಟ್ಟಿಯನ್ನು ಕೆರೆಯಲ್ಲೆ ಮರೆತುಬಿಟ್ಟರು. "ಗಂಗವ್ವ ನೀ ಹೋಗ, ಗೌರವ್ವ ನೀ ಹೋಗ ಮುಂತಾಗಿ ಒಬ್ಬೊಬ್ಬ ಸೊಸೆಗೂ ಬುಟ್ಟಿಯನ್ನು ತರಲು ಹೇಳಿದಳು. ಆದರೆ ಎಲ್ಲರೂ ಒಂದೊಂದು ನೆಪವನ್ನು ಹೇಳಿ ಹೋಗಲು ನಿರಾಕರಿಸಿದರು. ಆಗ ಸಣ್ಣ ಸೊಸಿ ಭಾಗೀರಥಿ ನೀ ಹೋಗವ್ವ ಎಂದಾಗ ಭಾಗೀರಥಿ ಹೋಗಿ ಬಂಗಾರದ ಬಟ್ಟಿಲು ತೆಗೆದುಕೊಂಡು ಒಂದು ಮೆಟ್ಟಿಲು ಹತ್ತುವದಕ್ಕೆ ಗಂಗೆಯು ಉಕ್ಕಿ ಅವಳ ಪಾದಕ್ಕೆ ಬಂದಳು. ಅವಳು ಎರಡನೇ ಮೆಟ್ಟಿಲು ಹತ್ತಿದಾಗ ಅವಳ ಪಾದಗಳು ನೀರಿನಲ್ಲಿ ಮುಳುಗಿದವು. ಮೂರನೇ ಮೆಟ್ಟಲು ಹತ್ತಿದಾಗ ನೀರು ಅವಳ ಮೊಣಕಾಲಿಗೆ ಬಂದಿತು, ನಾಲ್ಕನೇ ಮೆಟ್ಟಿಲಕ್ಕೆ ನಡುಮಟ ಬಂದಾಳು ಗಂಗೆ, ಐದನೇ ಮೆಟ್ಟಿಲಕ್ಕೆ ಕೆರೆಯು ತುಂಬಿ ಹರಿದು ಸಣ್ಣ ಸೊಸಿ ಭಾಗೀರಥಿಯು ಕೆರೆಗ್ಹಾರವಾದಳು. ಈ ರೀತಿಯ ಕಥೆಯ ಆಧಾರೀತ ಆಚರಣೆಗಳು ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಕಂಡುಬಂದಿರುತ್ತವೆ.[೧೦]

ಅಡಿಟಿಪ್ಪಣಿಗಳು :

೧. ಸಿ.ಎಸ್. ವಾಸುದೇವನ್, ಹಂಪಿ ಪರಿಸರದ ಕೆರೆಗಳು ಪುಟ–೮೭.

೨. ಕೊಟ್ರಯ್ಯ ಸಿ.ಟಿ.ಎಂ. (ಆಂಗ್ಲಮೂಲ), ಧ್ರುವನಾರಾಯಣ (ಕನ್ನಡ ಅನುವಾದ), ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ, ಪುಟ–೧೩೬.

೩. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ–೪೪೯.

೪. ಕೊಟ್ರಯ್ಯ ಸಿ.ಟಿ.ಎಂ., ಪೂರ್ವೋಕ್ತ, ಪುಟ–೧೩೮.

೫. ಎಂ.ಎಂ. ಕಲಬುರ್ಗಿ, ಧಾರವಾಡ ತಾಲೂಕಿನ ಶಾಸನಗಳು, ಪು–೧೨೪.

೬. ಕೆ. ಅನಂತರಾಮ್, ಅಜಾತನಾಗಲಿಂಗಸ್ವಾಮಿ, ಪುಟ–೧೬೦.

೭. ಕ್ಷೇತ್ರ ಕಾರ್ಯದ ವರದಿ

೮. ಕ್ಷೇತ್ರ ಕಾರ್ಯದ ವರದಿ

೯. ಕ್ಷೇತ್ರ ಕಾರ್ಯದ ವರದಿ

೧೦. ರವಿಕುಮಾರ ನ. ಆಯ್ದ ವಿಮರ್ಶೆ, ಪುಟ–೩೨.

ಅಧ್ಯಾಯ – ಐದು

ಸಮಾರೋಪ

ಅಧ್ಯಾಯ-ಐದು

ಸಮಾರೋಪ

ಭೂಮಿಯ ಮೇಲಿನ ಕೋಟ್ಯಂತರ ಜೀವರಾಶಿಗಳಿಗೆ ನೀರು ಪ್ರಮುಖ ಜೀವಾಧಾರ. ಇಂತಹ ವಸ್ತು ದೈನಂದಿನ ಚಟುವಟಿಕೆಗಳಲ್ಲಿ ಅತಿ ಮುಖ್ಯ. ಮಾನವನು ತನ್ನ ಜೀವನದ ಪ್ರಾರಂಭದ ದಿನಗಳಿಂದಲೂ ನೀರಿನೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದಾನೆ. ಅಂದಿನಿಂದ ಇಂದಿನವರೆಗೂ ಮಾನವನ ಎಲ್ಲಾ ಚಟುವಟಿಕೆಗಳು ನೀರಿನ ಸಮೀಪವೇ ಕೇಂದ್ರಿಕೃತವಾಗಿರುವುದನ್ನು ನಾವು ಕಾಣಬಹುದು. ಪ್ರಾಗತಿಹಾಸಿಕ ಕಾಲದಿಂದಲೂ ಮಾನವನು ತನ್ನ ಜೀವನವನ್ನು ನದಿ, ಹಳ್ಳ, ಕೊಳ್ಳಗಳ ಸಮೀಪದಲ್ಲಿಯೇ ಆರಂಭಿಸಿರುವುದು ಅನೇಕ ಸಂಶೋಧನಗಳಿಂದ ದೃಢಪಟ್ಟಿದೆ. ಮಾನವನು ಒಂದು ಕಡೆ ನೆಲಸಿ ಕೃಷಿಯ ಜೊತೆಗೆ ನಾಗರಿಕತೆಯನ್ನು ಆರಂಭಿಸಿದ್ದು ನೀರಿನ ಆಶ್ರಯದಲ್ಲಿಯೇ ಎಂಬುವದನ್ನು ಇಲ್ಲಿ ಗಮನಿಸಬಹುದು. ನಾಗರಿಕತೆ ಪ್ರಾರಂಭಿಸಿದ ದಿನಗಳಿಂದ ಮಾನವನ ಜೀವನದಲ್ಲಿ ಒಂದು ಕ್ರಮಬದ್ದತೆ ಬಂದಿದೆ. ವ್ಯವಸಾಯಕ್ಕೆ ನೀರು ಬೇಕಾಗಿದ್ದರಿಂದ ನೀರಿಗೆ ಮಾನವನು ಮಳೆ ಮತ್ತು ನದಿಯನ್ನು ಆಶ್ರಯಿಸಿದ್ದನೆಂಬುವದು ತಿಳಿದುಬಂದಿದೆ. ಮಳೆಯ ವೈಷಮ್ಯತೆಯು ಮಾನವನಿಗೆ ಕೃತಕ ಜಲ ಸಂಗ್ರಾಹಕಗಳನ್ನು ರಚಿಸಲು ಪ್ರಚೋಧಿಸಿದವು. ಅಂತಹ ಕೃತಕ ಸಂಗ್ರಾಹಕಗಳಾಗಿ ಕೆರೆ, ಕಟ್ಟೆ ಮತ್ತು ಭಾವಿಗಳಾಗಿ ನಿರ್ಮಿಸಿಕೊಂಡಿರುವದನ್ನು ಗಮನಿಸಬಹುದು. ಇದರಿಂದ ನೀರನ್ನು ತನ್ನ ಹತೋಟಿಯಲ್ಲಿಟ್ಟುಕೊಂಡು ಬೇಕೆಂದಾಗ ಬೇಸಾಯ ಮಾಡಿ ಫಲವನ್ನು ತೆಗೆಯಲು ಪ್ರಾರಂಭಿಸಿದ. ಮಾನವನ ಮೊಟ್ಟ ಮೊದಲ ಪ್ರಯತ್ನವು ನಿಸರ್ಗವು ನಿರ್ಮಿಸಿದಂತಹ ಅನೇಕಾನೇಕ ಸ್ವಾಭಾವಿಕ ಕೆರೆಗಳು ಸಮೀಪದಲ್ಲಿಯೇ ಇರುವುದು ಗಮನಿಸತಕ್ಕ ವಿಷಯ. ಸಣ್ಣ ಕಟ್ಟೆಗಳನ್ನು ಅಂತಹ ಜಾಗದಲ್ಲಿ ನಿರ್ಮಿಸಿ ಮಳೆಯ ಅಥವಾ ನದಿಯ ನೀರನ್ನು ಸಂಗ್ರಹಿಸತೊಡಗಿದೆ. ಇವುಗಳ ಜೊತೆಯಲ್ಲಿ ಮಾನವನು ತನ್ನ ಸಂತತಿಯು ಬೆಳೆಯತೊಡಗಿದ. ಬೆಳೆಯುತ್ತಿರುವ ಜನಸಂಖ್ಯೆಯ ಅನುಗುಣವಾಗಿ ಕೃಷಿ ಉತ್ಪನ್ನಗಳನ್ನು ಬೆಳೆಯಲು ಆರಂಭಿಸತೊಡಗಿದ. ಆದುದರಿಂದ ಕೃತಕ ಜಲಸಂಗ್ರಾಹಕಗಳ ಅವಶ್ಯಕತೆಯು ಇದ್ದಿತು. ಆದಿ ಶಿಲಾಯುಗ ಕಾಲಕ್ಕಿಂತಲೂ ನವಶಿಲಾಯುಗ ಹಾಗೂ ಚಾರಿತ್ರಿಕ ಯುಗದಲ್ಲಿ ಜನಸಂಖ್ಯೆಯು ಹೆಚ್ಚಾಗಿ ಆಗಿರುವುದನ್ನು ಗಮನಿಸಬಹುದಾಗಿದೆ.

ಭಾರತವು ಉಳಿದ ರಾಷ್ಟ್ರಗಳಂತೆ ಹೆಚ್ಚಿನ ಪ್ರಾಚೀನತೆಯನ್ನು ಹೊಂದಿರುವ ದೇಶವಾಗಿದೆ. ಭಾರತದಲ್ಲಿ ಇಲ್ಲಿಯವರೆಗೆ ದೊರಕಿರುವ ಪ್ರಾಚೀನ ನೆಲೆಗಳೆಲ್ಲವೂ ನದಿ ಅಥವಾ ನೀರಿನ ಸೌಲಭ್ಯವಿರುವ ಪ್ರದೇಶದಲ್ಲಿಯೇ ದೊರೆತಿದೆ. ಈ ವಾದವನ್ನು ಈಗಾಗಲೇ ದೊರೆತಿರುವ ಅನೇಕ ಬಗೆಯ ಶಿಲಾಯುಗಗಳು ಸಮರ್ಥಿಸಿವೆ. ಆದಿ ಇತಿಹಾಸ ಕಾಲದ ಪ್ರಾಚೀನ ನೆಲೆಗಳಾದ ಬೇಸನಗರ, ಮಥುರಾ ಮತ್ತು ನಾಗಾರ್ಜುನಕೊಂಡ ಮುಂತಾದ ನೆಲೆಗಳು ನದಿಯ ಪಕ್ಕದಲ್ಲಿಯೇ ಬೆಳೆದು ಬಂದಿರುವುದು ತಿಳಿದ ಸಂಗತಿ.

ಪುರಾತನ ಕಾಲದಿಂದಲೂ ಭಾರತದ ಕೃಷಿಯಲ್ಲಿ ನೀರಾವರಿ ಬಳಕೆಯು ಕಂಡುಬಂದಿದೆ. ಕೆರೆ, ಕಟ್ಟೆ, ಭಾವಿ ಮತ್ತು ಕಾಲುವೆ ನೀರಾವರಿಗಳು ಬಹು ಹಿಂದಿನಿಂದಲೂ ನೀರಾವರಿ ಮೂಲಗಳಾಗಿವೆ. ವೇದಗಳಾದ ಋಗ್ವೇದ ಮತ್ತು ಅಥರ್ವ ವೇದಗಳು ಕೆರೆ ನೀರಾವರಿ ಪದ್ಧತಿಯನ್ನು ಕುರಿತು ಉಲ್ಲೇಖಿಸುತ್ತವೆ. ಈ ದೇಶದ ಸಾಹಿತ್ಯ ಕೃತಿಗಳಾದ ರಾಮಾಯಣ, ಮಹಾಭಾರತ, ಕೌಟಿಲ್ಯನ ಅರ್ಥಶಾಸ್ತ್ರ, ಪದ್ಮಪುರಾಣ, ಜಾತಕ ಕಥೆಗಳು, ಶುಕ್ರನ ನೀತಿಸಾರ, ಮತ್ತು ತಮಿಳು ಸಂಗಮ ಸಾಹಿತ್ಯ ಆಧಾರಗಳು ಸಹ ಕೆರೆ ನೀರುವರಿಯ ಬಗ್ಗೆ ಅನೇಕ ಮಾಹಿತಿಯನ್ನು ತಿಳಿಸುತ್ತವೆ. ಹಾಗೆಯೇ ಕೃಷ್ಣದೇವರಾಯನ ಅಮುಕ್ತ ಮೌಲ್ಯದ ಕೃತಿಯಲ್ಲಿ ಕೆರೆ ಕಾಲುವೆಗಳ ಬಗ್ಗೆ ಉಲ್ಲೇಖವಾಗಿರುವುದು ಕಂಡುಬಂದಿದೆ.

ಆದಿ ಇತಿಹಾಸ ಕಾಲದಿಂದ ಶಾಸನಗಳು ನಮಗೆ ಹೆಚ್ಚಾಗಿ ದೊರೆಯುತ್ತವೆ. ಈ ಶಾಸನಗಳು ಸಹ ಕೃಷಿ, ಕೆರೆ, ನೀರಾವರಿ ಪದ್ಧತಿಗಳನ್ನು ಕುರಿತು ಅನೇಕ ಮಾಹಿತಿಗಳನನು ನೀಡುವುದು ಗಮನಾರ್ಹ. ಕ್ರಿ.ಪೂ. ೪ ನೇ ಶತಮಾನದಲ್ಲಿ ಚಂದ್ರಗುಪ್ತನ ಮೌರ್ಯನ ಕಾಲದಿಂದಲೂ ಸಹ ಕೆರೆಗಳ ನಿರ್ಮಾಣ ಕಾರ್ಯವು ಇತ್ತೆಂದು ಶಾಸನಗಳ ಆಧಾರದಿಂದ ತಿಳಿದುಬರುತ್ತದೆ. ಕ್ರಿಸ್ತಪೂರ್ವದಲ್ಲಿ ಪ್ರಾರಂಭವಾದ ಈ ಪ್ರಕ್ರಿಯೆಯು ಅವ್ಯಾಹತವಾಗಿ ಸಾಗುತ್ತಲೇ ಬಂದಿದೆ. ಈ ಪ್ರಕ್ರಿಯೆಯನ್ನು ಅನೇಕ ಅರಸು ಮನೆತನದವರು ಮುಂದೆವರೆಸಿಕೊಮಡು ಬಂದಿವೆ. ಈ ಕೆರೆಗಳನ್ನು ಕಟ್ಟುವದಕ್ಕೆ ಕಾರಣವು ಜನರಲ್ಲಿ ಬೆಳೆದ ಹಾಗೂ ಬೆಳೆಯುತ್ತಿರುವ ದಾರ್ಮಿಕ, ಸಾಮಾಜಿಕ ನಂಬಿಕೆಗಳು ಕಾರಣ ಎಂಬುವದನ್ನು ಕೆಲವರು ಅಭಿಪ್ರಾಯಿಸಿದ್ದಾರೆ.

ನವಲಗುಂದ ತಾಲೂಕಿನಲ್ಲಿ ನೂರಕ್ಕೂ ಹೆಚ್ಚಿನ ಕೆರೆಗಳಿದ್ದು ಅವುಗಳ ಸಮಗ್ರ ಅಧ್ಯಯನ ಆಗಬೇಕಾಗಿದೆ. ಈ ಉದ್ದೇಶದಿಂದ ಪ್ರಸ್ತುತ ಸಂಪ್ರಬಂಧದಲ್ಲಿ ಕೆರೆಗಳ ಉಗಮದಿಂದ ಹಿಡಿದು ವಿವಿಧ ಕಾಲದಲ್ಲಿ ರಚನೆಯಾದ ಅವುಗಳ ಹಿಂದಿನ ಸ್ಥಿತಿಗತಿಗಳು ಕೆರೆ ನೀರಾವರಿ ಆಧಾರಿತವಾಗಿ ಅಲ್ಲಿಯ ಜನ-ಜೀವನ ಮತ್ತು ಕೆರೆಗಳಿಗೆ ಸಂಬಂಧಿಸಿದ ನಂಬಿಕೆ ಆಚರಣೆಗಳನ್ನು ತಿಳಿಯುವ ಪ್ರಯತ್ನ.

ಈ ಅಧ್ಯಯನದಲ್ಲಿ ತಾಲೂಕಿನಲ್ಲಿರುವ ಕೆರೆಗಳನ್ನು ಹಾಗೂ ಕೆರೆಯನ್ನು ಅವಲಂಬಿಸಿರುವ ಹಳ್ಳಿಗಳು ಕೆರೆಯ ಒಡ್ಡುಗಳ ಮೇಲೆ ಮೂರ್ತಿ, ಶಿಲ್ಪ, ದೇವಾಲಯಗಳು ಮತ್ತು ಆ ಕೆರೆಯನ್ನು ಪ್ರಾರಂಭಿಸಲು ಕಾರಣಗಳು, ನಿರ್ಮಿಸಿದವರು ಅದಕ್ಕೆ ಭೂಧಾನವನ್ನು ನೀಡಿದವರು ಮುಂತಾದ ವಿಷಯಗಳನ್ನು ಸ್ಥಳೀಯರಿಂದ ಪಡೆದುಕೊಳ್ಳಲಾಗಿದೆ.

ಇತ್ತೀಚಿನ ಕೆರೆಗಳ ಪಟ್ಟಿ ಮತ್ತು ಅವುಗಳ ನಿರ್ವಹಣೆಯನ್ನು ಅಲ್ಲಿಯ ಸರ್ಕಾರಿ ಅಧಿಕಾರಿಗಳು ಮತ್ತು ತಾಲೂಕು ಪಂಚಾಯಿತಿಯಿಂದ ಪಡೆದುಕೊಳ್ಳಲಾಗಿದೆ. ಮತ್ತು ಇಲ್ಲಿನ ಬೌಗೋಳಿಕ ಲಕ್ಷಣಗಳನ್ನು ಗಮನಿಸಿಕೊಂಡು ಕೆರೆಗಳ ಅಧ್ಯಯನ ಕೈಗೊಳ್ಳಲಾಗಿದೆ. ಈ ಪರಿಸರದಲ್ಲಿ ಅನೇಕ ರಾಜಮನೆತನಗಳು ದೇಶಗತಿ ಮನೆತನಗಳು ಹಾಗೂ ದೇಸಾಯಿ ಮನೆತನದವರು ಆಳ್ವಿಕೆ ನಡೆಸಿವೆ. ಅವರ ಆಳ್ವಿಕೆಯ ಅವಧಿಯಲ್ಲಿ ಹಲವಾರು ಕೆರೆಗಳು ಕಂಡುಬಂದಿವೆ. ಅವುಗಳಲ್ಲಿ ಹೆಚ್ಚಿನ ಕೆರೆಗಳು ಕಲ್ಯಾಣಿ ಚಾಲುಕ್ಯರ ಮತ್ತು ದೇಸಾಯಿ ಮನೆತನದವರ ಅಲ್ಲದೆ ಈ ಪ್ರದೇಶದಲ್ಲಿನ ಶ್ರೀಮಂತ ವರ್ಗದವರು ನಿರ್ಮಾಣ ಮಾಡಿರುವುದು ಎಂಬ ಅಂಶವನ್ನು ತಿಳಿಯಲಾಗಿದೆ. ಕೆರೆಗಳನ್ನು ಅರಸರು ಮತ್ತು ದೇಸಾಯಿ ಮನೆತನದವರು ತಮ್ಮ ಗೌರವ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ಮತ್ತು ತಮ್ಮ ಮಡದಿಯರ ಹೆಸರಿನ ನೆನಪಿನಲ್ಲಿ ಅಲ್ಲದೆ ತಮ್ಮ ತಾಯಿಯರ ಹಾಗೂ ಯುದ್ಧದಲ್ಲಿ ಗತಿಸಿದವರ ಸ್ಮರಣಾರ್ಥಕವಾಗಿ ನಿರ್ಮಿಸುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಅಗ್ರಹಾರವನ್ನು ಸ್ಥಾಪಿಸಿ ಬ್ರಾಹ್ಮಣರಿಗೆ ದತ್ತಿ ನೀಡುವ ಮತ್ತು ದೇವಾಲಯಗಳನ್ನು ಕಟ್ಟಿಸಿ ಅದರ ಅಗತ್ಯತೆಗಳನ್ನು ಪೂರೈಸಲು ಸಾಂಸ್ಕೃತಿಕ ಸಂವರ್ಧನೆಯ ಸಂಬಂಧವಾಗಿ ಇಲ್ಲಿನ ಕೆರೆಗಳು ನಿರ್ಮಾಣವಾಗಿರುವದನ್ನು ಅನೇಕ ಆಧಾರಗಳಿಂದ ತಿಳಿಯಬಹುದು. ಹೀಗೆ ನಿರ್ಮಾಣವಾದ ಕೆರೆಗಳು, ಕೇವಲ ಬ್ರಾಹ್ಮಣ ಮತ್ತು ದೇಸಾಯಿ ಮನೆತನದವರಿಗೆ ಸೀಮಿತವಾಗಿರದೇ ಸಾರ್ವಜನಿಕವಾಗಿ ಉಪಯುಕ್ತವಾಗುತ್ತಿವೆ.

ನಮ್ಮ ಪೂರ್ವಜರು ಸಾವಿರಾರು ವರ್ಷಗಳಿಂದ ಬಳಸಿಕೊಂಡು ಬಂದಿರುವ ಕೆರೆಗಳನ್ನು ಸಂರಕ್ಷಿಸುವ ಜವಾಬ್ದಾರಿ ನಮ್ಮದಾಗಿದೆ. ಇಲ್ಲಿಯ ಕೆರೆಗಳನ್ನು ಸಂರಕ್ಷಿಸಿ ಅದರಲ್ಲಿರುವ ಹೂಳುಗಳನ್ನು ತೆಗೆದು ಹೆಚ್ಚಿನ ನೀರಿನ ಸಂಗ್ರಹಕ್ಕೆ ನೇರವಾಗಿ ಇದರಿಂದಾ ನೀರು ಕೃಷಿ ಚಟುವಟಿಕೆಗೆ, ಕುಡಿಯಲು, ಜಾನುವಾರ, ಕೈಗಾರಿಕೆಗಳಿಗೆ ಈ ಕೆರೆಗಳು ನೆರವಾಗುವದರಿಂದಾ ಮಹತ್ವವನ್ನು ಹೊಂದಿದೆ. ಈ ಕೆರೆಗಳ ಅಧ್ಯಯನದಿಂದಾ ಪ್ರಾಚೀನ ಕಾಲದ ಕೃಷಿಯಲ್ಲಿಯ ನೀರಾವರಿ ವ್ಯವಸ್ಥೆಯನ್ನು ತಿಳಿಯಬಹುದು. ಅಲ್ಲದೇ ಕೆರೆ ನಿರ್ಮಾಣ, ಜೀರ್ಣೋದ್ಧಾರ ಮುಂತಾದವುಗಳನ್ನು ಚರ್ಚಿಸಲಾಗಿದೆ. ಹೀಗೆ ಕಾಲಾಂತರ ಬದಲಾದ ರಾಜಕೀಯ ಹಿನ್ನೆಲೆಯಲ್ಲಿ

ಹಾಗೂ ಭೀಕರ ಕ್ಷಾಮ ಬರಗಾಲದ ಪರಿಸ್ಥಿತಿಯಲ್ಲಿ ಕೆರೆ ನೀರಾವರಿ ಕುರಿತಂತೆ ವ್ಯಾಪಕ ಚರ್ಚೆಗಳು ನಡೆದವು. ಈ ಸಂದರ್ಭದಲ್ಲಿ ಪರಂಪರಾನುಗತವಾಗಿ ಸ್ಥಳೀಯರು ನಿರ್ಮಿಸಿದ ನಿರ್ವಹಿಸಿಕೊಂಡು ಬರುತ್ತಿದ್ದ ಕೆರೆ ವ್ಯವಸ್ಥೆ ಕುಸಿದು ಬಿದ್ದಿದ್ದು ಸ್ಪಷ್ಟವಾಗಿ ಬೆಳಕಿಗೆ ಬಂದಿತು. ಆದ್ದರಿಂದ ಕೆರೆಗಳ ದುರಸ್ತಿ ಹಾಗೂ ಕೆರೆ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಅನಿವಾರ್ಯತೆಯನ್ನು ಅರಿತ ಸರ್ಕಾರ ಹಲವು ಪ್ರಯೋಜನಗಳ ಬಗ್ಗೆ ಅಲೋಚಿಸಿ, ಸುದೀರ್ಘ ಚರ್ಚೆಗಳು, ಚಿಂತನಗಳ ಫಲವಾಗಿ ಹಲವು ಕೆರೆಯ ಬಾರಿ ನೀರಾವರಿ ಉದ್ದೇಶವನ್ನಿಟ್ಟುಕೊಂಡು ಸರ್ಕಾರ ದೊಡ್ಡ ಕೆರೆಗಳ ಮತ್ತು ಸಣ್ಣ ಕೆರೆಗಳ ಸಂರಕ್ಷಣೆಯ ಮಹತ್ವ ನೀಡಿ ಅವುಗಳ ಪುನಶ್ಚೇತನಕ್ಕೆ ಮಹತ್ವ ನೀಡಿ ಅಗತ್ಯವಾದ ನಿಯಮಗಳನ್ನು ಜಾರಿಗೆ ತಂದದು ಕೆರೆಗಳ ಮಹತ್ವ ಹೆಚ್ಚಿಸಿದ್ದು.

ನವಲಗುಂದ ತಾಲೂಕಿನ ಕೆರೆಗಳು ಸಾಕಾಷ್ಟು ಪ್ರಾಚೀನಗಳಾಗಿದ್ದರು ಸಹ ಅವುಗಳಲ್ಲಿ ಕೆಲವು ಇಂದಿಗೂ ಸುಸ್ಥಿತಿಯಲ್ಲಿವೆ. ಇಲ್ಲಿ ಕಾಲುವೆಗಳು ಮತ್ತು ಕೊಳವೆ ಬಾವಿಗಳು ನೀರಾವರಿ ಮೂಲದ್ದಾದರೂ ಇಂದಿಗೂ ಪ್ರಾಚೀನ ಕೆರೆಗಳು ತಮ್ಮದೆಯಾದ ಮಹತ್ವವನ್ನು ಉಳಿಸಿಕೊಂಡು ಬಂದಿರುವುದರಿಂದ ಕೆರೆಗಳನ್ನು ಕಟ್ಟಲು ಈ ಪ್ರದೇಶ ತುಂಬಾ ಅನುಕೂಲಕರವಾಗಿದೆ.

ಕೆರೆಗಳ ಮತ್ತೊಂದು ಮಹತ್ವವೆಂದರೆ ಬರಗಾಲದಲ್ಲಿ ಜಲಮಟ್ಟವನ್ನು ಉಳಿಸುವಿಕೆ ಭೂಮಿಯ ಒಳಗೆ ನೀರಿನ ಮಟ್ಟವನ್ನು ಏರಿಸುವುದಾಗಿದೆ. ಪ್ರಸ್ತುತ ದಿನಗಳಲ್ಲಿವು ಅಂತರಜಲ ಮಟ್ಟ ಹೆಚ್ಚಾಗಿದ್ದು, ಬಾವಿ ಮತ್ತು ಕೊಳವೆ ಬಾವಿಗಳ ಅಂತರಜಲ ಮಟ್ಟ ಏರಿರುವುದು ಪ್ರಸ್ತುತ ಅಧ್ಯಯನ ಅಲ್ಲದೆ ಅಂತರಜಲ ಮಟ್ಟವನ್ನು ಕುರಿತು ೧೯೦೧ರ ನೀರಾವರಿ ಆಯೋಗ ಈ ರೀತಿಯಾದ ಹೇಳಿಕೆಗಳಲ್ಲಿ ವರ್ಣಿಸಿದೆ " ಸಂರಕ್ಷಿಸುವ ಕಾಮಗಾರಿಗಳಾಗಿ ಅವುಗಳ ಮಹತ್ವ ಪ್ರಶ್ನಾತೀತ, ಮಳೆ ಬಾರದ ವರ್ಷದಲ್ಲಿ ಅನೇಕ ಕೆರೆಗಳನ್ನು ಸಂರಕ್ಷಿಸುವಲ್ಲಿ ವಿಫಲವಾಗಬಹುದು. ಆದರೆ ಸಾಧಾರಣ ದಿನಮಾನಗಳಲ್ಲಿ ಅವು ಮಾಡುವ ಒಳ್ಳೆಯ ಕೆಲಸ. ರೈತರು ಕೆಟ್ಟ ವರ್ಷವನ್ನು ದಾಟಲು ವಸ್ತುವಿನ ಸಹಾಯ ಅತ್ಯಂತ ಒಣ ವರ್ಷದಲ್ಲೂ ಅವು ಅಂತರ್ಜಲದ ಮಟ್ಟ ಬಳಿಸಲು ನೆರವಾಗುತ್ತದೆ. ಮುಕ್ಕಾಲು ಭಾಗ ಬಾವಿಗಳು, ಕೊಳವೆ ಬಾವಿಗಳು ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿ ಎಲ್ಲಾ ಕೆರೆಗಳನ್ನು ಅವಲಂಬಿಸಿವೆ" ಎಂಬುವುದ ವರ್ಣಿಸಲಾಗಿದೆ.

ಕೆರೆಗಳ ಇನ್ನೊಂದು ಮಹತ್ವ ಎಂದರೆ ಮೀನುಗಾರಿಕೆಗೆ ಸಹಾಯಕವಾಗಿರುವುದು ತಾಲೂಕಿನ ಹಲವಾರು ಕೆರೆಗಳಲ್ಲಿ ಜಲಂತರ ಕೃಷಿಯನ್ನು ಯಶಸ್ವಿಯಾಗಿ ನಡೆಸುತ್ತಿದ್ದು ಕೆರೆಗಳನ್ನು ಸುಸ್ಥಿತಿಯಲ್ಲಿ ಇಡಲು ಸಾಧ್ಯವಾಗುತ್ತಿದೆ ಹೇಗೆ ಕೆರೆಗಳ ಮೂಲಕ ಮೀನುಗಾರಿಕೆ ನಡೆಸುವುದರಿಂದ ನಿರುದ್ಯೋಗ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗೆ ನಿವಾರಿಸಬಹುದಾಗಿದೆ.

ಕೆರೆಗೆ ಸಂಬಂಧಿಸಿದ ನಂಬಿಕೆ ಮತ್ತು ಧಾರ್ಮಿಕ ಆಚರಣೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ನೀರಾವರಿ ಇಲಾಖೆಯ ಕೆರೆಗಳಲ್ಲದೆ ಕೆಲವು ಕೆರೆಗಳ ನಿರ್ವಹಣೆಯನ್ನು ನೀರ್ಗಂಟಿಗಳು ನೋಡಿಕೊಳ್ಳುತ್ತಿದ್ದರು. ಇವರು ಕೆರೆಗಳು ತುಂಬಿದಾಗ ಬಾಗಿನ ಅರ್ಪಣೆ ಮಾಡುತ್ತಾರೆ ಮತ್ತು ಕೆರೆಯ ಸುತ್ತಮುತ್ತಲಿನ ಗ್ರಾಮದ ಜನರು ಕೆಲವು ಕೆರೆಗಳಲ್ಲಿ ಗಂಗವ್ವನ ಪೂಜೆಯನ್ನು ವಿಶೇಷವಾಗಿ ಆಚರಿಸುತ್ತಿದ್ದರು. ಗಣೇಶ ಚತುರ್ಥಿ ಆದ ನಂತರ ಗಣೇಶನನ್ನು ಕೆರೆಗಳಲ್ಲಿ ವಿಸರ್ಜನೆ ಮಾಡುವ ಪದ್ಧತಿಗಳು ಈ ಅಧ್ಯಯನದಲ್ಲಿದೆ. ಕೆರೆಯ ಪರಿಸರದಲ್ಲಿ ದೇವಾಲಯಗಳ ಪುಷ್ಕರಣಿಗಳು ಇದ್ದವು. ಈ ಪುಷ್ಕರಣೀಯವನು ದೇವಾಲಯಗಲ ಧಾರ್ಮಿಕ ಪೂಜೆಗೆ ಬಳಸಿರುವುದು ಕಂಡು ಬಂದಿದೆ. ತಾಲೂಕಿನ ಪ್ರಾಚೀನ ಕೆರೆಯಾದ ಮೊರಬ ಕೆರೆಯ ಸುತ್ತಮುತ್ತಲಿನ ಗ್ರಾಮದ ಗ್ರಾಮ ದೇವತೆಗಳು ಶಿವರಾತ್ರಿಯಿಂದ ಹಿಡಿದು ಯುಗಾದಿಯವರಗೆ ಬರುತ್ತಿದ್ದರು.

ಕೆಲವು ಸಂದರ್ಭದಲ್ಲಿ ಶ್ರಾವಣ ಮತ್ತು ಕಾರ್ತಿಕ ಮಾಸದಲ್ಲಿ ಆಗಮಿಸುತ್ತಿರುವದು ಕಂಡು ಬಂದಿದೆ. ಇಲ್ಲಿನ ವಿಶೇಷ ಅಂಶವೆಂದರೆ ನದಿಗಳಿರುವ ಪವಿತ್ರ ಭಾವನೆಯನ್ನು ಈ ಪರಿಸರದ ಜನರು ಕೆರೆಗಳಿಗೆ ಕೊಟ್ಟಿರುವುದನ್ನು ಈ ಅಧ್ಯಯನದಿಂದ ತಿಳಿಯಲಾಗಿದೆ.

ತಾಲೂಕಿನಲ್ಲಿರುವ ಕೆಲವು ಕೆರಗಳು ಮಳೆ ಆಶ್ರಿತ ಕೆರೆಗಳಾಗಿದ್ದು, ರಕ್ಷಣೆ ಇಲ್ಲದೆ ನಾಶವಾಗುವ ಅಂಚಿನಲ್ಲಿವೆ. ಇಂತಹ ಕೆರೆಗಳತ್ತ ಕೆರೆಗೆ ಸಂಬಂಧಿಸಿದ ಇಲಾಖೆ ಮತ್ತು ತಾಲೂಕಿನ ಗ್ರಾಮ ಪಂಚಾಯತಿಗಳು ಗಮನಹರಿಸಬೇಕು. ಕೆರೆಗಳನ್ನು ಹೂಳೆತ್ತಿಸಿ ಜೀರ್ಣೋದ್ದಾರ ಮಾಡಿದರೆ ಮುಂದಿನ ಪೀಳಿಗೆಗೆ ಅಸ್ತಿತ್ವವನ್ನು ಬಳಸಬಹುದು ಎಂಬ ಪ್ರಯತ್ನವು ಈ ಅಧ್ಯಯನದಿಂದ ತಿಳಿದುಬರುತ್ತದೆ.

ಹಾಗೆಯೇ ಕೆರೆಗಳು, ಭಾವಿಗಳು, ಆಣೆಕಟ್ಟುಗಳು ಮುಂತಾದ ನೀರಾವರಿ ರಚನೆಗಳು ನಮ್ಮ ಪೂರ್ವಜರು ಸಾಮಾಜಿಕ, ಧಾರ್ಮಿಕ ರಚನೆಗಳು ನಮ್ಮ ಪೂರ್ವಜರು ನಿರ್ಮಿಸಿದ್ದು, ಅವುಗಳ ಪ್ರಯೋಜನವನ್ನು ಅಂದಿನ ಜನರು ಪಡೆದಿರುವದು ನಿರ್ವಿವಾದ ಸಂಗತಿಯಾಗಿದ್ದು, ಅಂತಹ ಹಲವಾರು ರಚನೆಗಳು ಇಂದಿಗೂ ಬಳಕೆಯಲ್ಲಿದೆ. ನಮ್ಮ ಪೂರ್ವಜರು ನಿಸರ್ಗವನ್ನು ಅಭ್ಯಸಿಸಿ ಅದಕ್ಕನುಗುಣವಾಗಿ ನೀರಾವರಿ ರಚನೆಗಳನ್ನು ಮಾಡುತ್ತಿದ್ದರು. ಆದರೆ ಇಂದು ಅವರ ತಂತ್ರಜ್ಞಾನವನ್ನು ನಾವು ಅರಿಯದೇ ಹೊಸದಾದ ತಂತ್ರಜ್ಞಾನಕ್ಕೆ ಮೊರೆ ಹೊಕ್ಕು ಪಾರಂಪರಿಕವಾಗಿ ಬಂದಿರುವ ತಂತ್ರಜ್ಞಾನವನ್ನು ನಾವು ಇಂದಿನ ಜೀವನದಲ್ಲಿ ಅಳವಡಿಸಿ ಕೊಂಡಿದ್ದಯಾದರೆ ನಮ್ಮ ಆರ್ಥಿಕ ಬೊಕ್ಕಸವನ್ನು ಬರಿದು ಮಾಡದೇ ಇರಬಹುದು ಹಾಗೂ ಪರಿಸರವನ್ನು ರಕ್ಷಿಸಿಕೊಳ್ಳಬಹುದು ಎಂದು ದೃಢವಾಗಿ ಹೇಳಬಹುದು.

ಪ್ರಸ್ತುತ ಈ ಸಂಪ್ರಬಂಧದಲ್ಲಿ ನವಲಗುಂದ ತಾಲೂಕಿನ ಪ್ರಾಚೀನ ಕೆರೆಗಳನ್ನು ಪುನರ ಪರಿಶೀಲಸಿ ಇಂದಿಗೂ ಅವುಗಳ ಅಸ್ತಿತ್ವವನ್ನು ಮತ್ತು ಪ್ರಯೋಜನವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಅನುಬಂಧಗಳು

ಗ್ರಂಥಋಣ

- ನಕ್ಷೆಗಳು
- ಛಾಯಾಚಿತ್ರಗಳು

ಗ್ರಂಥಋಣ

➢ ಎಂ.ಎಂ. ಕಲಬುರ್ಗಿ, ಕರ್ನಾಟಕದ ಕೈಫಿಯತ್ತುಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ-೧೯೯೪.

➢ ದೇವಕೊಂಡಾರೆಡ್ಡಿ (ಸಂ) ಹಂಪಿ ಸಂಪುಟ, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ-೨೦೦೬.

➢ ಸೂರ್ಯನಾಥ್ ಕಾಮತ್, (ಸಂ) ಕರ್ನಾಟಕ ರಾಜ್ಯ ಗಜೇಟಿಯರ, ಭಾಗ-೩ ಕರ್ನಾಟಕ ರಾಜ್ಯ ಸರಕಾರ ಬೆಂಗಳೂರು-೧೯೮೬.

➢ ಕೊಟ್ರಯ್ಯ ಸಿ.ಟಿ.ಎಂ. (ಆಂಗ್ಲ ಮೂಲ) ಧ್ರುವನಾರಾಯಣ (ಕನ್ನಡ ಅನುವಾದ), ವಿಜಯ ನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ, ಕನ್ನಡ ವಿಶ್ವ ವಿದ್ಯಾಲಯ ಹಂಪಿ - ೨೦೦೧.

➢ ಕನ್ನಡ ವಿಶ್ವಕೋಶ, ಕರ್ನಾಟಕ (ಪರಿಷ್ಕೃತ) ಸಂಪುಟ-೧ ಮತ್ತು ೨ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ ಮೈಸೂರು-೨೦೦೫.

➢ ಕೃಷ್ಣಮೂರ್ತಿ ಪಿ.ವಿ. (ಲೇಖನ) ಇತಿಹಾಸ ದರ್ಶನ ಸಂಪುಟ-೧೬ ಕರ್ನಾಟಕ ಇತಿಹಾಸ ಅಕಾಡಮಿ ಬೆಂಗಳೂರು - ೨೦೦೧.

➢ ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು ವಿಶ್ವವಿದ್ಯಾಲಯ ಮೈಸೂರು-೧೯೭೯.

➢ ದೀಕ್ಷಿತ ಜಿ.ಎಸ್. (ಲೇಖನ ಇತಿಹಾಸ ದರ್ಶನ ಸಂಪುಟ-೨ ಕರ್ನಾಟಕ ಇತಿಹಾಸ ಅಕಾಡಮಿ ಬೆಂಗಳೂರು-೧೯೯೨.

➢ ದೀಕ್ಷಿತ ಜಿ.ಎಸ್. ಕುಪ್ಪುಸ್ವಾಮಿ ಜಿ.ಆರ್. ಮೋಹನ ಎಸ್.ಕೆ. (ಮೂಲ) ನೀಲತ್ತಹಳ್ಳಿ ಕಸ್ತೂರಿ (ಕನ್ನಡ ಅನುವಾದ), ಕರ್ನಾಟಕದಲ್ಲಿ ಕೆರೆ ನೀರಾವರಿ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ-೨೦೦೦.

➢ ನಾಗಯ್ಯ ಜಿ.ಎಮ್., ಆರನೇ ವಿಕ್ರಮಾದಿತ್ಯನ ಶಾಸನಗಳ ಒಂದು ಅಧ್ಯಯನ, ವೀರಶೈವ ಅಕಾಡೆಮಿ ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ-೧೯೯೨.

- ನಾಗಭೂಷನ ಗುಬ್ಬಿ ಒಂದು ಸಾಂಸ್ಕೃತಿಕ ದರ್ಶನ ಸಿರಿಗನ್ನಡ ಪ್ರಕಾಶನ ಬೆಂಗಳೂರು–೧೯೯೧.
- ಪಾಟೀಲ ಎಂ.ಬಿ. (ಲೇಖನ), ಇತಿಹಾಸ ದರ್ಶನ ಸಂಪುಟ–೫ ಕರ್ನಾಟಕ ಇತಿಹಾಸ ಅಕಾಡಮಿ ಬೆಂಗಳೂರು–೧೯೮೪.
- ಬೋರಲಿಂಗಯ್ಯ ಹಿ.ಚಿ (ಸಂ), ಕರ್ನಾಟಕ ಜನಪದ ಕಲೆಗಳ ಕೋಶ ಕನ್ನಡ ವಿಶ್ವವಿದ್ಯಾಲಯ ಹಂಪಿ – ೧೯೯೬.
- ಮಹದೇವ ಸಿ. ಸುಬ್ಬಣ್ಣ ರೈ ಮತ್ತು ಮಾಧವ ಪೆರಾಜೆ, ಹೊಸಪೇಟೆ ತಾಲೂಕು ದರ್ಶನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ–೨೦೦೨.
- ರಮೇಶ ಸ.ಚಿ., ನೀರು ಒಂದು ಜಾನಪದ ನೋಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ–೨೦೦೫.
- ರಾಜಾರಾಮ ಹೆಗಡೆ (ಸಂ), ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೨.
- ವಾಸುದೇವನ್ ಸಿ.ಎಸ್. ಹಂಪಿ ಪರಿಸರದ ಕೆರೆಗಳು : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೧.
- ವಿರೇಂದ್ರ ಶೀಲವಂತ, ಕೃಷಿ ಆಚರಣೆಗಳು, ಮಂಟಪಮಾಲೆ –೧೭೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೧೦.
- ಶಿವತಾರಕ್ ಕೆ.ಬಿ., ಕರ್ನಾಟಕ ಪುರಾತತ್ವ ನೆಲೆಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೧.
- ಸುಭಾಷ ಪಾಳೆಗಾಲ ಶಂಕರಣ ದೊಡ್ಡಣ್ಣನವರ ನೈಸರ್ಗಿಕ ಕೃಷಿ, ಕೀರ್ತಿ ಪ್ರಕಾಶನ ಗದಗ.
- ಸೂರ್ಯನಾಥ ಕಾಮತ್, ಕರ್ನಾಟಕ ರಾಜ್ಯ ಗ್ಯಾಜಿಟಿಯರ್ ಭಾಗ–೧, ಬೆಂಗಳೂರ–೧೯೯೬.
- ಸಂಗಪ್ಪ ಚನ್ನಪ್ಪಾ ಕುಬಸದ, ನೀರಾವರಿ, ಆನಂದ ಪಬ್ಲಿಕೇಷನ್, ಧಾರವಾಡ ೧೯೮೨.
- ಸಂಪದ್ಗಿರಿರಾವ ಕೆ. (ಸಂ), ಕರ್ನಾಟಕ ಪರಂಪರೆ (ಪ್ರಾಗಿತಿಹಾಸ ಕಾಲದಿಂದ ವಿಜಯನಗರ ಸಾಮ್ರಾಜ್ಯ) ಸಂಪುಟ ೧, ಕನ್ನಡ & ಸಂಸ್ಕೃತಿ ಇಲಾಖೆ, ಬೆಂಗಳೂರು ೧೯೯೬,

➢ ಡಾ. ಕೆ. ಅನಂತರಾ, ಅಜಾತ ನಾಗಲಿಂಗ ಸ್ವಾಮಿ, ಜೀವನ ಚರಿತ್ರೆ, ಶ್ರೀ ನಾಗಲಿಂಗ ಸ್ವಾಮಿ ಗ್ರಂಥಮಾಲೆ, ಶ್ರೀ. ನಾಗಲಿಂಗ ಸ್ವಾಮಿ ಮಠ, ನವಲಗುಂದ–೨೦೧೨.

➢ ನ. ರವಿಕುಮಾರ, ಆಯ್ದ ವಿಮರ್ಶೆ, ಧರಣಿ ಪೆಂಟಿಗ್ಸ್ ಬೆಂಗಳೂರು – ೨೦೧೫.

➢ ಧಾರವಾಡ ಜಿಲ್ಲಾ ಅಂಕಿ ಅಂಶಗಳ ನೋಟ ಕರ್ನಾಟಕ ಸರಕಾರ – ೨೦೧೩–೧೪.

➢ ಸೂರ್ಯನಾಥ ಕಾಮತ್, ಧಾರವಾಡ ಜಿಲ್ಲಾ ಗ್ಯಾಜೆಟಿಯರ್, ಧಾರವಾಡ–೧೯೯೫.

➢ ನವಲಗುಂದ ತಾಲೂಕಿನಲ್ಲಿ ಬರುವ ಕೆರೆಗಳ ವಿವರ ಪಟ್ಟಿ ತಾಲೂಕ ಕಚೇರಿ ನವಲಗುಂದ – ೨೦೧೪.

➢ ಡಾ॥ ಕೆ. ರಂಗನಾಥ, ಪ್ರಾಕೃತಿಕ ಭೂಗೋಳಶಾಸ್ತ್ರ, ಬೆಂಗಳೂರು–೦೧–೨೦೦೨.

ಅಪ್ರಕಟಿತ ಸಂಶೋಧನಾ ಪ್ರಬಂಧಗಳು :

➢ ಜಯಮ್ಮ, ಧಾರವಾಡ ಜಿಲ್ಲೆಯ ಪುರಾತತ್ವ, ಪಿಎಚ್.ಡಿ ಮಹಾ ಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೨೦೦೮.

➢ ಉಮಾದೇವಿ ಮ. ಹಂಚಿನಮನಿ, ಜಮಖಂಡಿಯ ಕೆರೆಗಳು, ಕನ್ನಡ ವಿಶ್ವ ವಿದ್ಯಾಲಯ ಹಂಪಿ–೨೦೦೩.


➢ ಆನಂದಕುಮಾರ ಪಿ.ಎನ್., ಮಂಡ್ಯ ಜಿಲ್ಲೆಯ ಕೆರೆ ನೀರಾವರಿ ಪದ್ಧತಿ ಒಂದು ಚಾರಿತ್ರಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿ–೨೦೦೮.

➢ ಸಿ. ಧನಂಜಯ, ಪಾವಗಡ ತಾಲೂಕಿನ ಕೆರೆಗಳು, ಎಂ.ಫಿಲ್ ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ – ೨೦೦೯.

➢ ಯಲ್ಲಣ್ಣ ಕೆ., ನವಲಗುಂದ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ – ೨೦೦೮.


ವ್ಯಕ್ತಿಗಳ ವಿವರ


ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಊರು
೧	ನಭಿಸಾಬ	೪೮	ವ್ಯಾಪಾರ	ನವಲಗುಂದ
೨	ಕುಮಾರ ಪಾಟೀಲ	೩೫	ವ್ಯಾಪಾರ	ನವಲಗುಂದ
೩	ಸುಂಕದ	೬೫	ಪತ್ರಕರ್ತ	ನವಲಗುಂದ
೪	ಫಕ್ಕೀರಪ್ಪ	೪೭	ವ್ಯವಸಾಯ	
೫	ಭಾಗಿ	೪೦	ಶಿಕ್ಷಕರು	ನವಲಗುಂದ
೬	ಹನುಮಂತಪ್ಪಾ	೬೦	ವ್ಯವಸಾಯ	ಹಳ್ಳಿಕೇರಿ
೭	ಕಾಶೇನ್ನವರ	೫೫	ವ್ಯವಸಾಯ	ಹೆಬ್ಬಾಳ
೮	ಕೊಪ್ಪದ	೪೦	ಪತ್ರಕರ್ತ	ಕೊಂಡಿಕೊಪ್ಪ
೯	ಕಾಡಿಹಾಳ	೩೫	ವ್ಯಾಪಾರಿ	ಇಬ್ರಾಹಿಂಪುರ
೧೦	ಪಿಂಜಾರ	೩೮	ವ್ಯಾಪಾರಿ	ಕಿತ್ತೂರ
೧೧	ಗುಳಗುಂಡಿ	೪೩	ವಾಚಮನ್	ಅಣ್ಣಿಗೇರಿ
೧೨	ರಾಜಾಸಾಹೇಬ	೪೬	ವಾಲಮನ್	ಪಡೆಸೂರ
೧೩	ಫೀರಸಾಬ	೩೦	ಗೇಟಮನ್	ಅರೆಕುರಹಟ್ಟಿ
೧೪	ಮುಶನ್ನವರ	೪೨	ವ್ಯವಸಾಯ	ಶಾನವಾಡ
೧೫	ಹಶೇಮನಿ	೫೫	ಎಫ್.ಡಿ.ಎ. ಅಧಿಕಾರಿ	ನವಲಗುಂದ
೧೬	ರಾಮಪ್ಪ	೬೨	ವ್ಯವಸಾಯ	ನಾಗನೂರ
೧೭	ಶೇಖಪ್ಪ	೫೮	ವ್ಯವಸಾಯ	ದಾಟನಾಳ
೧೮	ರುದ್ರಮ್ಮಾ	೩೫	ಪುಸ್ತಕ ಮಾರಾಟಗಾರರು	ಕಡದಳ್ಳಿ
೧೯	ಗೋಂದಿ	೪೦	ವ್ಯಾಪಾರಿ	ಅಳಗವಾಡಿ
೨೦	ಛಲವಾದಿ	೩೭	ಶಿಕ್ಷಕರು	ಬೆಳವಟಗಿ


Jammu and Kashmir
Pakistan
Himachal Pradesh
Punjab
China
Uttarakhand
Haryana
Arunachal Pradesh
Nepal
Bhutan
Sikkim
Rajasthan
Uttar Pradesh
Assam
Nagaland
Meghalaya
Bihar
Manipur
Bangladesh
Gujarat
Jharkhand
Tripu
Mizoram
West Bengal
Madhya Pradesh
Chhattisgarh
Orissa
Maharashtra
Andhra Pradesh
Arabian Sea
Go
Karnataka
Bay of Bengal
Tamil Nadu
Kerala
Sri
Lanka

KARNATAKA


N
W
E
S
Bidar
Gulbarga
Bijapur
Raichur
Bagalkot
Belgaum
Koppal
Dharwad
Gadag
Bellary
Uttara
Kannada
Haveri
Davanagere
T
Shimoga
Chitradurga
Kolar
Udupi
Chikmagalur
Tumkur
Bangalore
Hassan
Dakshina
Kannada
Mandya
Bangalore Rural
Kodagu
Mysore
Chamarajanagar


DHARWAD DISTRICT MAP
N
W
E
S
0
5
10
kilometers
NRMDS CENTRE,
ZP,DHARWAD.
LEGEND
TALUKA BOUNDARY
TALUKA REGION


ROAD NETWORK MAP
NAVALGUND TALUK
BELGUAM DISTRICT
DHARWAD TALUK
HUBLI TALUK
GADAG DISTRICT
0
5
10
KILOMETRES
LEGEND
TALUK BND
VILLAGE BND
STATE HIGHWAY
NATIONAL HIGHWAY
RAILWAY LINE
MAJOR DISTRICT ROAD
RIVER/ TANK

ಛಾಯಾಚಿತ್ರಗಳು



ನೀಲಮ್ಮನ ಕೆರೆಯ ಪ್ರವೇಶದ್ವಾರ, ನವಲಗುಂದ



ಕೆರೆಯ ಒಡ್ಡಿನ ಒಳಭಾಗ, ನವಲಗುಂದ



ಕೆರೆಯ ಮೇಲಿರುವ ಬಸವಣ್ಣನ ದೇವಾಲಯ, ನವಲಗುಂದ



ಕೆರೆಯ ಇನ್ನೊಂದು ಬದಿಯಲ್ಲಿರುವ ನೀಲಮ್ಮನ ಮೂರ್ತಿ



ಅಣ್ಣಿಗೇರಿಯ ಕೆರೆ



ನೀರೆತ್ತುವ ಯಂತ್ರಗಳು, ಅಣ್ಣಿಗೇರಿ



ಭೂಮಿಯ ಅಂತರಾಳದಲ್ಲಿರುವ ಜಲಾಗಾರ, ಅಣ್ಣಿಗೇರಿ



ನೀರು ಶುದ್ಧಿಕರಣ ಕೇಂದ್ರ, ಅಣ್ಣಿಗೇರಿ



ನೀರು ಶುದ್ಧೀಕರಣ ಕೇಂದ್ರ, ಅಣ್ಣಿಗೇರಿ



ನೀರು ಶುದ್ಧೀಕರಣ ಕೇಂದ್ರ, ಅಣ್ಣಿಗೇರಿ



ನೀರು ಶುದ್ಧೀಕರಣ ಸರಬರಾಜು ಯಂತ್ರಗಳು




ನೀರು ಶೇಖರಣಾ ತೊಟ್ಟಿ



ಅಮೃತೇಶ್ವರ ದೇವಾಲಯ, ಅಣ್ಣಿಗೇರಿ



ಹೆಬಸೂರು ಕೆರೆ



ಕೆರೆಯ ಪ್ರವೇಶದಲ್ಲಿ ಇರುವ ಶಾಸನ ಫಲಕ



ನೀರಳತೆ ಗೋಲು, ಹೆಬಸೂರು



ತೂಗು ರಚನೆ, ಹೆಬಸೂರು



ದುರಸ್ಥಿಯಲ್ಲಿರುವ ದಾಟನಾಳ ಕೆರೆ



ಕೆರೆಯಲ್ಲಿಡುವ ನೀರು ಶುದ್ಧೀಕರಣ ಯಂತ್ರ



ಕೆರೆಗೆ ಸರಬರಾಜು ಮಾಡುವ ಕಾಲುವೆ



ಕೆರೆಯ ಕೋಡಿ



ನೀರು ಸರಬರಾಜು ಮತ್ತು ಶೇಖರಣಾ ತೊಟ್ಟಿಗಳು



ಕಾಲುವೆ ಮೂಲಕ ನೀರು ಬರುವ ಕೊಳವೆ



ನೀರು ಸಾಗಿಸುವ ನೀರು ಗಾಡಿಗಳು




ನೀರು ಸಾಗಿಸುವ ನೀರು ಗಾಡಿ



ಸಿಮೆಂಟಿನಿಂದ ನಿರ್ಮಾಣವಾದ ತೂಬು



ಕಲ್ಲಿನಿಂದ ನಿರ್ಮಾಣವಾದ ಒಡ್ಡಿನ ಒಳಭಾಗ



ಇಬ್ರಾಹಿಂಪುರ ಕೆರೆ



ಕೆರೆಯ ತೂಬು



ಕೆರೆಯ ತೂಬು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ